೧೦ ಆಣೆ • ಮಲ್ಲಾರಿ

ಚಿತ್ರ

✻

ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರ ಕತೆಗಳು

ಮಲ್ಲಾರಿ

ಮುದ್ರಕ :
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣಾಲಯ
ಧಾರವಾಡ

ಮಾರಾಟದ ಸರ್ವಾಧಿಕಾರಿಗಳು :
ಮನೋಹರ ಗ್ರಂಥ ಭಾಂಡಾರ
ಧಾರವಾಡ

ಪ್ರಕಾಶಕ :
ಮೋವುಂಡಿ ಮಲ್ಲಾರಿ
ಶುಕ್ರವಾರಪೇಟೆ
ಧಾರವಾಡ

ನೆನಕೆ

ಕನಸಿನೊಳಗಿನ ಎಣಿಕೆ ಈ ಹೊತ್ತಗೆಯಾಗಿ ಮೈಗೊಂಡು ಬರುವುದೆಂದು ಯಾರಿಗೆ ಗೊತ್ತಿತ್ತು? ನಾನು ಬಂಗಾಲಿ ಭಾಷೆಯನ್ನು ಅಭ್ಯಾಸಿಸುತ್ತ, ನನ್ನ ಮೆಚ್ಚಿನ ಶರಚ್ಚಂದ್ರನ ಕತೆಗಳನ್ನು ಓದುತ್ತ, ಈ ಕತೆಗಳನ್ನು ಅನುವಾದಿಸಿಟ್ಟಿದ್ದೆ. ನನ್ನ ಒಳಬಳಿಯ ಗೆಳೆಯರು ಇವನ್ನು ಓದಿದರು. ಬೆಳಕಿಗೆ ಬರಲಿ ಎಂದು ಹಾರಯಿಸಿದರು. ಅವರೆಲ್ಲರ ಬೆಂಬಲದಿಂದ ನನ್ನ ಕೆಲಸ ಜನರ ಕಣ್ಣಿಗೆ ಕಾಣುವಂತಾಯಿತು.

ಅಲ್ಲಲ್ಲಿ ಪತ್ರಿಕೆಗಳಲ್ಲಿ ಕಂಡು ಕಾಣೆಯಾಗಿರುವ, ಮನೆಯಲ್ಲಿ ಕಾಣದೆ ಅಡಗಿರುವ ನನ್ನ ಕೆಲ ಕತೆ ಕವನಗಳನ್ನು ಕೂಡಿ ಹಾಕಿ ಪ್ರಕಟಗೊಳಿಸಬೇಕೆಂದು ಗೆಳೆಯರು ಬಯಸಿದ್ದಾರೆ. ಅವರ ಒಲವಿನಿಂದ ಈಗಿನಂತಹ ಕಾಡುವ ಕಾಲದಲ್ಲಿಯೂ ಒಂದೆರಡು ಚಿಕ್ಕ ಹೊತ್ತಗೆಗಳು ಹೊರಬೀಳಬಹುದು.

೭—೩—೧೯೪೨ ಮಲ್ಲಾರಿ

ಮುಂದಿನ ಹೊತ್ತಗೆ

ಬೆಳಕಿನ ಕತ್ತಲೆ

(ಕತೆಗಳ ಸೂಡು)

ಬೆಲೆ ೦-೧೨-೦

ಚಿತ್ರ

೧

ಆಗಿನ್ನೂ ಬ್ರಹ್ಮದೇಶವು ಇಂಗ್ಲಿಷರ ಕೈಗೆ ಹೋಗಿರಲಿಲ್ಲ. ಆಗಿನ್ನೂ ಅದಕ್ಕೆ ತನ್ನ ರಾಜರಾಣಿಯರಿದ್ದರು ; ಮಂತ್ರಿತಂತ್ರಿಗಳಿದ್ದರು ; ಸೈನ್ಯಸಾಮಂತರಿದ್ದರು. ಆಗ ಅವರು ತಮ್ಮ ದೇಶವನ್ನು ತಾವೇ ಆಳುತ್ತಿದ್ದರು. ಆಗ ಈ ಕತೆ ನಡೆಯಿತು.

ಮಾಂಡಾಲೆ ಅದರ ರಾಜಧಾನಿ. ಆದರೆ ಅರಸುಮನೆತನದ ಕೆಲವು ಜನರು, ರಾಜಧಾನಿಯನ್ನು ಬಿಟ್ಟು ದೇಶದ ಬೇರೆ ಬೇರೆ ಊರುಗಳಲ್ಲಿ ಹೋಗಿ ನೆಲಸಿದ್ದರು. ಹೀಗೆಯೆ ಒಬ್ಬಾನೊಬ್ಬನು ಬಹಳ ದಿನಗಳ ಹಿಂದೆ, ಪೇಗುವಿನ ದಕ್ಷಿಣಕ್ಕೆ ಐದಾರು ಹರದಾರಿ ದೂರದಲ್ಲಿದ್ದ ಇಮೇದಿನವೆಂಬ ಊರೊಳಗೆ ಹೋಗಿ ಇರತೊಡಗಿದಂತೆ ತೋರುತ್ತದೆ. ಅಲ್ಲಿ ಆತನ ಒಂದು ಭವ್ಯವಾದ ವಾಡೆ ಇತ್ತು; ಅದರ ಸುತ್ತ ಪ್ರಚಂಡವಾದ ತೋಟವಿತ್ತು; ಮನೆಯಲ್ಲಿ ವಿಪುಲವಾಗಿ ನಗನಾಣ್ಯಗಳಿದ್ದವು; ಮಹಾ ಜಮೀನುದಾರಿಯಿತ್ತು.

ಇವೆಲ್ಲವುಗಳ ಒಡೆಯನಾದ ಆತನಿಗೆ ಒಂದು ದಿನ ತನ್ನ ಕೊನೆಗಾಲ ಸಮೀಪಿಸಿದಂತೆ ಎನಿಸಿತು. ಆಗವನು ತನ್ನ ಗೆಳೆಯನನ್ನು ಕರೆದು ಹೇಳಿದ: "ಬಾ-ಕೋ, ನನ್ನಿಚ್ಛೆಯಿದ್ದಿತು: ನಿನ್ನ ಮಗನಿಗೆ ನನ್ನ ಮಗಳನ್ನು ಮದುವೆ ಮಾಡಿಕೊಡಬೇಕು, ಎಂತ. ಆದರೆ ಆ ಸಮಯ ಒದಗಿಬರಲಿಲ್ಲ. ಮಾ-ಶೋಯೆಯನ್ನು ಬಿಟ್ಟು ಹೊರಟೆ. ಅವಳನ್ನು ನೀನು ನೋಡಿಕೊ."

ಈ ಸಂಭಾಷಣೆಯ ಪ್ರಯೋಜನವನ್ನೇನೂ ಬಾ-ಕೋನ ಕಣ್ಣು ಕಾಣಲಿಲ್ಲ. ಬಾ-ಕೋ ಅವನ ಬಾಲ್ಯದ ಸ್ನೇಹಿತ. ಒಂದು ಕಾಲದಲ್ಲಿ ಅವನೂ ಒಳ್ಳೆಯ ಸ್ಥಿತಿವಂತನಾಗಿದ್ದವನು. ಅವನ ಹತ್ತಿರವೂ ಬಹಳ ಧನಸಂಪತ್ತಿಯಿದ್ದಿತು. ಈಗ ಅದೆಲ್ಲವೂ ಅವನ ಕೈಬಿಟ್ಟಿದೆ, ಆಸ್ತಿಯೆಲ್ಲ ಸಾಲಕ್ಕೆ ಅಡವಾಗಿದೆ,—ಬರೀ ಧರ್ಮಮಂದಿರಗಳನ್ನು ಕಟ್ಟಿಸಿ ಕಟ್ಟಿಸಿ, ಭಿಕ್ಷುಗಳಿಗೆ ಭೋಜನ ಮಾಡಿಸಿ ಮಾಡಿಸಿ. ಆದರೂ ಇಂತಹ ಮನುಷ್ಯನಿಗೆ, ತನ್ನ ಸರ್ವಸ್ವಸಹಿತವಾಗಿ ಒಬ್ಬಳೇ ಒಬ್ಬಳಾದ ಮಗಳನ್ನು ಒಪ್ಪಿಸಿಕೊಡಲು ಅವನಿಗೆ ಅಂಜಿಕೆ-ಅಡ್ಡಿ ತೋರಲಿಲ್ಲ. ಹೊತ್ತಿಗೆ ಮಿತ್ರನೊಬ್ಬನು ದೊರೆತನಲ್ಲ, ಅದೇ ಅವನಿಗೊಂದು ದೊಡ್ಡ ಸುಯೋಗವಾಗಿದ್ದಿತು. ಆದರೆ ಇದನ್ನು ಹೆಚ್ಚು ಕಾಲ ವಹಿಸಿಕೊಳ್ಳುವುದೇ ಬಾ-ಕೋನ ದೈವದಲ್ಲಿ ಬರೆದಿರಲಿಲ್ಲ. ಇನ್ನೂ ವರುಷ ಕೂಡ ತಿರುಗಿರಲಿಲ್ಲ, ಅವನಿಗೂ ಆ ಕಡೆಯ ಶಮನು ಬಂದು ತಲುಪಿತು. ಅವನೂ ಆ ಮೀರಲಾರದ 'ಆಜ್ಞೆಯನಾಂತು ನಿಜಶಿರದೆ' ಗೊತ್ತಿಲ್ಲದ ಆ ಪರಸ್ಥಳಕ್ಕೆ ಹೊರಟುಹೋದ— ಇದ್ದ ಕೆಲಸ ಇದ್ದಲ್ಲಿಯೇ ಬಿಟ್ಟುಕೊಟ್ಟು!

ಈ ಧರ್ಮಪ್ರಾಣ ದರಿದ್ರ ಮನುಷ್ಯನ ಮೇಲೆ ಊರ ಜನರದು ಅದೆಷ್ಟು ಪ್ರೀತಿ, ಅದೆಷ್ಟು ಭಕ್ತಿ-ವಿಶ್ವಾಸ; ಅವರು ಅವನ ಮೃತ್ಯುತ್ಸವವನ್ನು ಅಷ್ಟೊಂದು ಪ್ರಚಂಡ ಆಡಂಬರದಿಂದ ಜರಗಿಸಿದರು. ಹೂ-ಗಂಧಾದಿಗಳಿಂದ ಬಾಕೋನ ಹೆಣವನ್ನು ಚೆಂದಮಾಡಿ, ಪಲ್ಲಕ್ಕಿಯಲ್ಲಿ ಮಲಗಿಸಿದರು. ಹಗಲೂ ಇರುಳೂ ತೆರಪಿಲ್ಲದೆ ಪ್ರವಾಹ ಹರಿ

ದಂತೆ ನಡೆದೇ ಇದ್ದವು— ಆಟಪಾಟಗಳು, ಹಾಡು-ಕುಣಿತಗಳು, ಆಹಾರ-ವಿಹಾರಗಳು ಇತ್ಯಾದಿ. ಬಹುಶಃ ಅವರ ಆಶೆಗಳು ಯಾವುವೂ ಬಾಕಿ ಉಳಿದಿರಲಿಕ್ಕಿಲ್ಲ.

ತಂದೆ ಸತ್ತ ದುಃಖದ ಈ ಉತ್ಕಟ ಆನಂದವನ್ನು ಸೈರಿಸಲಾರದೆ, ಬಾ-ಕೋ ಅಲ್ಲಿಂದ ಕಾಲ್ತೆಗೆದು ಯಾರೂ ಇಲ್ಲದ ಕಡೆಯಲ್ಲಿ ಒಬ್ಬನೇ ಕ್ಷಣ ಹೊತ್ತು ಅಳುತ್ತ ಕುಳಿತಿದ್ದ. ಅಷ್ಟರಲ್ಲಿ ಬೆಚ್ಚಿಬಿದ್ದು ತಿರುಗಿ ನೋಡಿದ. ಮಾ-ಶೋಯೆ ಆತನ ಹಿಂದೆ ಬಂದು ನಿಂತಿದ್ದಾಳೆ. ಅವಳು ಹತ್ತಿರಕ್ಕೆ ಬಂದು, ಏನೂ ಮಾತಾಡದೆ ಆತನ ಕಣ್ಣುಗಳನ್ನು ಒರಸಿದಳು. ಮತ್ತು ಬದಿಯಲ್ಲಿ ಬಂದು ಕುಳಿತು ಆತನ ಬಲಗೈಯನ್ನು ತನ್ನ ಕೈಯೊಳಗೆ ತೆಗೆದುಕೊಂಡು, ಧ್ವನಿಯಿಲ್ಲದ ಮಾತುಗಳನ್ನಾಡಿದಳು: 'ಅಪ್ಪ ಸತ್ತ, ಆದರೆ ನಿನ್ನ ಮಾ-ಶೋಯೆ ಇನ್ನೂ ಬದುಕಿದ್ದಾಳೆ.'

೨

ಬಾ-ಥಿನನು ಚಿತ್ರವನ್ನು ಬರೆಯುತ್ತಿದ್ದ. ಇದರ ಹಿಂದಿನ ಚಿತ್ರವೊಂದನ್ನು ಒಬ್ಬ ವ್ಯಾಪಾರಿಗೆ ಕೊಟ್ಟು ರಾಜನ ಕಡೆಗೆ ಕಳುಹಿದ್ದ. ರಾಜನು ಅದನ್ನು ಮನಸಾರೆ ಮೆಚ್ಚಿ ಅಂಗೀಕರಿಸಿದ್ದಾನೆ. ತನ್ನ ಹರಳುಂಗುರವನ್ನು ಇವನಿಗೆ ಮೆಚ್ಚು ಕೊಟ್ಟಿದ್ದಾನೆ.

ಆನಂದದಿಂದ ಮಾ-ಶೋಯೆಯ ಕಣ್ಣುಗಳಲ್ಲಿ ನೀರಾಡಿತು. ಅವಳು ಆತನ ಪಕ್ಕದಲ್ಲಿ ನಿಂತು ಮೆಲುದನಿಯಿಂದ ನುಡಿದಳು: "ಬಾ-ಥಿನ, ಜಗತ್ತಿನಲ್ಲಿ ಎಲ್ಲಕ್ಕೂ ಮೇಲಾದ ಚಿತ್ರಕಾರನಾಗುತ್ತೀ ನೀನು."

ಬಾ-ಥಿನನು ನಕ್ಕು " ತಂದೆಯ ಸಾಲವನ್ನೆಲ್ಲ ಹರಿಯುಬಹುದು ಎಂತ ಎನಿಸುತ್ತದೆ " ಎಂದ.

ಈಗ ತನ್ನ ತಂದೆಯ ಉತ್ತರಾಧಿಕಾರಿಯಾಗಿ ಬಂದಿದ್ದ ಮಾ-ಶೋಯೆಯೊಬ್ಬಳೇ ಅವನ ಸಾಹುಕಾರ್ತಿ. ಅದಕ್ಕೇ ಈ ನ್ಯಾತಿನಿಂದ

ಅವಳಿಗೆ— ಎಲ್ಲಕ್ಕಿಂತ ಹೆಚ್ಚಾಗಿ— ನಾಚಿಕೆಯಾಯಿತು. " ಹಗಲೆಲ್ಲ ಹೀಗೆ ನೀನು ಕೊಕ್ಕೆ ಮಾತಾಡುತ್ತಿದ್ದರೆ, ನಾನಿನ್ನು ನಿನ್ನ ಕಡೆಗೇ ಬರುವುದಿಲ್ಲ, ನೋಡು " ಎಂದು ಅವಳೆಂದಳು.

ಬಾ-ಥಿನನು ಅದಕ್ಕೆ ಮಾತಾಡಲೇ ಇಲ್ಲ. ಆದರೆ, ಸಾಲದ ಹೊರೆಯಿಂದ ತಂದೆಯು ಬಿಡುಗಡೆಯಾಗಿಲ್ಲ ಎಂಬುದು ಅವನಿಗೆ ಮನಸ್ಸಿನಲ್ಲಿ ಒಳ್ಳೇ ಕಟೆಯುತ್ತಿತ್ತು. ಅದು ಪುನಃ ನೆನಪಾಗುತ್ತಲೇ ಅವನ ಅಂತರಂಗವೆಲ್ಲ ಪುಲಕಿತವಾಯಿತು.

ಬಾ-ಥಿನನ ದುಡಿಮೆ ಈಗೀಗ ಬಹಳ ಹೆಚ್ಚಿದೆ. ಜಾತಕದೊಳಗಿನ ಒಂದು ಹೊಸ ಚಿತ್ರವನ್ನು ಅವನೀಗ ತೆಗೆಯುತ್ತಾ ಇದ್ದ. ಇಂದು ಇಡೀ ದಿನ ಅವನು ಮೋರೆ ಎತ್ತಿ ನೋಡಿಲ್ಲ.

ಮಾ-ಶೋಯೆ ಅವನ ಮನೆಗೆ ದಿನಾಲು ಬರುವುದು ವಾಡಿಕೆ. ಹಾಗೆ ಇಂದೂ ಬಂದಿದ್ದಳು. ಬಾ-ಥಿನನ ಮಲಗುವ ಕೋಣೆ, ಕುಳಿತುಕೊಳ್ಳುವ ಕೋಣೆ, ಚಿತ್ರ ತೆಗೆಯುವ ಕೋಣೆ ಇವೆಲ್ಲವನ್ನೂ ತಾನೇ ತನ್ನ ಕೈಯಾರೆ ಜಳಜಳ ಮಾಡಿ, ಒಡವೆಗಳನ್ನೆಲ್ಲ ಅಲ್ಲಲ್ಲಿ ಓರಣಿಸಿ, ಒಪ್ಪವಾಗಿಡಬೇಕೆಂಬುದು ಆಕೆಯ ಬಯಕೆ. ಈ ಕೆಲಸವನ್ನು ಆಳುಹೋಳುಗಳಿಗೆ ಒಪ್ಪಿಸಲು ಅವಳಿಗೆಷ್ಟು ಮನಸಿರಲಿಲ್ಲ.

ಒಳಗೆ ಹೋದ ಕೂಡಲೆ ಇದಿರಿಗೆ ಒಂದು ಕನ್ನಡಿ ಇದ್ದಿತು. ಅದು ಬಾ-ಥಿನನ ರೂಪನ್ನು ಪಡಿಮೂಡಿಸಿತ್ತು. ಮಾ-ಶೋಯೆ ಎಷ್ಟೋ ಹೊತ್ತು ನಟ್ಟನೋಟದಿಂದ ಅದನ್ನು ನೋಡುತ್ತಲಿದ್ದು, ಒಮ್ಮೆಲೆ ಉಸಿರ್ಗರೆದು ಎಂದಳು: " ಬಾ-ಥಿನ, ನೀನು ನನ್ನಂತೆ ಹೆಣ್ಣುಗಿಣ್ಣಾಗಿದ್ದರೆ, ಈ ದಿವಸಕ್ಕಾಗಲೇ ದೇಶದ ರಾಣಿಯಾಗುತ್ತಿದ್ದೆ."

ಬಾ-ಥಿನನು ಮುಖವನ್ನು ಮೇಲೆತ್ತಿ ನಗೆಯನ್ನು ಬೀರುತ್ತ ಕೇಳಿದ: " ಅದೇಕೆ ? "

" ರಾಜನು ನಿನ್ನನ್ನು ಮೆಚ್ಚಿ ಮದುವೆಯಾಗಿ ಸಿಂಹಾಸನದ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದ. ಅವನಿಗೆ ರಾಣಿಯರು ಹಲವರು. ಆದರೆ ಈ ಬಣ್ಣ, ಈ ತೆರದ ಕೂದಲು, ಇಂತಹ ಮುಖ ಅವರಲ್ಲಿ ಒಬ್ಬರಿಗಾದರೂ ಇರುವುದೇ ? "

ಇಷ್ಟೆಂದು ಅವಳು ಕೆಲಸದಲ್ಲಿ ತೊಡಗಿದಳು. ಆದರೆ ಬಾ-ಥಿನನ ಮನದಲ್ಲಿ ಹೊಳೆಯಿತು: ಮಾಂದಾಲೆಯ ಸಲುವಾಗಿ ತಾನು ಚಿತ್ರಗಳನ್ನು ಬರೆಯತೊಡಗಿದಂದಿನಿಂದ, ಈ ಮಾತು ನಡುನಡುವೆ ತನ್ನ ಕಿವಿಗೆ ಬೀಳುತ್ತಲೇ ಇರುವುದು.

ಆಗ ಅವನು ನಸುನಕ್ಕು "ಆದರೆ, ಚೆಲುವಿಕೆಯನ್ನು ಕದಿಯುವುದಕ್ಕೆ ಹಂಚಿಕೆಯೊಂದೇನಾದರೂ ಇದ್ದಿದ್ದರೆ, ನೀನು ನನ್ನನ್ನು ನೂಕಿಬಿಟ್ಟು, ಇಷ್ಟೊತ್ತಿಗೆ ಅರಸನ ಎಡಗಡೆಯಲ್ಲಿ ಕುಳಿತಿರುತಿದ್ದೆ" ಎಂದ.

ಮಾ-ಶೋಯೆ ಈ ವಾದಕ್ಕೆ ಇದಿರು ವಾದ ಹಾಕಲಿಲ್ಲ. ಬರೀ ತನ್ನೊಳಗೆ ತಾನು ಎಂದುಕೊಂಡಳು — ನೀನು ಹೆಂಗಳೆಯರ ಹಾಗೆ ಅಬಲ, ಹೆಂಗಳೆಯರ ಹಾಗೆ ಕೋಮಲ, ಮತ್ತವರ ಹಾಗೆಯೆ ಚೆಲುವ— ನಿನ್ನ ಚೆಲುವಿಗೆ ಎಲ್ಲೆಯಿಲ್ಲ.

ಈ ರೂಪಕ್ಕಾಗಿಯೆ ಅವಳು ಮನಸಿನಲ್ಲಿ ತನ್ನನ್ನು ತೀರ ಕಿರುಕುಳವಾಗಿ ಕಾಣುತ್ತಿದ್ದಳು.

೩

ಈ ಇವೇದಿನ ಗ್ರಾಮದಲ್ಲಿ ಪ್ರತಿವರುಷ ವಸಂತಾರಂಭದಲ್ಲಿ ಒಳ್ಳೇ ವಿಜೃಂಭಣೆಯಿಂದ ಕುದುರೆಯೋಟದ ಹಬ್ಬ ನಡೆಯುತ್ತದೆ. ಆಮೇಲೆ ಈ ಸಲವೂ ಊರ ಹೊರಗಿನ ಬಯಲಿನಲ್ಲಿ ದೊಡ್ಡ ಜನ ಜಾತ್ರೆ ಕೂಡಿದ್ದಿತು.

ಮಾ-ಶೋಯೆ ಬಾ-ಥಿನನ ಕಡೆಗೆ ಬಂದಳು. ಮೆಲ್ಲಮೆಲ್ಲಗೆ ಹೋಗಿ ಅವನ ಹಿಂದೆ ನಿಂತಳು. ಅವನ ಮನಸು ಚಿತ್ರ ತೆಗೆಯುವುದರಲ್ಲಿಯೇ ಬೆರೆತು ಒಂದಾಗಿದ್ದಿತು. ಅವನಿಗೆ ಆಕೆಯ ಹೆಜ್ಜೆಯ ಸದ್ದು ಕೇಳಿಸಲಿಲ್ಲ.

"ನಾನು ಬಂದಿದ್ದೇನೆ--- ಇಲ್ಲಿ ತಿರುಗಿ ನೋಡು ತುಸು, ಬಾ-ಥಿನ,"ಎಂದಳು ಮಾ-ಶೋಯೆ. ಬಾ-ಥಿನನು ಚಕಿತನಾಗಿ ಹೊರಳಿ ನೋಡಿ, ವಿಸ್ಮಯದಿಂದ ಕೇಳಿದ: "ಏತಕ್ಕೆ ಇಷ್ಟೊಂದು ಸಂಭ್ರಮದ ಸಿದ್ಧತೆ, ಈವೊತ್ತು ?"

"ಸರಿಹೋಯ್ತು; ನಿನಗೆ ಗೊತ್ತಿಲ್ಲವೆ, ಈವೊತ್ತು ನಮ್ಮ ಕುದುರೆಯ ಮೇಲಾಟದ ಹಬ್ಬ? ಈ ದಿನ ಗೆದ್ದವನು ನನಗೆ ಮಾಲೆ ಹಾಕುವನು!"

"ಎಲ್ಲಿ, ಅದೊಂದನ್ನೂ ನಾನು ಕೇಳಲಿಲ್ಲವಲ್ಲ?" ಎನ್ನುತ್ತ ಬಾ-ಥಿನನು ತನ್ನ ಕುಂಚವನ್ನು ಮತ್ತೆ ಕೈಯಲ್ಲಿ ತೆಗೆದುಕೊಂಡು ಬರೆಯಲು ತೊಡಗುವವನು– ಮಾ-ಶೋಯೆ ಅವನ ಕೊರಳಿಗೆ ಕೈಗಳನ್ನು ಸುತ್ತಿ "ಕೇಳಿಲ್ಲದಿದ್ದರೆ ಇಲ್ಲ. ಈಗ ಏಳು ನೀನು; ಇನ್ನೂ ಎಷ್ಟು ಹೊತ್ತು ಕಾಯಲಿ ?" ಎಂದು ನುಡಿದಳು.

ಇವರಿಬ್ಬರೂ ಸುಮಾರು ಓರಗೆಯವರು. ಇದ್ದರೆ ಬಾ-ಥಿನನು ಮೂರು ನಾಲ್ಕು ತಿಂಗಳು ಹಿರಿಯನಿದ್ದಿರಬಹುದು, ಅಷ್ಟೆ. ಆದರೆ ಚಿಕ್ಕಂದಿನಿಂದಲೂ ಅವರು ಇದೇ ಬಗೆಯ ಗೆಳೆತನದಲ್ಲಿ ಈ ಹತ್ತೊಂಬತ್ತು ವರುಷಗಳನ್ನು ಕಳೆದಿದ್ದರು! ಆಟವಾಡುತ್ತಿದ್ದರು, ಜಗಳವಾಡುತಿದ್ದರು; ಹೊಡೆದಾಡುತ್ತಿದ್ದರು—ತಿರುಗಿ ಪ್ರೀತಿಸುತ್ತಿದ್ದರು.

ಎದುರಿಗಿನ ದೊಡ್ಡ ಕನ್ನಡಿಯಲ್ಲಿ ಎರಡು ಮುಖಗಳು, ಎರಡು ಪ್ರಸ್ಫುಟಿತ ಗೋಲಾಪುಗಳಂತೆ ವಿಕಸಿತವಾಗಿದ್ದವು. ಬಾ-ಥಿನನು ತೋರಿಸುತ್ತ ಎಂದ: "ಅಲ್ಲಿ ನೋಡು—"

ಮಾ-ಶೋಯೆ ಎಷ್ಟೋ ಹೊತ್ತು ಆ ಚಿತ್ರಗಳ ಕಡೆ ತಣಿವಿಲ್ಲದ ನೋಟದಿಂದ ನೋಡುತ್ತಲಿದ್ದಳು. ಅಕಸ್ಮಾತ್ತಾಗಿ ಇಂದೇ ಮೊದಲು ಅವಳ ಮನಸಿನಲ್ಲಿ "ಈತನೇ ಹೆಚ್ಚು ಚೆಲುವನವ್ವ" ಎಂದು ಹೊಳೆದು ಹೋಯಿತು. ಆವೇಶದಿಂದ ಅವಳೆರಡು ಕಣ್ಣುಗಳೂ ತುಂಬಿಬಂದವು. ಅವಳು ಬಾ-ಥಿನನ ಕಿವಿಯೊಳಗೆ ಉಸುರಿದಳು: "ನಾನು ಈ ಚಂದ್ರನ ಕಲಂಕ!"

ಬಾ-ಥಿನನು ಅವಳ ಮೊಗವನ್ನು ಇನ್ನೂ ಹತ್ತಿರಕ್ಕೆ ಸೆಳೆದು ಕೊಂಡು “ ಅಲ್ಲ, ನೀನು ಚಂದ್ರನ ಕಲಂಕವಲ್ಲ,— ನೀನು ಏತರ ಕಲಂಕವೂ ಅಲ್ಲ,— ಚಂದಿರನ ಬೆಳುದಿಂಗಳು ನೀನು! ಒಂದು ಸಲ ಚೆನ್ನಾಗಿ ದಿಟ್ಟಿಸಿ ನೋಡು ” ಎಂದು ನುಡಿದ.

ಆದರೆ ಮಾ-ಶೋಯೆಗೆ ಕಣ್ಣುಗಳನ್ನು ತೆರೆಯುವುದಾಗಲಿಲ್ಲ, ಅವಳು ಹಾಗೆಯೆ ಕಣ್ಣುಮುಚ್ಚಿಕೊಂಡೇ ಇದ್ದಳು.

ಹೀಗೆಯೇ ಬಹಳ ಸಮಯ ಹೋಗಿರಬೇಕು. ಅಷ್ಟರಲ್ಲಿ, ಇದಿರಿನ ಬೀದಿಯಿಂದ ನರನಾರಿಯರ ತಂಡವೊಂದು ಉತ್ಸವಕ್ಕೆ ಹಾಡುತ್ತ ಕುಣಿಯುತ್ತ ಹೊರಟಿದ್ದಿತು. ಮಾ-ಶೋಯೆ ವ್ಯಸ್ತಳಾಗಿ ಎಚ್ಚೆತ್ತು ಎದ್ದು ನಿಂತಳು. “ ನಡೆ, ಹೊತ್ತಾಯಿತು” ಎಂದಳವಳು.

“ ಆದರೆ, ಈಗ ನನಗೆ ಹೊರಡುವುದಕ್ಕೆ ಆಗುವುದಿಲ್ಲ, ಮಾ-ಶೋಯೆ. ”

“ ಏಕೆ ? ”

“ ಈ ಚಿತ್ರವನ್ನು ಐದು ದಿನಗಳಲ್ಲಿ ಮುಗಿಸಿಕೊಡಬೇಕೆಂದು ಮಾತಾಗಿದೆ. ”

“ ಕೊಡದಿದ್ದರೆ ? ”

“ ಅವನು ಮಾಂದಾಲೆಗೆ ಹಾಗೆಯೇ ಹೊರಟುಹೋಗುವನು. ಚಿತ್ರವು ಇಲ್ಲಿಯೇ ಉಳಿದುಹೋಗುವುದು ; ಹಣವೂ ಸಿಕ್ಕುವುದಿಲ್ಲ.”

ಹಣದ ಮಾತು ಬರುತ್ತಲೇ ಮಾ-ಶೋಯೆಯ ಮನಸಿಗೆ ಕುಟುಕಿದಂತಾಯಿತು ; ಒಡನೆ ನಾಚಿಕೆಯೂ ಎನಿಸಿತು. ಸಿಟ್ಟು ಸಿಟ್ಟಿನಿಂದ ಅವಳೆಂದಳು : “ ಹಾಗಾದರೆ, ನಿನ್ನನ್ನು ಈ ಪರಿ ಜೀವ ಹಣ್ಣು ಮಾಡಿಕೊಂಡು ದುಡಿಯಲು ನಾನೇನೂ ಬಿಟ್ಟವಳಲ್ಲ.”

ಬಾ-ಥಿನನು ಈ ಮಾತಿಗೆ ಉತ್ತರವನ್ನು ಕೊಡಲಿಲ್ಲ. ಆದರೂ ತಂದೆಯ ಋಣದ ನೆನಪಿನಿಂದ ಅವನ ಮುಖದಲ್ಲಿ ಮೂಡಿದ ಮ್ಲಾನತೆಯ ನೆರಳು, ಅವಳ ಕಣ್ಣಿಗೆ ಬೀಳದೆ ಹೋಗಲಿಲ್ಲ.

“ ನನಗೆ ಮಾರಿದರೆ ಎರಡುಪಟ್ಟು ಬೆಲೆ ಕೊಡುತ್ತೇನೆ ” ಎಂದಳು.

ಅದರಲ್ಲಿ ಬಾ-ಥಿನನಿಗೆ ಏನೂ ಸಂದೇಹವಿರಲಿಲ್ಲ. ಅವನು ನಗು ನಗುತ್ತ ಕೇಳಿದ : " ನಿನಗೆ ನಾರಿದರೆ ಇದನ್ನೇನು ಮಾಡುತ್ತೀ ? "

ಮಾ-ಶೋಯೆ ತನ್ನ ಕೊರಳೊಳಗಿನ ಬೆಲೆ ಬಾಳುವ ಹಾರವನ್ನು ತೋರಿಸಿ " ಇದರಲ್ಲಿ ಎಷ್ಟು ಮುತ್ತುಗಳಿವೆಯೋ ಎಷ್ಟು ಮಾಣಿಕಗಳಿವೆಯೊ ಎಲ್ಲವನ್ನೂ ಚಿತ್ರಕ್ಕೆ ಕೊಡಿಸುತ್ತೇನೆ. ಮಲಗುವ ಕೋಣೆಯಲ್ಲಿ ನನ್ನ ಕಣ್ಣಿಗೆ ಎದುರಾಗುವಂತೆ ತೂಗು ಹಾಕುತ್ತೇನೆ " ಎಂದಳು.

" ಆಮೇಲೆ ? "

" ಆಮೇಲೆ ಒಂದು ದಿನ ಪೂರ್ಣಚಂದ್ರನು ಮೂಡಿಬರುವನು. ಮತ್ತು ತೆರೆದ ಕಿಡಿಕಿಯೊಳಗಿಂದ ಅವನ ಬೆಳುದಿಂಗಳಿನ ಬೆಳಕು ಬಂದು, ನಿನ್ನ ನಿದ್ರಾಂಕಿತ ಮುಖದ ಮೇಲೆ ಆಟವಾಡುವುದು—"

" ಆಮೇಲೆ ? "

" ಆಮೇಲೆ ನಿನ್ನ ನಿದ್ದೆ ತಿಳಿದು—"

ಮಾತನ್ನು ಮುಗಿಸುವುದು ಆಗಲಿಲ್ಲ. ಹೊರಗೆ ಮಾ-ಶೋಯೆಯ ಒಂಟೆತ್ತಿನ ಬಂಡಿ ಕಾಯ್ದುಕೊಂಡಿತ್ತು. ಬಂಡಿಯವನು ಗಟ್ಟಿಯಾಗಿ ಕೂಗಿ ಕೂಗಿ ಕರೆಯುವುದು ಕೇಳಬಂತು.

ಬಾ-ಥಿನನು ವ್ಯಸ್ತನಾಗಿ ನುಡಿದ : " ಮುಂದಿನ ಮಾತು ಮುಂದೆ ಕೇಳೋಣವಂತೆ ; ಈಗ ಸಾಕು ; ನೀನು ಬೇಗನೆ ಹೊರಡು, ಹೊತ್ತಾಯಿತು. "

ಆದರೆ ಹೊತ್ತು ಹೊರಟುಹೋಗುತ್ತಲಿರುವುದೆಂಬ ಅರಿವು ಮಾ-ಶೋಯೆಗೆ ಇದ್ದ ಲಕ್ಷಣವೇನೂ ಅವಳ ನಡೆವಳಿಕೆಯಲ್ಲಿ ಕಂಡು ಬರಲಿಲ್ಲ. ಅವಳಿನ್ನೂ ಚೆನ್ನಾಗಿ ಕುಳಿತುಕೊಂಡೇ ಮಾತನಾಡಿದಳು. "ನನ್ನ ಮೈಯಲ್ಲಿ ಇವತ್ತೇಕೋ ನೆಟ್ಟಗಿಲ್ಲ, ನಾನು ಹೋಗುವುದಿಲ್ಲ. "

" ಹೋಗುವುದಿಲ್ಲ ? ನೀನೇ ಎಂದೆ,-- ಎಲ್ಲರೂ ಮೋರೆ ಮೇಲೆ ಮಾಡಿಕೊಂಡು ನಿನ್ನ ಸಲುವಾಗಿ ಕಾದಿರುವರು ಎಂತ, ಅಲ್ಲವೆ ? "

ಮಾ-ಶೋಯೆ ಭರಕ್ಕನೆ ತಲೆಯುಲ್ಲಾಡಿಸಿ " ಹುಂ, ಕಾದರೆ ಕಾಯಲಿ, ನನಗೇನೂ ಹೇಳಿದ ಮಾತು ತಪ್ಪುತ್ತದಲ್ಲ ಎಂದು ನಾಚಿಕೆ ಎನಿಸುವುದಿಲ್ಲ; ನಾನು ಹೋಗುವುದಿಲ್ಲ " ಎಂದಳು.

"ಛೆ ಛೆ."

"ಹಾಗಾದರೆ ನೀನೂ ನಡೆ."

"ಬರುವ ಹಾಗಿದ್ದರೆ ಬಂದೇ ಬರುತ್ತಿದ್ದೆ. ಆದರೆ ನನಗೆ ಬರಲಾಗುವುದಿಲ್ಲವೆಂತ, ನನ್ನ ದೆಸೆಯಿಂದ ನಿನ್ನ ಸತ್ಯವನ್ನು ಭಂಗವಾಗಗೊಡಲಾರೆ. ಇನ್ನು ತಡಮಾಡಬೇಡ, ಹೊರಡು."

ಅವನ ಗಂಭೀರವಾದ ಮುಖವನ್ನು ಕಂಡು, ಶಾಂತ ದೃಢ ಕಂಠಸ್ವರವನ್ನು ಕೇಳಿ ಮಾ-ಶೋಯಿ ಎದ್ದು ನಿಂತಳು. ಅಭಿಮಾನದಿಂದ ಅವಳ ಮುಖವು ಮ್ಲಾನವಾಯಿತು. "ನೀನು ನಿನ್ನ ಕೆಲಸ ಬೊಗಸೆಯೆಂತ ನನ್ನನ್ನು ದೂರಗೊಳಿಸಲು ಇಚ್ಛಿಸುತ್ತೀ. ನಾನು ನಿನ್ನಿಂದ ದೂರವಾಗುತ್ತೇನೆ; ಮತ್ತೆ ಇನ್ನೆಂದೂ ನಿನ್ನ ಕಡೆ ಬರುವುದಿಲ್ಲ" ಎಂದು ಅವಳೆಂದಳು.

ಒಂದು ಮುಹೂರ್ತದಲ್ಲಿ ಬಾ-ಥಿನನ ಕರ್ತವ್ಯದ ದೃಢತೆಯು ಒಲವಿನ ನೀರಿನಲ್ಲಿ ಕರಗಿಹೋಯಿತು. ಅವನು ಅವಳನ್ನು ಹತ್ತಿರ ಸೆಳೆದುಕೊಂಡು ನಗೆಬೀರಿಸಿ ಹೇಳಿದ: "ಎಂತಹ ದೊಡ್ಡ ಪಣ ತೊಟ್ಟು ಬಿಟ್ಟೆಯಲ್ಲ, ಮಾ-ಶೋಯಿ! — ನನಗೆ ಗೊತ್ತು, ಇದು ಯಾವ ಕೊನೆಗೆ ಮುಟ್ಟುತ್ತದೆ ಎಂಬುದು. ಇರಲಿ. ಮತ್ತಿನ್ನೂ ವಿಲಂಬ ಮಾಡಬೇಡ."

ಮಾ-ಶೋಯಿ ಅದೇ ವಿಷಣ್ಣವದನದಿಂದ ಮರುನುಡಿ ನುಡಿದಳು: "ನಾನು ಬರದಿದ್ದರೆ, ಊಟ-ಉಡಿಗೆ ಮೊದಲುಗೊಂಡು ಎಲ್ಲಾ ವಿಷಯಗಳಲ್ಲಿಯೂ ನಿನ್ನ ಪಾಡು ಏನಾದೀತು ನೋಡು;— ನನ್ನಿಂದ ಅದನ್ನು ಸೈರಿಸಲಾಗುವುದಿಲ್ಲ. ನೀನು ಮಾತ್ರ ನನ್ನನ್ನು ಮಾತಾಡಿಯೆ ಸಾಯಹೊಡೆಯುತ್ತಿದ್ದೀ—ಗೊತ್ತಿರಲಿ."

ಹೀಗೆಂದು ಪ್ರತ್ಯುತ್ತರವನ್ನು ಅಪೇಕ್ಷಿಸದೆ ಅವಳು ಬಿರಬಿರನೆ ಮನೆಯಿಂದ ಹೊರಹೊರಟಳು.

೪

ಸುಮಾರು ಇಳಿಹೊತ್ತಿಗೆ ಮಾ-ಶೋಯೆಯ ಮಯೂರ ಪಂಖದ ಎತ್ತಿನಬಂಡಿ ಮೇಲಾಟದ ಕಣಕ್ಕೆ ತಲುಪಿತು. ಆಗ ಕೂಡಿದ ಜನ ಜಂಗುಳಿ ಪ್ರಚಂಡ ಕಲರವದಿಂದ ಕೋಲಾಹಲವನ್ನೆಬ್ಬಿಸಿತು.

ಅವಳು ಯುವತಿ, ಅವಳು ಸುಂದರಿ, ಅವಳು ಅವಿವಾಹಿತೆ, ಹಾಗೆಯೆ ಅವಳು ಹೇರಳವಾದ ಸಿರಿಯ ಒಡತಿ. ಮಾನವರ ಯೌವನ ರಾಜ್ಯದಲ್ಲಿ ಅವಳ ಸ್ಥಾನ ಒಳ್ಳೇ ಉಚ್ಚವಾದುದು. ಅದಕ್ಕೇ ಬಹು ಮಾನದ ಸ್ಥಾನವೊಂದು ಅವಳಿಗಾಗಿ ಇನ್ನೂ ಮೀಸಲಾಗಿದ್ದಿತು. ಅವಳು ಇಂದು ಹೂಮಾಲೆಯನ್ನು ಹೆಣೆಯುವಳು. ಆಮೇಲೆ ಭಾಗ್ಯವಂತನಾದವನು ಈ ಸುಂದರಿಯ ಕೊರಳಲ್ಲಿ ಜಯಮಾಲೆಯನ್ನು ಹಾಕುವನು. ಅವನ ಅದೃಷ್ಟವೇ ಇಂದು ಜಗತ್ತಿನಲ್ಲಿ ಹಿಂಸಾಕಾರಕವಾದ ಏಕಮಾತ್ರ ವಿಷಯವಾಗುವುದು !

ಅಣಿಯಾದ ಕುದುರೆಗಳ ಬೆನ್ನಮೇಲೇರಿ ಸ್ವಾರರು ಉತ್ಸಾಹದ ಮತ್ತು ಚಾಂಚಲ್ಯದ ಆವೇಗವನ್ನು ಒಳ್ಳೇ ಕಷ್ಟದಿಂದ ಬಿಗಿಹಿಡಿದು ಕುಳಿತುದನ್ನು ನೋಡಿದರೆ, ಈ ದಿನ ಈ ಜಗತ್ತಿನಲ್ಲಿ ಅವರಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಎಂದು ಎನಿಸುತ್ತಿತ್ತು.

ಮೆಲ್ಲಮೆಲ್ಲನೆ ಸಮಯವು ಸಮೀಪಿಸಿತು. ತಮ್ಮ ಅದೃಷ್ಟದ ಪರೀಕ್ಷೆಗೆ ಸಿದ್ಧರಾಗಿದ್ದ ಹಲವರು ಸಾಲುಸಾಲಾಗಿ ತಮ್ಮ ಕುದುರೆಗಳನ್ನು ನಿಲ್ಲಿಸಿದರು. ಕ್ಷಣ ಹೊತ್ತಿನಲ್ಲಿಯೇ ಗಂಟೆ ಬಾರಿಸಿತು. ಅದರೊಡನೆಯೆ ಅಳಿವು ಉಳಿವುಗಳ ಪರಿವೆಯಿಲ್ಲದೆ ಕುದುರೆಗಳನ್ನು ಓಡಿಸಿದರವರು.

ಇದು ವೀರವು, ಇದು ಯುದ್ಧದ ಒಂದಂಶವು. ಮಾ-ಶೋಯೆಯ ಪಿತೃಪಿತಾಮಹರೆಲ್ಲರೂ ಕಾಳಗದ ಕಡುಬಂಟರು. ಅವರ ಉನ್ಮತ್ತ

ಆವೇಗವು ಹೆಂಗುಸಾದರೂ ಅವಳ ಧಮನಿಗಳಲ್ಲಿ ಹರಿಯುತ್ತಿದ್ದಿತು. ಅವರಲ್ಲಿ ಗೆದ್ದವನಿಗೆ ತನ್ನ ಎದೆಯೆಲ್ಲವನ್ನೂ ಕೊಟ್ಟು ಸನ್ಮಾನಿಸದಿರುವುದು ಅವಳಿಗೆ ಅಸಾಧ್ಯವಾಗಿತ್ತು !

ಆದುದರಿಂದಲೇ ಯಾವನೋ ಊರಿನ ಗುರುತಿಲ್ಲದ ಯುವಕನೊಬ್ಬನು— ಕೆಂಪೇರಿದ ಮೈಯಿಂದ, ಕಂಪಿತ ಮುಖದಿಂದ, ಬೆವತು ಹಸಿಯಾದ ಕೈಯಿಂದ— ಬಂದು, ಅವಳ ಕೊರಳಲ್ಲಿ ತನ್ನ ಜಯಮಾಲೆಯನ್ನು ಹಾಕಿದನು. ಆಗಿನ ಅವನ ಅತಿಶಯವಾದ ಸಡಗರವು ಅನೇಕ ಸಂಭ್ರಾಂತ ರಮಣಿಯರ ಕಣ್ಣುಗಳನ್ನು ಕುಕ್ಕಿತು.

ತಿರುಗಿ ಬರುವಾಗ ಮಾ-ಶೋಯೆ ಅವನನ್ನು ಬಂಡಿಯೊಳಗೆ ತನ್ನ ಬದಿಯಲ್ಲಿ ಕುಳ್ಳಿರಿಸಿಕೊಂಡಿದ್ದಳು. ಮೇಲಾಗಿ ಕಣ್ಣುಗಳಿಂದ ಹರ್ಷಾಶ್ರುಗಳನ್ನು ಸೂಸುತ್ತಾ ನುಡಿದಳು : “ ತಮಗೋಸುಗ ನನಗೊಳ್ಳೆ ಭಯವೆನಿಸಿತ್ತು. ಎಷ್ಟು ಅತಿ ಎತ್ತರದ ಪೂರ್ವಗಿರಿ ಶಿಖರದಲ್ಲಿ ಎಲ್ಲಿಯೋ ಹೇಗೆ ಹೇಗೋ ಅಡಿಯಿಡುತ್ತಿರುವಂತೆಯೂ ಒಮ್ಮೆ ಮನಸಿನಲ್ಲಿ ಎನಿಸಿಹೋಯಿತು.”

ಯುವಕನು ವಿನಯದಿಂದ ಕತ್ತನ್ನು ನಸು ಕೊಂಕಿಸಿದ. ಆದರೆ ಈ ಅಸಮಸಾಹಸಿಯಾದ ಬಲಿಷ್ಠನಾದ ವೀರನೊಂದಿಗೆ, ಮಾ-ಶೋಯೆ ಮನಸಿನೊಳಗೇ ತನ್ನ ಆ ದುರ್ಬಲ, ಕೋಮಲ, ಎಲ್ಲ ವಿಷಯಗಳಲ್ಲಿಯೂ ಕೈಲಾಗದ ಚಿತ್ರಕಾರನನ್ನು ಹೋಲಿಸಿ ನೋಡದಿರಲಿಲ್ಲ.

ಆ ಯುವಕನ ಹೆಸರು ಪ್ರೋ-ಥಿನ. ಮಾತಾಡುತ್ತಾಡುತ್ತ ಗುರುತಾಗಿ, ಅವನೂ ಉಚ್ಚವಂಶೀಯ; ಅವನೂ ಸಿರಿವಂತ; ಹಾಗೆಯೇ ಅವಳ ದೂರದ ನೆಂಟ— ಎಂದು ತಿಳಿದುಬಂತು.

ಮಾ-ಶೋಯೆ ಇಂದು ತನ್ನ ಪ್ರಾಸಾದದಲ್ಲಿ ಸಂಜೆಯೂಟದ ಏರ್ಪಾಟು ಮಾಡಿದ್ದಳು. ಅನೇಕ ಜನರನ್ನು ಕರೆದಿದ್ದಳು. ಅವರೂ ಮತ್ತೆ ಬೇರೆ ಬಹುಜನರೂ ತಂಡತಂಡವಾಗಿ ಅವಳ ಬಂಡಿಯ ಹಿಂದೆ ಹಿಂದೆ ಬರುತ್ತಿದ್ದರು. ಆನಂದದ ಸಡಗರದಲ್ಲಿ, ಅವರ ತಾಂಡವ ನೃತ್ಯಕ್ಕೆದ್ದ ದೂಳಿಯ ಮೋಡದಲ್ಲಿ, ಆ ಸಂಗೀತದ ಅಸಹ್ಯವಾದ

ನಾದದಲ್ಲಿ, ಆಗ ಸಂಜೆಯ ಮುಗಿಲು ಒಮ್ಮಿಗಿಲೇ ತುಂಬಿ ಮುಚ್ಚಿ ಹೋಯಿತು.

ಈ ಭಯಂಕರ ಜನಜಂಗುಳಿಯು ತನ್ನ ಮನೆಯ ಮುಂದಿನಿಂದ ಹಾಯ್ದುಹೋಗುವಾಗ, ಆ ಒಂದು ಗಳಿಗೆಯ ಮಟ್ಟಿಗೆ ತನ್ನ ಕೆಲಸ-ಬೊಗಸೆಯನ್ನೆಲ್ಲಾ ಬದಿಗಿಟ್ಟು, ಬಾ-ಥಿನನು ಕಿಡಿಕಿಯ ಹತ್ತಿರಬಂದು ನೀರವವಾಗಿ ನೋಡುತ್ತ ನಿಂತುಕೊಂಡ.

೫

ಈ ಸಂಜೆಯ ಊಟ ಉಪಚಾರದ ಮರುದಿನ. ಮಾ-ಶೋಯಿ ಬಾ-ಥಿನನಿಗೆಂದಳು: " ನಿನ್ನೆಯ ಸಂಜೆ ಸೊಗಸಿನಲ್ಲಿ ಕಳೆಯಿತು. ಅನೇಕರು ದಯವಿಟ್ಟು ಚಿತ್ತಯಿಸಿದ್ದರು. ಕೇವಲ ನಿನಗೆ ಪುರಸತ್ತಿದ್ದಿಲ್ಲ, ಎಂದು ನಿನ್ನನ್ನು ಕರೆದಿರಲಿಲ್ಲ. "

ಅದೇ ಚಿತ್ರವನ್ನು ಮುಗಿಸುವುದರಲ್ಲಿ ಪೂರಾ ಮುಳುಗಿದ್ದ ಅವನು. ಮೋರೆಯನ್ನು ಮೇಲೆತ್ತದೆ " ಚಲೋ ಮಾಡಿದೆ " ಎಂದ. ಇಷ್ಟೊಂದು ಮತ್ತೆ ಕೆಲಸದಲ್ಲಿ ತೊಡಗಿದ.

ವಿಸ್ಮಯದಿಂದ ಮಾ-ಶೋಯಿ ಸ್ತಂಭಿತಳಾಗಿ ಕುಳಿತುಬಿಟ್ಟಳು. ಅವಳ ಹೊಟ್ಟೆತುಂಬಾ ಮಾತುಗಳು ತುಂಬಿ ಭಾರವಾಗಿತ್ತು; ನಿನ್ನೆ ಕೆಲಸ ಹೆಚ್ಚಾಗಿದ್ದುದರಿಂದ ಬಾ-ಥಿನನಿಗೆ ಉತ್ಸವಕ್ಕೆ ಬರಲಾಗಿರಲಿಲ್ಲ; ಈ ದಿನ ಬಹಳ ಹೊತ್ತು ಕುಳಿತು, ಬಹಳಷ್ಟು ಹರಟೆ ಕೊಚ್ಚಬೇಕೆಂದು ಅವಳ ಮನಸು; ಅದಕ್ಕೆಂದೇ ಅವಳು ಬಂದಿದ್ದಳು. ಆದರೆ ಎಲ್ಲವೂ ತಿರುವುಮುರುವಾಯಿತು. ಬರೀ ಒಂದೊಂದೇ ಪ್ರಲಾಪ ನಡೆಯುತ್ತಿತ್ತು, ಆಲಾಪ ನಡೆಯಲಿಲ್ಲ. ಅಂತೆಯೆ ಅವಳು ಸುಮ್ಮನೆ ಕುಳಿತಿದ್ದಳು. ಅವನ ಪ್ರಬಲ ಔದಾಸ್ಯದ ಮತ್ತು ಗಂಭೀರ ನೀರವತೆಯ ಬಿಗಿದ ಬಾಗಿಲನ್ನು ತೆರೆದು ಒಳಗೆ ಹೋಗುವ ಭರವಸೆ ಅವ

ಳಿಗೆ ಇಂದು ಸ್ವಲ್ಪವೂ ಇರಲಿಲ್ಲ. ಪ್ರತಿದಿನವೂ ಅವಳು ಮೆಚ್ಚಿ ಮಾಡುತ್ತಿದ್ದ ಸಣ್ಣಪುಟ್ಟ ಕೆಲಸ-ಬೊಗಸೆಗಳು ಕೂಡ ಹಾಗೆಯೇ ಬಿದ್ದುಬಿಟ್ಟವು— ಯಾವುದಕ್ಕೂ ಕೈ ಹಚ್ಚಲು ಅವಳ ಮನಸಾಗಲಿಲ್ಲ. ಇದೇ ರೀತಿಯಲ್ಲಿ ಬಹಳ ಹೊತ್ತು ಹೋಯಿತು. ಬಾ-ಧಿನನು ಒಮ್ಮೆ ಕೂಡ ಮುಖ ಮೇಲೆತ್ತಲಿಲ್ಲ. ಕಾಳಿತ ಹಾಗೇ ಒಂದು ಪ್ರಶ್ನೆಯನ್ನು ಕೇಳಲಿಲ್ಲ. ಊರಲ್ಲಿ ಅಷ್ಟು ದೊಡ್ಡ ಸಂಗತಿ ನಡೆದ ಬಗ್ಗೆಯೂ ಅವನಿಗೆ ಎಷ್ಟೊಂದೂ ಕುತೂಹಲವಿಲ್ಲ! — ಕೆಲಸದ ನಡುನಡುವೆ ಉಸಿರು ಬಿಡುವಷ್ಟು ಅವಕಾಶವಿರಲಿಲ್ಲ!

ಬಹಳ ಹೊತ್ತಿನ ನಿಶ್ಶಬ್ದತೆಯಿಂದ ಮಾ-ಶೋಯಿ ಕುಂಠಿತೆಯಾದಳು; ಅವಳಿಗೆ ನಾಚಿಕೆಯೂ ಎನಿಸಿತು. ಕೊನೆಗೆ ಅವಳು ಎದ್ದು ನಿಂತು ಮೃದುಕಂಠದಿಂದ ಎಂದಳು: " ಇಂದು ನಾನು ಬಂದಿದ್ದೇನೆ. "

ಬಾ-ಧಿನನು ಚಿತ್ರದಲ್ಲಿ ನಟ್ಟ ದೃಷ್ಟಿಯನ್ನು ಈಚೆಗೆ ತೆಗೆಯದೆ " ಹೌದು " ಎಂದು ನುಡಿದ.

ಹೊರಡುವ ಮುಂದೆ ಮಾ-ಶೋಯಿಗೆ, 'ಇದೇನೋ ಈ ಮನುಷ್ಯ ವ್ಯತ್ಯಾಸ ಹೊಂದಿದಂತೆ ಕಾಣುತ್ತಿದೆ' ಎಂದು ತೋರಿತು. ಅದನ್ನು ಕೇಳಿಬಿಡಲೇ ಎಂದೂ ಒಮ್ಮೆ ಇಚ್ಛೆಯುಂಟಾಗದಿರಲಿಲ್ಲ. ಆದರೆ ಬಾಯಿ ತೆರೆಯಲಿಕ್ಕಾಗಲಿಲ್ಲ— ಅವಳು ಸುಮ್ಮಗೆ ಹೊರಟು ಹೋದಳು.

ಮನೆಯಲ್ಲಿ ಕಾಲಿಡುತ್ತಲೇ ಪೋ-ಥಿಸನು ಬಂದು ಕುಳಿತಿರುವುದನ್ನು ಕಂಡಳು. ಹಿಂದಿನ ರಾತ್ರಿಯ ಆನಂದೋತ್ಸವದ ಬಗ್ಗೆ ಧನ್ಯವಾದಗಳನ್ನರ್ಪಿಸಲೋಸುಗ ಅವನು ಬಂದಿದ್ದ. ಮಾ-ಶೋಯಿ ಅತಿಥಿಯನ್ನು ಆದರದಿಂದ ಕುಳ್ಳಿರಿಸಿದಳು.

ಅತಿಥಿ ಮೊದಲು ಮಾ-ಶೋಯಿಯ ಐಶ್ವರ್ಯವನ್ನು ಕುರಿತು ಮಾತೆತ್ತಿದ; ಅದೇ ರೀತಿ ಅವಳ ಗಂಡನ ಮಾತು, ಅವಳ ತಂದೆಯ ಖ್ಯಾತಿಯ ವಿಷಯ, ರಾಜದ್ವಾರದಲ್ಲಿ ಅವರಿಗಿದ್ದ ಸನ್ಮಾನದ ವಿಷಯ

ಇತ್ಯಾದಿ ಎಷ್ಟೆಷ್ಟೋ ವಿಷಯಗಳನ್ನು ಅವನು ತೆರಪಿಲ್ಲದಂತೆ ಬಡಬಡಿಸತೊಡಗಿದ.

ಇದೆಲ್ಲದರಲ್ಲಿ ಎಷ್ಟೋ ಗಾಳಿಯನ್ನು ಆಕೆ ಕೇಳಿದಳು, ಎಷ್ಟೋ ಗಾಳಿ ಅನ್ಯಮನಸ್ಕಳಾದ ಅವಳ ಕಿವಿಗೆ ಮುಟ್ಟಲೇ ಇಲ್ಲ. ಆದರೆ ಆ ಹುಡುಗ ಬರೀ ಬಲಿಷ್ಠ, ಬರೀ ಅತಿಸಾಹಸಿಯಾದ ಕುದುರೆಯೋರಾಟದಾಳು ಮಾತ್ರವಲ್ಲ, ಅತ್ಯಂತ ಧೂರ್ತನೂ ಅಹುದು. ಮಾ-ಶೋಯೆಯ ಈ ಔದಾಸೀನ್ಯವು ಅವನ ಲಕ್ಷ್ಯಕ್ಕೆ ಬಾರದಿರಲಿಲ್ಲ. ಅವನು ಮಾಂದಾಲೆಯ ರಾಜಪರಿವಾರದ ಪ್ರಸಂಗವನ್ನು ತೆಗೆದು, ಕೊನೆಗೆ ಸೌಂದರ್ಯದ ವಿಚಾರಕ್ಕೆ ಬಂದ-- ಕೃತ್ರಿಮ ಸಾರಲ್ಯವನ್ನು ತಂದುಕೊಂಡು. ಅವನು ಇದೇ ರಮಣಿಯನ್ನು ಲಕ್ಷಿಸಿ ಅಲಕ್ಷಿಸಿ ಮೇಲಿಂದ ಮೇಲೆ ಅವಳ ರೂಪವನ್ನೂ ಯೌವನವನ್ನೂ ಕಣ್ಣಿಂದ ಕುಡಿಯತೊಡಗಿದ. ಆಗ ಅವನಿಗೆ ಒಳಗೊಳಗೇ ಸಹಜವಾಗಿ ಬಹಳ ನಾಚಿಕೆ ಎನಿಸುತ್ತಿತ್ತು. ಆದರೂ ಒಂದು ತರದ ಅಪರೂಪವಾದ ಆನಂದವೂ ಗೌರವವೂ ಅವನಿಗೆ ಅನುಭವವಾಗದೆ ಬಿಡಲಿಲ್ಲ.

ಹೀಗೆ ಹುಚ್ಚು ಹರಟೆಯನ್ನು ಮುಗಿಸಿ ಪೋ-ಥಿನನು ಹೊರಡಲು ನಿರೋಪವನ್ನು ಪಡೆದ. ಅದರೊಂದಿಗೆ ಆವೊತ್ತಿನ ರಾತ್ರಿಯ ಊಟದ ಆಮಂತ್ರಣವನ್ನೂ ತೆಗೆದುಕೊಂಡ.

ಅವನು ಹೊರಟುಹೋದರೂ ಅವನ ಮಾತುಗಳು ಮಾ-ಶೋಯೆಯ ಮನಸಿನೊಳಗೆ ತಿರುತಿರುಗಿ ಸುತ್ತಾಡಿ, ಅವಳನ್ನು ಒಂದು ತೆರೆದ ಗ್ಲಾನಿಯಾವರಿಸಿತು. ಮನಸು ಮುದುರಿಹೋಯಿತು. ಔತಣ ಕೊಟ್ಟುಬಿಟ್ಟ ಬಗ್ಗೆ ಅವಳಲ್ಲಿ ವಿರಕ್ತಿಯುಂಟಾಯಿತು, ವಿತೃಷ್ಣೆಯುಂಟಾಯಿತು-ಮಿತಿ ಇಲ್ಲದಷ್ಟು. ಇನ್ನೂ ಕೆಲವು ಬಂಧು ಮಿತ್ರರಿಗೆ ಔತಣದ ಪತ್ರಗಳನ್ನು ಬರೆದುಕೊಟ್ಟು ಆಳನ್ನು ಅಟ್ಟಿದಳು. ಗೊತ್ತಾದ ಹೊತ್ತಿಗೆ ಅತಿಥಿಗಳು ಬಂದರು. ಅಂದೂ ಹಾಸ ಪರಿಹಾಸಗಳೊಡನೆ, ತೆರತೆರದ ಹರಟೆಗಳೊಡನೆ, ಬಗೆಬಗೆಯ ನೃತ್ಯಗೀತಗಳೊಡನೆ ಊಟ ಉಪಚಾರಗಳು ತೀರಿದಾಗ, ರಾತ್ರಿಯೇನೂ ಬಹಳ ಉಳಿದಿರಲಿಲ್ಲ.

ದಣಿದು ಬೇಸತ್ತೇನೋ ಅವಳು ಮಲಗಿದಳು, ಕಣ್ಣಿಗೆ ನಿದ್ದೆ ಹಿಡಿಯಲಿಲ್ಲ. ಆದರೆ ಒಂದು ಆಶ್ಚರ್ಯದ ಮಾತೆಂದರೆ, ಯಾರಿಗಾಗಿ ಅವಳು ಇಷ್ಟು ಹೊತ್ತನ್ನು ಈ ರೀತಿಯಲ್ಲಿ ಕಳೆದಳೊ ಅವನ ಒಂದು ವಿಷಯವೂ ತಿರುಗಿ ಅವಳ ಮನಸಿನಲ್ಲಿ ಸುಳಿಯಲಿಲ್ಲ. ಆ ವಿಷಯ ವೆಂದರೆ, ಯಾವ ರಾಜರ ಕಾಲದವೊ ಹಳೆಯ ಕೆಲಸಕ್ಕೆ ಬಾರದ ಘಟನೆಗಳಾಗಿದ್ದವು. ಹಾಗೆಯೆ ಶುಷ್ಕವಾದವು, ವಿರಸವಾದವು. ಅವಳ ಮನಸಿನಲ್ಲಿ ಕೇವಲ ಬೇರೊಂದು ವ್ಯಕ್ತಿಯು ನೆಲಸಿತ್ತು—ಅವನು ಅವಳ ತೋಟದ ಪಕ್ಕದಲ್ಲಿಯೇ ನಿರ್ಜನವಾದ ಮನೆಯೊಂದರಲ್ಲಿ ಆಗ ನಿರ್ವಿಘ್ನವಾಗಿ ಇದ್ದ. ಆವೊತ್ತಿನ ಅಷ್ಟು ಮಹಾಸಡಗರದ ಲೇಶಮಾತ್ರವೂ ಅವನ ಕಿವಿಗೆ ತಟ್ಟಬೇಕೆಂದರೆ, ಅದಕ್ಕೆ ಸ್ವಲ್ಪಮಾತ್ರವೂ ಎಲ್ಲೆಲ್ಲಿಯೂ ಹಾದಿಯಿರಲಿಲ್ಲ.

೬

ಬಹಳ ದಿನದರೂಢಿ ಬೆಳಗಾಗುತ್ತಲಿ ಮಾ-ಶೋಯೆಯನ್ನು ಎಳೆಯತೊಡಗಿತು. ಅವಳು ಬಾ-ಥಿನನ ಮನೆಗೆ ಮತ್ತೂ ಹೊರಟು ಬಂದು ಕುಳಿತುಕೊಂಡಳು. ಅವನು ಬರೀ "ಬಾ" ಎಂದು ಇಷ್ಟೆ ನುಡಿದು ತನ್ನ ಸಹಜ ಸ್ವಾಗತಕಾರ್ಯವನ್ನು ಮುಗಿಸಿ, ಹಾಗೇ ಕೆಲಸ ದಲ್ಲಿ ತೊಡಗಿದ. ಅವನ ದಿನನಿತ್ಯದ ಸಹಜ ನಡತೆಯೇ ಇದು. ಆದರೆ ಮಾ-ಶೋಯೆಗೆ ಮಾತ್ರ ಈ ದಿನ ಹತ್ತಿರ ಕುಳಿತಿದ್ದರೂ ಈ ಕೆಲಸ ಗುಳಿ-ಗುಮ್ಮನಗುಸಕ ಮನುಷ್ಯನು ನೀರವವಾಗಿಯೇ ದೂರ ದೂರ ಸರಿದುಹೋಗಿದ್ದಾನೋ ಏನೋ ಎಂದು ಮನಸಿನಲ್ಲಿ ಎನಿಸುತ್ತಿತ್ತು.

ಬಹಳ ಹೊತ್ತಿನವರೆಗೆ ಮಾ-ಶೋಯೆ ಆಡಲು ಮಾತುಗಳನ್ನು ಹುಡುಕಿದಳು; ದೊರೆಯಲಿಲ್ಲ. ಕೊನೆಗೆ ಸಂಕೋಚವನ್ನು ಹೇಗೋ ತೊರೆದು ಕೇಳಿದಳು: "ಇನ್ನೂ ಎಷ್ಟುಳಿದಿದೆ ನಿನ್ನ ಕೆಲಸ?"

"ಬಹಳ."

" ಹಾಗಾದರೆ, ಈ ಎರಡು ದಿನ ಏನು ಮಾಡಿದೆ ? "

ಬಾ-ಥಿನನು ಇದಕ್ಕೆ ಮರುಮಾತು ನುಡಿಯಲಿಲ್ಲ. ಚರೂಟದ ಡಬ್ಬಿಯನ್ನು ಅವಳ ಕಡೆ ಸರಿಸುತ್ತ " ಈ ಮದಗಂಧವನ್ನು ಸಹಿಸುವುದಕ್ಕಾಗುವುದಿಲ್ಲ " ಎಂದ.

ಮಾ-ಶೋಯೆ ಇದರ ಇಂಗಿತವನ್ನು ಅರಿತಳು. ಉರಿದೆದ್ದು ರಭಸದಿಂದ ಡಬ್ಬಿಯನ್ನು ಹಿಂದಕ್ಕೆ ತಳ್ಳಿ ಅಂದಳು: " ನಾನು ಮುಂಜಾನೆ ಹೊತ್ತಿನಲ್ಲಿ ಚರೂಟ ತಿನ್ನುವುದಿಲ್ಲ—ಚರೂಟದಿಂದ ಗಂಧವನ್ನು ಮರೆಮಾಜುವ ಕೆಲಸವನ್ನೂ ಮಾಡುವುದಿಲ್ಲ— ನಾನು ಕಿರುಕುಳರ ಮನೆಯ ಮಗಳಲ್ಲ. "

ಬಾ-ಥಿನನು ಮುಖವನ್ನು ಮೇಲೆತ್ತಿ ಶಾಂತಸ್ವರದಿಂದ " ಇರಬಹುದು, ನಿನ್ನ ಬಟ್ಟೆಬರೆಗಳು ಹಾಗೆಯೇ ಇವೆ— ಮದಗಂಧವೆಂದು ನಾನು ಕೈಗಂಟು ಹಾಕಿ ಹೇಳಲಿಲ್ಲ. " ಎಂದ

ಮಾ-ಶೋಯೆ ವಿದ್ಯುದ್ವೇಗದಿಂದ ಎದ್ದು ನಿಂತಳು. " ನೀನು ಕ್ಷುದ್ರನಿದ್ದಷ್ಟೇ ಹಿಂಸಕನಿದ್ದೀ. ಅದಕ್ಕೇ ತಪ್ಪಿಲ್ಲದೆ ನನ್ನನ್ನು ಅವಮಾನಗೊಳಿಸುತ್ತಿ ! ಒಳ್ಳೆಯದು, ಹಾಗೆಯೆ ಆಗಲಿ. ನನ್ನ ಬಟ್ಟೆ ಬರೆಗಳನ್ನು ಯಾವಾಗಲೂ ನಿಮ್ಮ ಮನೆಯಿಂದಲೇ ಕೊಡುತ್ತೀರಿ ! " ಎಂದೆನ್ನುತ್ತ ಅವಳು ಉತ್ತರದ ಹಾದಿಯನ್ನು ಕಾಯದೆ ದ್ರುತಗತಿಯಿಂದ ಹೊರಹೊರಟಳು. ಬಾ-ಥಿನನು ಅವಳನ್ನು ಹಿಂದಕ್ಕೆ ಕರೆದು ಮೊದಲಿನಂತೆಯೇ ಸಂಯತಸ್ವರದಿಂದ ಹೇಳಿದ: " ನನಗೆ ಯಾರೂ ಯಾವಾಗಲೂ ನೀಚನೆಂದಾಗಲಿ, ಹಿಂಸಕನೆಂದಾಗಲಿ ಹೆಸರಿಟ್ಟಿಲ್ಲ ... ನೀನು ಒಮ್ಮೆಗಲೆ ಅಧಃಪಥವನ್ನು ಹಿಡಿಯಲು ಉದ್ಯುಕ್ತಳಾಗಿದ್ದೀ—ಸಾವಧಾನ. "

ಮಾ-ಶೋಯೆ ತಿರುಗಿನಿಂತು " ಅಧಃಪಥಕ್ಕೆ ನಾನೇಕೆ ಹೋಗಲಿ ? "

" ಹಾಗೆ ನನಗೆನಿಸುತ್ತದೆ. "

" ಸರಿ, ಅದೇ ಮನಸ್ಸಿನಿಂದಿರು. ಅವಳ ಬಾಪನ ತಂದೆ ಆಶೀರ್ವಾದವನ್ನಿತ್ತು ಹೋಗಿದ್ದಾನೆ— ಮಗಳಿಗಾಗಿ ಅಧಿಕಾರವನ್ನಿತ್ತು

ಹೋಗಿರುವುದಿಲ್ಲ— ಅಂತಹಳೊಡನೆ ನಿನ್ನ ಮನಸು ಬೆರೆಯಲಾರದು."

ಇಷ್ಟೆಂದು ಅವಳು ಹೊರಟುಹೋದಳು; ಬಾ-ಥಿನನು ಮಾತ್ರ ಸ್ಥಿರವಾಗಿ ಕುಳಿತುಬಿಟ್ಟ. ಯಾರೇ ಆಗಲಿ, ಏತಕ್ಕೇ ಆಗಲಿ, ಯಾರನ್ನೇ ಆಗಲಿ ಇಷ್ಟು ಮರ್ಮಾಂತಿಕವಾಗಿ ಇರಿಯಬಲ್ಲರೊ? ಇಷ್ಟೊಂದು ಪ್ರೀತಿ ಒಂದೇ ದಿನದಲ್ಲಿ ಇಷ್ಟೊಂದು ವಿಷವಾಗಿ ಪರಿಣಮಿಸಬಹುದೊ? ಎಂಬುದನ್ನವನು ಭಾವಿಸಲಾರದೆ ಹೋದ.

ಮಾ-ಶೋಯೆ ಮನೆಗೆ ಹೋಗಿ ನೋಡುವ ಹೊತ್ತಿಗೆ ಪೋ-ಥಿನನು ಹಾಜರಾಗಿ ಕುಳಿತಿದ್ದ. ಆಕೆಯನ್ನು ಕಾಣುತ್ತಲೇ ಸಂಭ್ರಮ ದಿಂದ ಎದ್ದುನಿಂತು ಒಳ್ಳೆಯ ಸವಿಮಾದ ನಗೆಯೊಂದನ್ನು ಸೂಸಿದ.

ನಗೆಯನ್ನು ಕಂಡು ಮಾ-ಶೋಯೆಯ ಹುಬ್ಬುಗಳೆರಡೂ ತಿಳಿಯದಂದೆಯೆ ಆಕುಂಚನ ಹೊಂದಿದವು! "ನಿಮ್ಮದೇನಾದರೂ ವಿಶೇಷ ಕಾರ್ಯವಿದ್ದಿತೆ, ನನ್ನೊಡನೆ?" ಎಂದು ಕೇಳಿದಳು.

"ಏನಿಲ್ಲ, ಇಷ್ಟೇ—"

"ಹಾಗಾದರೆ ನನಗೆ ಈಗ ಪುರಸತ್ತಿಲ್ಲ." ಎಂದು ಮಾ-ಶೋಯೆ ಬಾಗಿಲ ಪಕ್ಕದ ಮೆಟ್ಟಿಲನ್ನು ಸರಸರ ಏರಿ ಅಟ್ಟದ ಮೇಲೆ ಹೊರಟುಹೋದಳು.

ಕಳೆದ ರಾತ್ರಿಯ ಸಂಗತಿಗಳನ್ನು ನೆನೆದುಕೊಂಡು– ಪಾಪ, ಆ ಪ್ರಾಣಿ ಒಮ್ಮೆಲೆ ಹತಬುದ್ಧನಾದ. ಅದರ ಆಳು ಎದುರಿಗೆ ಬಂದಿರುವುದನ್ನು ಕಂಡು, ಒಣನಗೆ ನಗುತ್ತ ಅವನ ಕೈಯಲ್ಲಿ ಮುಚ್ಚಿ ಒಂದು ರೂಪಾಯಿಯನ್ನು ಇಟ್ಟು ಅಲ್ಲಿಂದ ತೆರಳಿದ.

೭

ಚಿಕ್ಕಂದಿನಿಂದ ಈ ಇಬ್ಬರಲ್ಲಿ ಯಾನಾಗಲೂ ಒಂದು ಮುಹೂರ್ತ ಕಾಲವೂ ಅಗಲಿಕೆ ಉಂಟಾಗಿರಲಿಲ್ಲ. ಅದೃಷ್ಟದ ವಿಡಂಬನೆಯಿಂದ

ಈಗ ತಾನೆ, ಒಂದು ತಿಂಗಳಮೇಲಾಗಿದೆ, ಯಾರೂ ಯಾರೊಂದಿಗೂ ಕೂಡಿಲ್ಲ.

ಮಾ-ಶೋಯೆ ಏನೇನೋ ಹೇಳಿಕೊಂಡು ತನ್ನನ್ನು ತಾನು ಸಂತಯಿಸಲು ಹವಣಿಸಿದಳು: ಇದೊಂದು ಬಗೆಯಿಂದ ಒಳ್ಳೆಯದೇ ಆಯಿತು; ಈ ಮೋಹದ ಬಲೆ ದೀರ್ಘಕಾಲದಿಂದ ತನ್ನನ್ನು ಕಠಿನ ಬಂಧನದಲ್ಲಿ ಬಿಗಿದು ಇರಿಸಿತ್ತು— ಈಗದು ಹರಿದುಹೋಗಿದೆ. ಇನ್ನು ಅವನೊಂದಿಗೆ ಎಳ್ಳಷ್ಟೂ ಸಂಬಂಧವಿಲ್ಲ. ಈ ಸಿರಿವಂತರ ಮಗಳ ಹೊಸದಾದ ಉದ್ದಾಮ ಪ್ರಕೃತಿಯು, ತಂದೆ ಇದ್ದಾಗಲೇ ಎಷ್ಟೋ ದಿನ ಅನೇಕ ಸಂದರ್ಭಗಳಲ್ಲಿ ಹೊರಬೀಳಲು ಹಣಿಯಿಕ್ಕುತ್ತಿದ್ದಿತು. ಅದು ಗಂಭೀರ, ಸಂಯತಚಿತ್ತ ಬಾ-ಥಿನನ ವಿರಕ್ತಿಯ ಭಯದಿಂದ ಪ್ರಕಟವಾಗಿರಲಿಲ್ಲವಷ್ಟೆ. ಆದರೆ ಇಂದವಳು ಸ್ವತಂತ್ರಳು— ತನ್ನ ಒಡೆಯಳು ತಾನೇ. ಯಾವ ಬಗ್ಗೆಯೂ ಯಾರ ಮುಂದೂ ಸ್ವಲ್ಪ ಕೂಡ ಈಗ ಜವಾಬು ಕೊಡಬೇಕಾದುದಿಲ್ಲ. ಇದೊಂದೇ ಗೃಹಿಕೆಯಿಂದ ಅವಳು ತನ್ನ ಮನಸಿನಲ್ಲಿ ಅನೇಕ ವಿಚಾರಗಳ ಗಾಳಿಗೋಪುರಗಳನ್ನು ಕಟ್ಟುತ್ತಿದ್ದಳು. ಆದರೆ ಒಂದೇ ಒಂದು ದಿನ ಯಾವಾಗೊಮ್ಮೆಯಾದರೂ ತನ್ನ ಹೃದಯದ ಗರ್ಭಗುಡಿಯ ಕದವನ್ನು ತೆರೆದು ಒಳಗೆ ನೋಡಲಿಲ್ಲ— ನೋಡಿದರೆ ಏನಿತ್ತು ? ಅಲ್ಲಿ ಇಷ್ಟು ದಿನವೂ ನಿಜವಾಗಿ ತನ್ನನ್ನು ತಾನೇ ವಂಚಿಸುತ್ತಿರುವುದು ಅವಳಿಗೆ ಕಾಣಬಹುದಿತ್ತು. ಆ ಅಂತರಾಳದ ಗುಪ್ತ ಸ್ಥಳದಲ್ಲಿ ಹಗಲಿರುಳೂ ಇಬ್ಬರು ಇದಿರು ಬದಿರು ಕುಳಿತಿರುತ್ತಿದ್ದರು— ಪ್ರೇಮಾಲಾಪಗಳನ್ನಾಡುತ್ತಲ್ಲ, ಜಗಳವಾಡುತ್ತಲ್ಲ— ಕೇವಲ ನಿಶ್ಶಬ್ದವಾಗಿ. ಇಬ್ಬರ ಕಣ್ಣುಗಳಿಂದಲೂ ಕಂಬನಿಗಳು ಧಾರೆಗಟ್ಟಿ ಹರಿಯುತ್ತಿರುವವು !

ತಮ್ಮ ಜೀವನದ ಈ ಅನನ್ಯ ಕರುಣಚಿತ್ರವು ಅವಳ ಮನಶ್ಚಕ್ಷುನಿಗೆ ಕಾಣುತ್ತಿರಲಿಲ್ಲ. ಅಂತೆಯೇ ಈ ಕಾಲವಲ್ಲಿ ಮನೆಯಲ್ಲಿ ಅನೇಕ ರಾತ್ರ್ಯುತ್ಸವಗಳ ನಿಷ್ಫಲ ಅಭಿನಯಗಳು ಅವಳಿಂದ ನಡೆಯುತ್ತಿದ್ದವು. ಪರಾಜಯದ ಲಜ್ಜೆಯು ಅವಳನ್ನು ದೂಳಿಗೂಡಿಸಲಿಲ್ಲ.

ಆದರೆ ಇಂದಿನ ದಿನವನ್ನು ಅದೇ ರೀತಿಯಲ್ಲಿ ಸೊಗಸಾಗಿ ಕಳೆಯುವುದು ಆಗಲಿಲ್ಲ. ಏಕೆ ? ಹೂಂ, ಅದೇ ವಿಷಯವನ್ನು ಹೇಳುತ್ತೇನೆ.

ಹುಟ್ಟಿದ ಹಬ್ಬಕ್ಕೆ ಪ್ರತಿವರುಷವೂ ಅವಳ ಮನೆಯಲ್ಲಿ ಆನಂದೋತ್ಸವವೂ ಭೋಜನಸಮಾರಂಭವೂ ನಡೆಯುವುದು. ಇಂದು ಅದೇ ಪ್ರಸಂಗವು ತುಸು ಹೆಚ್ಚಿನ ಸಡಗರದಿಂದ ನಡೆಯಲಿತ್ತು. ಮನೆಯ ಆಳು-ತೊತ್ತುಗಳು ಮೊದಲುಗೊಂಡು ನೆರೆಹೊರೆಯವರವರೆಗೆ ಎಲ್ಲರೂ ಅದರಲ್ಲಿ ಸೇರಿದ್ದರು. ಆದರೆ ಕೇವಲ ಸ್ವಯಂ ಅವಳ ಅಂಗವೇ ಸ್ವಲ್ಪವೂ ಇರಲಿಲ್ಲ. ಬೆಳಗಿನಿಂದಲೂ ಇಂದವಳಿಗೆ ಎಲ್ಲಾ ವ್ಯರ್ಥ, ಎಲ್ಲಾ ಗುದ್ದಕ್ಕೆ ಕಲ್ಲು ಹೊತ್ತಂತೆ ಎಂದಿನಿಸುತ್ತಿತ್ತು. ಹೇಗೋ ಏನೋ ಇಷ್ಟು ದಿನ ಅವಳಿಗೆ, ' ಪ್ರಪಂಚದೊಳಗಿನ ಉಳಿದೆಲ್ಲರಂತೆ ಅವನೂ ಒಬ್ಬ, ಅವನೂ ಮನುಷ್ಯ, ಅವನೂ ಈರ್ಷೆಗೆ ಹೊರತಲ್ಲ ' ಎನಿಸುತ್ತಿತ್ತು. ಅವಳ ಮನೆಯೊಳಗಿನ ಈ ಎಲ್ಲ ಆನಂದೋತ್ಸವದ ವಿವಿಧ ಹೊಸ ಹೊಸ ಕಾರ್ಯಕಲಾಪಗಳ ಸುದ್ದಿ, ಅವನ ಬಿಗಿದ ಕಿಡಿಕಿಗಳನ್ನು ಒಡೆದುಕೊಂಡು ಅವನ ಮನೆಯೊಳಗೆ ಹೋಗಲಾರದೆ? ಅವನ ಕೆಲಸದಲ್ಲಿ ತೊಂದರೆ ಕೊಡಲಾರದೆ ?

ಹೌದು– ಅವನು ತನ್ನ ಕುಂಚವನ್ನು ಬಿಸುಟು ಒಮ್ಮೆ ಸ್ಥಿರವಾಗಿ ಕುಳಿತುಕೊಳ್ಳುವನು ; ಒಮ್ಮೆ ಅಸ್ಥಿರನಾಗಿ ಮನೆಯಲ್ಲಿ ದ್ರುತಗತಿಯಿಂದ ಎಡೆಯಾಡುವನು ; ಒಮ್ಮೆ ನಿದ್ದೆಯಿಲ್ಲದೆ ಉರಿಯುವ ಹಾಸಿಗೆಯಲ್ಲಿ ಬಿದ್ದು ಹೊತ್ತಿ ಬತ್ತುತ್ತಿರುವನು ; ಒಮ್ಮೆ—ಹೂಂ, ಹೀಗೆ ತೆರತೆರನಾಗಿ.

ಮಾ-ಶೋಯಿ ಇಷ್ಟು ದಿನ ಕಲ್ಪನಾರಾಜ್ಯದಲ್ಲಿ ಒಂದು ತೆರದ ತೀಕ್ಷ್ಣ ಆನಂದವನ್ನು ಅನುಭವಿಸುತ್ತಿದ್ದಳು. ಆದರೆ ಈದಿನ ಒಮ್ಮಿಗಿಲೆ ಅವಳಿಗೆ ಮನಸಿನಲ್ಲಿ ಎನಿಸತೊಡಗಿತು : ಏನೇನೂ ಇಲ್ಲ-ಏನೂ ಇಲ್ಲ , ಅವನ ಯಾವ ಕಾರ್ಯದಲ್ಲಿಯೂ ಅವನಿಗೆ ಯಾವ ವಿಘ್ನವೂ ಆಗಿಲ್ಲ ; ಎಲ್ಲಾ ಮರಿಮೋಸ. ಸತ್ಯವನ್ನು ಅವಳಿಗೆ ಗ್ರಹಿಸಲಾಗಲಿಲ್ಲ, ಗ್ರಹಿಸಲಿಚ್ಛೆಯೂ ಆಗಲಿಲ್ಲ. ಅದೆಷ್ಟು ದುರ್ಬಲ ದೇಹ, ಅದೇಕೋ ಏನೋ ಒಮ್ಮೆಲೆ ಬೆಟ್ಟದಂತೆ ಕಠಿನವೂ ಅಚಲವೂ ಆಗಿಹೋಗಿದೆ. ಯಾವ

ಝುಂಝಾವಾತವೂ ಇನ್ನು ಅದನ್ನು ಒಂದು ಬಿಂದುಮಾತ್ರವಾದರೂ ಸರಿಸಾಡಲಾರದು.

ಆದರೂ ವಿರಾಟ್ ಸ್ವರೂಪದ ಹುಟ್ಟಿದ ಹಬ್ಬದ ಕಾರ್ಯಕಲಾಪಗಳು ವಿಜೃಂಭಣೆಯಿಂದ ಜರುಗುತ್ತಿದ್ದವು. ಈ ದಿನ ಎಲ್ಲಿ ನೋಡಿದಲ್ಲಿ, ಎಲ್ಲ ಕೆಲಸಗಳಲ್ಲಿ ಪೋ ಥಿನನಸಡಗರ. ಅದೆಷ್ಟು ಅತಿಯೆನಿಸಿತ್ತೆಂದರೆ, ಗೊತ್ತಿದ್ದವರೊಳಗೆಲ್ಲಾ ಒಂದು ಗುಜುಗುಜು ಕೇಳಬರುತ್ತಿದ್ದಿತು : ಒಂದಾನೊಂದು ದಿನ ಈ ಮನುಷ್ಯನೇ ಈ ಮನೆಯ ಯಜಮಾನನಾಗುತ್ತಾನೆ–ಮತ್ತಾ ದಿನವೇನೂ ಬಹಳ ದೂರವಿರಲಿಕ್ಕಿಲ್ಲ.

ಊರಿನ ಗಂಡಸರು ಹೆಂಗಸರು ಎಲ್ಲ ಬಂದಿದ್ದಾರೆ; ಮನೆ ತುಂಬಿ ಹೋಗಿದೆ–ನಾಲ್ಕೂ ದಿಕ್ಕುಗಳಲ್ಲಿ ಆನಂದದ ಕಲರವ ಹರಡಿದೆ. ಇದೆಲ್ಲ ಹಮ್ಮಿಕೆ ಯಾರಿಗೋಸುಗವೊ ಅವಳು ಮಾತ್ರ ವಿಮನಸ್ಕಳು–ಅವಳ ಮುಖವೇ ನಿರಾನಂದದ ನೆರಳಿಂದ ಮುಚ್ಚಿದೆ. ಆದರೆ ಈ ನೆರಳು ಬೇರೆ ಯಾರ ಕಣ್ಣಿಗೂ ಬಹುಶಃ ಬೀಳಲಿಲ್ಲ. ಬಿದ್ದಿದ್ದರೆ, ಆ ಮನೆಯಲ್ಲಿ ಬಹಳದಿನದಿಂದ ಕೆಲಸಕ್ಕಿದ್ದ ಒಬ್ಬಿಬ್ಬರು ದಾಸದಾಸಿಯರ ಕಣ್ಣಿಗೆ ಮಾತ್ರ ಬಿದ್ದಿರಬಹುದು. ಬಿದ್ದಿದ್ದರೂ ಅವರು ಅಲಕ್ಷ್ಯದಿಂದಿದ್ದಂತೆ ತೋರುತ್ತದೆ. ಅವರಿಗೆ ಮಾತ್ರ ಈ ಹುಡುಗಿಯ ಮುಂದೆ ಇಂದು ನಡೆದುದೆಲ್ಲಾ ಒಂದು ವಿಡಂಬನೆಯೆಂದು ಕಾಣುತ್ತಿತ್ತು. ಇದೇ ಹುಟ್ಟಿದ ಹಬ್ಬದ ದಿನ ಯಾವನು ಪ್ರತಿವರುಷ ಎಲ್ಲರಿಗಿಂತ ಮುಂದಾಗಿ ಗುಟ್ಟಾಗಿ ಅವಳ ಕೊರಳಲ್ಲಿ ಹರಕೆಯ ಹಾರವನ್ನು ಹಾಕುತ್ತಿದ್ದನೋ, ಇಂದು ಆ ಮನುಷ್ಯ ಇಲ್ಲ, ಆ ಮಾಲೆ ಇಲ್ಲ; ಈ ದಿನ ಆ ಹರಕೆಯೊಂದರ ಅಭಾವ. ಇದವರ ಗಮನದಿಂದ ನುಸುಳಿ ಉಳಿಯುವ ವಿಷಯವಲ್ಲ.

ಮಾ-ಶೋಯೆಯು ತಂದೆಯ ಕಾಲದ ವೃದ್ಧ ಕೆಲಸದವನು ಬಂದು ಹೇಳಿದ : "ಚಿಕ್ಕ ತಾಯಿ, ಎಲ್ಲಿ ಇದ್ದಾರೊ ಕಾಣುವುದಿಲ್ಲವಲ್ಲ?"

ಮುದುಕನು ಕೆಲದಿನಗಳ ಹಿಂದೆ ಕೆಲಸದ ನಿಮಿತ್ತದಿಂದ ತಮ್ಮೂರಿಗೆ ಹೊರಟುಹೋಗಿದ್ದ. ಅವನಿಗೆ ಇಲ್ಲಿ ಆದ ಸ್ಥಿತ್ಯಂತರದ ವಿಷಯ ಗೊತ್ತಿರಲಿಲ್ಲ. ಈ ಹೊತ್ತು ಬಂದ ಮೇಲೆ ಆಳುಗಳ ಬಾಯಿಂದ ತುಸ

ತುಸ ಕೇಳಿದ್ದ. ಮಾ-ಶೋಯೆ ಉದ್ಧತಭಾವದಿಂದ ಎಂದಳು: “ ಕಾಣ ಬೇಕಾದ ಅಗತ್ಯವಿದ್ದರೆ ಅವರ ಮನೆಗೆ ಹೋಗು, ನಮ್ಮಲ್ಲಿ ಏಕೆ? ”

“ ಒಳ್ಳೆಯದು, ಅಲ್ಲಿಗೇ ಹೋಗುತ್ತೇನೆ ” ಎಂದು ಮುದುಕ ಹೊರಟುಹೋದ. ಮನಸಿನೊಳಗೇ ಎಂದುಕೊಳ್ಳುತ್ತ ಹೋದ: ಬರೀ ಅವನನ್ನೊಬ್ಬನನ್ನೇ ನೋಡಿದರೆ ಆಗದು– ನಿಮ್ಮಿಬ್ಬರನ್ನೂ ಜೋಡಿ ಗೆಯೇ ನೋಡಬೇಕೆಂದು ನನ್ನಾಶೆ; ಇಲ್ಲದಿದ್ದರೆ ಇಷ್ಟು ದೂರದಿಂದ ಬಂದುದು ವ್ಯರ್ಥವೇ.

ಆದರೆ ಹಳಬನ ಮನಸಿನ ಮಾತು ಈ ಹೊಸಬಳಿಗೆ ತಿಳಿಯುದಿ ರಲಿಲ್ಲ. ಆಗ ಅವಳು ಒಂದು ತರಹದ ಸಚಕಿತ ಅವಸ್ಥೆಯಲ್ಲಿಯೆ ತನ್ನೆಲ್ಲ ಕೆಲಸಗಳನ್ನು ಮಾಡುತ್ತ ಕಾಲ ಕಳೆಯುತ್ತಿದ್ದಳು. ಒಮ್ಮೆ ಗಿಲೆ, ಬಿಗಿದ ಕಂಠದ ಅಸ್ಫುಟ ಶಬ್ದದಿಂದ ಎಚ್ಚತ್ತು ಕಣ್ದೆರೆದು ನೋಡಿ ದಳು–– ಬಾ-ಥಿನ! ಅವಳ ಮೈಯಲ್ಲೆಲ್ಲಾ ವಿದ್ಯುತ್ತು ಹರಿದಾಡಿತು. ಆದರೆ ಕಣ್ಣೆವೆ ಬಡಿಯುವುದರೊಳಗೆ ತನ್ನನ್ನು ತಾನು ಸಾವರಿಸಿ ಕೊಂಡು, ಅವಳು ಮೋರೆ ತಿರುಗಿಸಿಕೊಂಡು ಬೇರೆ ಕಡೆ ಹೊರಟು ಹೋದಳು.

ಸ್ವಲ್ಪ ಹೊತ್ತಿನಮೇಲೆ ಮುದುಕ ತಿರುಗಿ ಬಂದು “ ಚಿಕ್ಕತಾಯಿ, ಹೋಗಿಬಿಟ್ಟ ನಿನ್ನ ಅತಿಥಿ! ಏಕೆ ಒಂದು ಮಾತನ್ನೂ ಆಡಲಿಲ್ಲ, ಅವ ನೊಂದಿಗೆ? ” ಎಂದ.

“ ನಿನಗೇನು ನಾನು ಕರೆದುಕೊಂಡು ಬರಲು ಹೇಳಿದ್ದಿಲ್ಲ. ”

“ ಅದೇ ನನ್ನ ತಪ್ಪಾಯಿತು ” ಎನ್ನುತ್ತ ಅವನು ಹೊರಟು ಹೋಗುತ್ತಲಿದ್ದ. ಮಾ-ಶೋಯೆ ಕರೆದು ನಿಲ್ಲಿಸಿ ನುಡಿದಳು: “ ಒಳ್ಳೆ ಯದು, ನಾನೇನೋ ಮಾತಾಡಲಿಲ್ಲ– ಮತ್ತವರಿದ್ದರಲ್ಲ, ಅವರಾದರೂ ಮಾತಾಡಬಹುದಿತ್ತಲ್ಲ! ” ಮುದುಕ ಎಂದ: “ ಹೂಂ– ಬಹುದಿತ್ತು. ಆದರೆ ಇನ್ನಿಲ್ಲ. ಅವರು ಹೋಗಿಬಿಟ್ಟಿದ್ದಾರೆ. ”

ಮಾ-ಶೋಯೆ ಚಣಹೊತ್ತು ಸ್ತಂಭಿತಳಾಗಿದ್ದಳು. ಆಮೇಲೆಂ ದಳು: “ ನನ್ನ ಹಣೆಬರಹ. ಅದು ಒಳ್ಳೆಯದಾಗಿದ್ದರೆ ನೀನಾದರೂ ಅವನಿಗೆ ಉಂಡು ಹೋಗಲು ಹೇಳುತ್ತಿದ್ದೆ. ”

“ ಇಲ್ಲ, ನಾನು ಅಷ್ಟು ನಿರ್ಲಜ್ಜನಲ್ಲ” ಎಂದು ಮುದುಕನು ಸಿಟ್ಟು ಸೆಡವಿನಿಂದ ಹೊರಟುಹೋದ.

೮

ಈ ಅಪಮಾನದಿಂದ ಬಾ-ಥಿನನ ಕಣ್ಣಲ್ಲಿ ನೀರಾಡಿತು. ಆದರೆ ಅವನು ಯಾರಿಗೂ ದೋಷ ಕೊಡಲಿಲ್ಲ. ಅಡಿಗಡಿಗೆ ತನ್ನನ್ನೇ ಧಿಕ್ಕರಿಸಿಕೊಳ್ಳುತ್ತ “ ಇದು ಒಳ್ಳೆಯದೇ ಆಯಿತು. ನನ್ನಂತಹ ನಾಚಿಕೆಗೆಟ್ಟವನಿಗೆ ಇದರಿಂದ ಪ್ರಯೋಜನವೇ ಆಯಿತು ” ಎಂದುಕೊಂಡ.

ಆದರೆ ಪ್ರಯೋಜನವೆಂದರೆ ಇಷ್ಟೇ–ಅದು ಒಂದು ರಾತ್ರಿಯೊಳಗೇನೂ ಮುಗಿಯಲಿಲ್ಲ-ಅದಕ್ಕಿಂತ ಹೆಚ್ಚಿತು. ಎಷ್ಟೋ ಹೆಚ್ಚಿನ ಅಪಮಾನಗಳು ಅವನ ಅದೃಷ್ಟದಲ್ಲಿದ್ದವು. ಇದು ಮಾತ್ರ ಎರಡು ದಿನಗಳ ಮೇಲೆ ಕೊನೆಗಂಡಿತು. ಹೀಗೆ ಕೊನೆಗೊಂಡ ಆ ಲಜ್ಜೆಯನ್ನು ಇಡೀ ಜೀವನದಲ್ಲಿ ಎಲ್ಲಿಡುವನು? ಅದಕ್ಕೆ ಮಿತಿ–ಮೇರೆ ಕೂಡ ಇಲ್ಲ.

ಆ ಜಾತಕದ ಗೋಪಿಯು ಚಿತ್ರ ಬರೆಯುತ್ತಿರುವ ಈ ಕತೆಗೆ ವಿಷಯವಾದ ಚಿತ್ರ ಇಷ್ಟು ದಿನಗಳಲ್ಲಿ ಮುಗಿದಿದೆ. ಒಂದು ತಿಂಗಳಿಗಿಂತ ಹೆಚ್ಚು ದಿನಗಳ ದಾವತಿಯ ಫಲವು ಇಂದು ಕೈಗೂಡಿದೆ. ಮುಂಜಾನೆಯೆಲ್ಲಾ ಅವನು ಇದೇ ಆನಂದದಲ್ಲಿ ಮುಳುಗಿದ್ದ.

ಇನ್ನು ಚಿತ್ರವು ರಾಜದರ್ಬಾರಕ್ಕೆ ಹೋಗಬೇಕು. ಬೆಲೆ ಕೊಟ್ಟು ಒಯ್ಯುವ ಮನುಷ್ಯನು ಧಾರಣೆ ಮಾಡುವುದಕ್ಕೆ ಬಂದ. ಆದರೆ ಚಿತ್ರದ ಮುಸುಕನ್ನು ತೆಗೆಯುತ್ತಲೆ ಅವನು ಬೆರಗು-ಬೆಪ್ಪಾದ. ಚಿತ್ರಗಳ ವಿಷಯದಲ್ಲಿ ಅನಭಿಜ್ಞನಾಗಿರಲಿಲ್ಲ ಆತ; ಬಹಳ ಹೊತ್ತು ಅದನ್ನು ದಿಟ್ಟಿಸಿ ನೋಡುತ್ತಲಿದ್ದು, ಕೊನೆಗೆ ಹೇಳಿದ: “ ಈ ಚಿತ್ರವನ್ನು ನಾನು ರಾಜನಿಗೆ ಒಯ್ದು ಕೊಡಲಾರೆ, ”

ಬಾ-ಥಿನನು ಅರೆವಾಸಿ ಭಯದಿಂದ, ಅರೆವಾಸಿ ವಿಸ್ಮಯದಿಂದ ಹತಬುದ್ಧನಾಗಿ ಕೇಳಿದ : "ಏಕೆ?"

"ಏಕೆಂದರೆ, ಈ ಮುಖವೇ ಕಾರಣ. ಮಾನವರ ರೂಪಮುದ್ರೆಗಳು ದೇವತೆಗಳ ಚಿತ್ರಕ್ಕೆ! ಇದರಿಂದ ದೇವತೆಗಳನ್ನು ಅವಮಾನಗೊಳಿಸಿದ್ದೀರಿ. ಈ ವಿಷಯ ರಾಜನಿಗೆ ಗೊತ್ತಾದರೆ ಅವನು ನನ್ನ ಮುಖವನ್ನೂ ನೋಡಲಿಕ್ಕಿಲ್ಲ."

ಹೀಗೆಂದು ಅವನು ಚಿತ್ರಕಾರನ ಅರಳಿದ ವ್ಯಾಕುಲ ನಯನಗಳ ಕಡೆ ಸ್ವಲ್ಪ ಹೊತ್ತು ನೋಡಿ, ಮುಖವನ್ನು ಮರೆಮಾಡಿಕೊಂಡು ನಸುನಕ್ಕು "ಮನಸುಗೊಟ್ಟು ನೋಡಿದರೆ ತಿಳಿಯುತ್ತದೆ, ಇದು ಯಾರು ಎಂತ. ಈ ಚಿತ್ರ ದರಬಾರದಲ್ಲಿ ನಡೆಯುವುದಿಲ್ಲ" ಎಂದ.

ಬಾ-ಥಿನನ ಕಣ್ಣಮುಂದೆ ಮೆಲ್ಲಮೆಲ್ಲನೆ ಮಂಜಿನ ಮೋಡವು ಹಾಯ್ದು ಹೋಗುತ್ತಿತ್ತು. ಬಂದ ಆ ಮಹಾಶಯನು ಹೋದ ಮೇಲೆಯೂ ಎಷ್ಟೋ ಹೊತ್ತು ಅವನು ನಟ್ಟನೋಟದಿಂದ ನೋಡುತ್ತ ನಿಂತಿದ್ದ. ಅವನ ಕಣ್ಣುಗಳಿಂದ ನೀರು ಉದಿರತೊಡಗಿತು. ಇನ್ನವನ ಬುದ್ಧಿಯೆಲ್ಲ ಇಲ್ಲಿಗೆ ಮುಗಿದುಹೋಗಿದೆ. ಇಷ್ಟು ದಿನ ಎಷ್ಟೊಂದು ಜೀವ ಸಣ್ಣಮಾಡಿಕೊಂಡು ದಾವತಿಬಟ್ಟು ಅವನು ತನ್ನ ಹೃದಯಾಂತರಾಳದೊಳಗಿಂದ, ಆ ಸೌಂದರ್ಯವನ್ನು ಆ ಮಾಧುರ್ಯವನ್ನು ಹೊರತಂದು, ದೇವತೆಯ ರೂಪದಲ್ಲಿ ಅದನ್ನು ತುಂಬಿದ್ದ—ಆ ರೂಪು ಜಾತಕದ ಗೋಪೆಯದಲ್ಲ, ಅವನ ಮಾ-ಶೋಯೆಯದೆ!

ಕಣ್ಣೊರಸಿಕೊಂಡು ಮನಸಿನೊಳಗೆ ಎಂದುಕೊಂಡ: "ದೇವರೇ, ನನ್ನನ್ನು ಹೀಗೇಕೆ ವಿಡಂಬನೆ ಮಾಡುತ್ತೀ? ನಾನು ನಿನಗೆ ಮಾಡಿದುದಾದರೂ ಏನು?"

೯

“ ನಿನ್ನನ್ನು ಸುರರರೂ ಬಯಸುತ್ತಾರೆ, ಮಾ-ಶೋಯೆ, ನಾನಂತೂ ನರಮನುಷ್ಯ ” ಎಂದು ಧೈರ್ಯವನ್ನು ತಂದುಕೊಂಡು ಪೋ-ಥಿನನೆಂದ.

“ ಆದರೆ ನನ್ನನ್ನು ಇಚ್ಛಿಸದವನು ಸುರರಿಗಿಂತಲೂ ಹೆಚ್ಚಿನವನು ಎಂದೆನಿಸುತ್ತದೆ ನನಗೆ ! ” ಎಂದಳು ಮಾ-ಶೋಯೆ ಅನ್ಯಮನಸ್ಕಳಂತೆ.

ಆದರೆ ಅವಳೀ ಪ್ರಸಂಗವನ್ನುಮುಂದವರಿಯಗೊಡಲಿಲ್ಲ. “ನಾನು ಕೇಳಿದ್ದೇನೆ– ದರಬಾರದಲ್ಲಿ ತಮ್ಮ ಪ್ರತಿಷ್ಠೆ ಚೆನ್ನಾಗಿ ಇದೆ ಎಂತ. ನನ್ನ ಒಂದು ಕೆಲಸವಿದೆ, ತಾವದನ್ನು ಮಾಡಿಕೊಡಬಲ್ಲಿರಾ? ಬೇಗನೆ ಆಗಬೇಕು. ” ಎಂದಳು.

ಪೋ-ಥಿನನು ಒಳ್ಳೆಯ ಉತ್ಸುಕತೆಯಿಂದ “ ಏನು ? ” ಎಂದು ಕೇಳಿದ.

“ ಒಬ್ಬರಿಗೆ ನಾನು ಬಹಳ ಹಣವನ್ನು ಸಾಲ ಕೊಟ್ಟಿದ್ದೆ, ಅದನ್ನು ತಿರುಗಿ ಪಡೆಯುವುದು ಆಗಲೊಲ್ಲದು. ಮಧ್ಯಸ್ಥರಾರೂ ಇಲ್ಲ. ತಾವೇನಾದರೂ ಒಂದು ಹಂಚಿಕೆ ಹೂಡುತ್ತೀರಾ, ಎಂತ.”

“ ಓ, ಹೂಡಬಲ್ಲೆ. ಈ ರಾಜಕರ್ಮಚಾರಿ ಯಾರು ಎಂದು ನಿನಗೆ ಗೊತ್ತಿಲ್ಲವೆ? ” ಎಂದು ಅವನು ನಕ್ಕ.

ಆ ನಗೆಯಲ್ಲಿಯೆ ಉತ್ತರದ ಸ್ಪಷ್ಟೀಕರಣವಿತ್ತು. ಮಾ-ಶೋಯೆ ವ್ಯಗ್ರಳಾಗಿ ಅವನ ಕೈಯನ್ನು ಅದುಮಿ ಹಿಡಿದು “ ಇದೇ ದಿನ ಒಂದು ಉಪಾಯ ಮಾಡಿರಿ, ಇಂದೇ. ಇನ್ನು ಒಂದು ದಿನವೂ ತಡೆಯುವುದು ನನಗಿಷ್ಟವಿಲ್ಲ ” ಎಂದಳು.

ಪೋ-ಥಿನನು ತಲೆ ಅಲ್ಲಾಡಿಸಿ ಎಂದ : “ ಅದೇ ಒಳ್ಳೆಯದು. ”

ಈ ಸಾಲ ಬಹುದಿನ ಅದೆಷ್ಟು ತುಚ್ಛವಾಗಿತ್ತು, ಅದೆಷ್ಟು ಅವ್ಯವಹಾರ್ಯವಾಗಿತ್ತು, ಅದೆಷ್ಟು ನಗೆಚಾಟಿಕೆಯ ವಿಷಯವಾಗಿತ್ತು ? ಅದರ

ಬಗ್ಗೆ ಯಾರೂ ಎಂದೂ ಚಿಂತೆ ಮಾಡಿರಲಿಲ್ಲ. ಆದರೆ ಈ ದಿನ ರಾಜ ಕರ್ಮಚಾರಿಯ ಮುಖದಿಂದ ಹೊರಟ ಆಶ್ವಾಸನೆಯಿಂದ ಮಾ-ಶೋಯೆಗೆ ಕ್ಷಣಿಕ ಉತ್ತೇಜನವುಂಟಾಗಿ ಅವಳ ಮೈಯೆಲ್ಲವೂ ಕಾಯ್ದುಹೋಯಿತು. ಅವಳ ಎರಡು ಕಣ್ಣುಗಳೂ ಮಿಂಚಿದವು; ಎಲ್ಲ ಇತಿಹಾಸವನ್ನು ವಿವರಿಸಿ, ಹೇಳತೊಡಗಿದಳು: "ನಾನು ಸ್ವಲ್ಪವೂ ಬಿಡುವುದಿಲ್ಲ— ಒಂದು ಕವಡಿಯನ್ನು ಕೂಡ ಬಿಡುವುದಿಲ್ಲ. ಎಷ್ಟು ರಕ್ತ ವನ್ನು ಶೋಷಿಸಿಯಾದರೂ ತಾವು ಅಷ್ಟು ಮಾಡಿ ಕೊಡಿರಿ. ಇಂದೇ— ಈಗಳೇ ಆಗುವುದಲ್ಲವೇ?"

ಈ ವಿಷಯದಲ್ಲಿ ಆ ಮನುಷ್ಯನಿಗೆ ಹೆಚ್ಚು ಹೇಳುವುದೇನಿದೆ? ಆದರೆ ಇದು— ಇಷ್ಟು ಆತುರದಿಂದ ಸಾಧಿಸುವುದು— ಆತನ ಅಳ ವಿಗೆ ಅತೀತವಾದದ್ದು. ಅವನು ಒಳಗಿನ ಆನಂದವನ್ನೂ ಸಂಭ್ರಮ ವನ್ನೂ ಹೇಗೋ ಸಾವರಿಸಿಕೊಂಡು ಹೇಳಿದ: "ರಾಜನ ಅಪ್ಪಣೆ ದೊರೆಯುವುದಕ್ಕೆ ಕನಿಷ್ಠ ಏಳು ದಿನ ಬೇಕು. ಅಷ್ಟು ದಿನ ಹೇಗಾದರೂ ತಾಳಿಕೊಂಡಿರಬೇಕು. ಆ ಮೇಲೆ ಮನಬಂದಂತೆ ಮನವಾರೆ ರಕ್ತ ಹೀರುವುದಕ್ಕೆ ನಾನೇನು ಬೇಡವೆನ್ನುವುದಿಲ್ಲ."

"ಒಳ್ಳೆಯದು ಆಗಲಿ. ನೀವಿನ್ನು ಹೋಗಬಹುದು." ಎಂದ ವಳು ಚಟಕ್ಕನೆದ್ದು ಹೊರಟುಬಿಟ್ಟಳು.

ಈ ತಿಳಿಯಲಾರದ ಹುಡಿಗಿಯ ಮೇಲಿನ ಆ ಪ್ರಾಣಿಯ ಪ್ರೀತಿಗೆ ಅವಧಿಯೇ ಇರಲಿಲ್ಲ. ಅದಕ್ಕೇ ಅವನು ಅನೇಕ ಅವಹೇಲನ ಗಳನ್ನು ನುಂಗಿಕೊಳ್ಳುತ್ತಿದ್ದ, ಇಂದೂ ನುಂಗಿಕೊಂಡ. ತಿರುಗಿ ಮನೆಗೆ ಹೋಗುವಾಗ ದಾರಿಯಲ್ಲಿ ಅವನ ಪುಲಕಿತ ಚಿತ್ತವು ತನ್ನಷ್ಟಕ್ಕೆ ತಾನೆ ಮತ್ತೆ ಮತ್ತೆ ಇದೇ ಮಾತುಗಳನ್ನು ಹೇಳಿಕೊಳ್ಳುತ್ತಿತ್ತು: "ಇನ್ನು ಅಂಜಿಕೆಯಿಲ್ಲ— ತನ್ನ ಸಫಲತೆಯ ಹಾದಿ ನಿಷ್ಕಂಟಕವಾಗಲಿಕ್ಕೆ ಇನ್ನೇನೂ ವಿಲಂಬವಾಗುವುದಿಲ್ಲವೆಂದು ತೋರುತ್ತದೆ— ನಿಜವಾಗಿ ತಡವಿಲ್ಲ. ಆದರೆ ಎಷ್ಟು ಬೇಗನೆಯೆ ಎಷ್ಟು ಅತಿ ವಿಸ್ಮಯದ ಘಟನೆ

ಯನ್ನು ದೇವರು ಆತನ ಅದೃಷ್ಟದಲ್ಲಿ ಬರೆದಿಟ್ಟಿರುವನೋ! ಅದನ್ನು ಇಂದು ಅವನು ಕಲ್ಪನೆಯಲ್ಲಿ ತರುವುದೂ ಅಸಂಭವವಾಗಿತ್ತು.

೧೦

ಸಾಲ ತೀರಿಸುವುದಕ್ಕೆ ಕಾಗದ ಬಂತು. ಬಾ-ಥಿನನು ಕಾಗದ ವನ್ನು ಕೈಯಲ್ಲಿ ಹಿಡಿದುಕೊಂಡು ಬಹಳ ಹೊತ್ತು ಸುಮ್ಮನೆ ಕುಳಿತು ಕೊಂಡ. ಹೀಗಾಗುವುದೆಂದು ನಿಜವಾಗಿಯೂ ಎಣಿಸಿರಲಿಲ್ಲ ಆತ. ಆದರೆ ಆಶ್ಚರ್ಯವೂ ಆಗಲಿಲ್ಲ ಆತನಿಗೆ. ಸಮಯ ಬಹಳವಿಲ್ಲ; ಬೇಗ ನೆಯೆ ಏನಾದರೊಂದು ಏರ್ಪಾಡು ಮಾಡಬೇಕು.

ಒಂದು ದಿನ ಮಾ-ಶೋಯೆ ಅವನ ತಂದೆಯ ಅಪವ್ಯಯದ ಬಗ್ಗೆ ಸಿಟ್ಟು ಸಿಟ್ಟಿನಿಂದ ಟೀಕಿಸಿದ್ದಳು. ಅವಳಪರಾಧವನ್ನು ಅವನು ಮರೆತೂ ಇಲ್ಲ, ಕ್ಷಮಿಸಿಯೂ ಇಲ್ಲ. ಅದಕ್ಕೇ ಅವನು ಅವಧಿಯನ್ನು ಕೇಳಿಕೊಳ್ಳುವ ಮಾತೆತ್ತಿ ತಂದೆಯನ್ನು ಮತ್ತಿಷ್ಟು ಅವಮಾನಕ್ಕೆ ಗುರಿ ಮಾಡುವಂತಹ ಕಲ್ಪನೆಗೆ ತನ್ನ ಮನಸಿನಲ್ಲಿ ಇಂಬುಗೊಡಲಿಲ್ಲ. ಇದ್ದ ಚಿಂತೆಯೊಂದೇ, ತನ್ನಲ್ಲಿದ್ದುದೆಲ್ಲವನ್ನು ನೀಗಿಟ್ಟರೂ ತಂದೆ ಋಣಮುಕ್ತನಾಗುವನೋ ಇಲ್ಲವೊ. ಊರೊಳಗೆ ಒಬ್ಬ ಸಾಹುಕಾರ ಮಹಾಶಯನಿದ್ದ. ಮರುದಿನ ಬೆಳಿಗ್ಗೆ ಎದ್ದವನೇ ಬಾ-ಥಿನನು ಆತನ ಹತ್ತಿರ ಹೋಗಿ; ಗುಟ್ಟಾಗಿ ಸರ್ವಸ್ವವನ್ನೂ ಮಾರುವ ಪ್ರಸ್ತಾಪ ವನ್ನು ತೆಗೆದ. ಅವನು ಕೊಡಲೊಪ್ಪಿದ ಬೆಲೆಯು ಸಾಕಷ್ಟಾಗುವು ದೆಂದು ಕಂಡಿತು. ಅಷ್ಟು ಹಣವನ್ನು ಕಟ್ಟಿಕೊಂಡು ಮನೆಗೆ ಬಂದ. ಆದರೆ ಒಬ್ಬಳ ಅಕಾರಣವಾದ ಹೃದಯಶೂನ್ಯತೆಯ ಆಘಾತವು ಅವನ ತನುಮನಗಳ ಮೇಲೆ ತಿಳಿಯದಂತೆಯೇ ಎಷ್ಟು ಭಯಂಕರ ವಾಗಿ ಆಯಿತೆಂಬುದು, ಜ್ವರದಿಂದ ಬಿದ್ದುಕೊಂಡಾಗ ಅವನಿಗೆ ತಿಳಿಯಿತು.

ದಿನ-ರಾತ್ರಿಗಳನ್ನು ಎಲ್ಲಿ ಹೇಗೆ ಕಳೆದೆನೆಂಬ ಎಚ್ಚರವೇ ಅವನಿಗಿರಲಿಲ್ಲ. ಎಚ್ಚೆತ್ತು ಎದ್ದು ಕುಳಿತಾಗ ನೋಡಿದರೆ, ಅದೇ ತನ್ನ ಬಂಧನದ ಅವಧಿಯ ಕೊನೆಯ ದಿನವಾಗಿತ್ತು.

ಇಂದು ಕೊನೆಯ ದಿನ. ತನ್ನ ಏಕಾಂತದ ಕೋಣೆಯಲ್ಲಿ ಕುಳಿತು ಮಾ-ಶೋಯೆ ಕಲ್ಪನೆಯ ಬಲೆಯನ್ನು ಹೆಣೆಯುತ್ತಿದ್ದಳು. ಅವಳ ಅಹಂಕಾರವು ಕ್ಷಣಕ್ಷಣಕ್ಕೂ ಭಗ್ನವಾಗಿ, ಇನ್ನೊಬ್ಬನ ಅಹಂಕಾರವು ಒಮ್ಮಿಗಿಲೇ ಮುಗಿಲು ಸೀಳುವಂತೆ ಮೇಲಕ್ಕೇರಿ ನಿಂತಿತು. ತನ್ನ ವಿರಾಟ್ ಅಹಂಕಾರವು ಇಂದು ಅವನ ಕಾಲಡಿಯಲ್ಲಿ ಬಿದ್ದು ಮಣ್ಣುಗೂಡುತ್ತದೆಂಬುದರದಲ್ಲಿ ಅವಳಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ.

ಈ ಹೊತ್ತಿನಲ್ಲಿ ಆಳು ಬಂದು ತಿಳಿಸಿದ: “ ಕೆಳಗೆ ಬಾ-ಥಿನನು ಬೆಟ್ಟಿಯನ್ನು ಕೋರುತ್ತಿದ್ದಾನೆ. ” ಮಾ-ಶೋಯೆ ಮನಸಿನೊಳಗೇ ಕ್ರೂರವಾದ ನಗೆಯನ್ನು ನಕ್ಕು “ ಹಾ, ತಿಳಿಯಿತು ” ಎಂದಳು. ಅವಳು ಸ್ವತಃ ಇವನನ್ನೇ ಪ್ರತೀಕ್ಷಿಸುತ್ತಿದ್ದಳು.

ಮಾ-ಶೋಯೆ ಕೆಳಗೆ ಬರುತ್ತಲೇ ಬಾ-ಥಿನನು ಎದ್ದು ನಿಂತ. ಅವನ ಮೋರೆಯ ಕಡೆ ನೋಡಿದಾಕ್ಷಣಕ್ಕೆ ಮಾ-ಶೋಯೆಯ ಹೃದಯದಲ್ಲಿ ಕಳವಳವಾಯಿತು. ಅವಳಿಗೆ ದುಡ್ಡು ಬೇಡಾಗಿತ್ತು; ದುಡ್ಡಿನ ಮೇಲೆ ಅವಳಿಗೆ ಗುಂಜಿಯಷ್ಟೂ ಲೋಭವಿಲ್ಲ; ಆದರೆ ಅದೇ ದುಡ್ಡಿಗಾಗಿ ಎಷ್ಟು ಭಯಂಕರ ಅತ್ಯಾಚಾರವಾಗುತ್ತಿದೆಯೆಂಬುದು ಈಗ ವಳಿಗೆ ಆ ಮೋರೆಯಲ್ಲಿ ಕಾಣುತ್ತಿದೆ. ಬಾ-ಥಿನನು ಮೊದಲು ಮಾತಾಡಿದ: “ ಏಳು ದಿನಗಳಲ್ಲಿ ಕೊನೆಯ ದಿನವಿಂದು; ನಿನ್ನ ಹಣವನ್ನು ತಂದಿದ್ದೇನೆ. ”

ಅಕಟಾ, ಮನುಷ್ಯ ಸಾಯಲಾಗಿದ್ದರೂ ಅವಳ ದರ್ಪಕ್ಕೇನೂ ಚ್ಯುತಿಯಿಲ್ಲ. ಇಲ್ಲದಿದ್ದರೆ, ಪ್ರತ್ಯುತ್ತರರೂಪವಾಗಿ ಮಾ-ಶೋಯೆಯ ಬಾಯಿಂದ ಇಂಥ ಮಾತು ಹೇಗೆ ಹೊರಬೀಳುತ್ತಿತ್ತು? ಅವಳು ಏನೋ ಸ್ವಲ್ಪ ಹಣವನ್ನು ಕೇಳಿರಲಿಲ್ಲ— “ ಸಾಲದ ಎಲ್ಲ ದುಡ್ಡನ್ನೂ ಕೊಡಲಿಕ್ಕೆ ಹೇಳಿದ್ದೆ! ” ಎಂದಳು.

ಬಾ-ಥಿನನ ಬಸವಳಿದು ಬಾಡಿದ ಮುಖವು ನಗೆಗೂಡಿತು. "ಹೂಂ ಹೌದು; ನಿನ್ನ ಎಲ್ಲಾ ಹಣವನ್ನು ತಂದಿದ್ದೇನೆ." ಎಂದು ನುಡಿದ.

"ಎಲ್ಲಾ? ಎಲ್ಲಿಂದ ತಂದೆ?"

"ನಾಳೆ ತಿಳಿದುಕೊಳ್ಳುವೆಯಂತೆ. ಇಕಾ, ಈ ಪೆಟ್ಟಿಗೆಯಲ್ಲಿ ಇದೆ, ಹಣ. ಯಾರಿಗಾದರೂ ಎಣಿಸಿಕೊಳ್ಳಲು ಹೇಳು."

ಬಂಡಿಯವನು ಹೊರಬಾಗಿಲಲ್ಲಿ ಅವನನ್ನು ಕುರಿತು ಪ್ರಶ್ನಿಸಿದ: "ಇನ್ನೂ ಎಷ್ಟು ಹೊತ್ತಾಗುತ್ತದೆ?" ಮತ್ತೆ ಹೇಳಿದ: "ವೇಳೆಗೆ ಹೊರಡದಿದ್ದರೆ, ಕತ್ತಲಾಗುವುದರೊಳಗೆ ಪೇಗುವನ್ನು ಸೇರುವುದಾಗ ಲಿಕ್ಕಿಲ್ಲ."

ಮಾ-ಶೋಯೆ ಗೋಣನ್ನು ನೀಡಿ ಹೊರಕ್ಕೆ ನೋಡಿದಳು. ಬೀದಿಯಲ್ಲಿ ಎತ್ತಿನ ಬಂಡಿಯೊಂದು ನಿಂತಿತ್ತು. ಅದರಲ್ಲಿ ಪೆಟ್ಟಿಗೆ, ಹಾಸಿಗೆ ಮೊದಲಾದುವಿದ್ದವು. ಅವಳು ಬೆಚ್ಚಿದಳು. ನಿಮಿಷದಲ್ಲಿ ಅವಳ ಮುಖವೆಲ್ಲ ವಿವರ್ಣವಾಯಿತು. ವ್ಯಾಕುಲತೆಯಿಂದ ಒಮ್ಮೆಗಿಲೇ ಸಾವಿರ ಪ್ರಶ್ನೆಗಳನ್ನು ಕೇಳತೊಡಗಿದಳು: "ಪೇಗುವಿಗೆ ಯಾರು ಹೋಗುತ್ತಾರೆ? ಬಂಡಿ ಯಾರದು? ಎಲ್ಲಿಂದ ಇಷ್ಟು ಹಣ ತಂದೆ? ಸುಮ್ಮನೆ ಏಕೆ ಇದ್ದೀ? ನಿನ್ನ ಕಣ್ಣು ಇಂಗಿವೆಯೇತಕ್ಕೆ? ನಾಳೆ ಏಕೆ ತಿಳಿಯಬೇಕು? ಈವೊತ್ತು ಹೇಳಲಿಕ್ಕೆ ನಿನಗೆ—"

ಮಾತಾಡುತ್ತಾಡುತ್ತ ಅವಳು ತನ್ನನ್ನು ತಾನು ಮರೆತುಬಿಟ್ಟಳು. ಹತ್ತಿರಕ್ಕೆ ಸಾರಿ ಅವನ ಕೈಯನ್ನು ಹಿಡಿದಳು- ತಟ್ಟನೆ ಕೈಯನ್ನು ಬಿಟ್ಟು ಅವನ ಹಣೆಯನ್ನು ಮುಟ್ಟಿನೋಡಿ ಬೆಚ್ಚಿಬಿದ್ದಳು— "ಉಃ, ಇದೇನು ಜ್ವರ, ಅದಕ್ಕೇ ಎಂದೆ, ಮುಖ ಇಷ್ಟೇಕೆ ಬಾಡಿದೆಯೊ!" ಎಂದಳು.

ಬಾ-ಥಿನನು ತನ್ನನ್ನು ಬಿಡಿಸಿಕೊಂಡು ಶಾಂತ ಮೃದು ಸ್ವರದಿಂದ "ಒಳ್ಳೆಯದು" ಎಂದ. ಹೀಗೆನ್ನುತ್ತ ಕುಸಿಕುಳಿತು "ನಾನು ಮೂಂದಾಲೆಗೆ ಹೋಗುತ್ತಿದ್ದೇನೆ. ಇಂದು ನೀನು ನನ್ನ ಒಂದು ಕೊನೆಯ ಮಾತು ನಡೆಸುತ್ತೀಯಾ?" ಎಂದು ಕೇಳಿದ.

ಮಾ-ಶೋಃಯೆ ತಲೆಹಾಕಿ 'ಹೂ ಕೇಳುತ್ತೇನೆ' ಎಂದು ಸೂಚಿಸಿದಳು. ಬಾ-ಥಿನನು ಒಂದಿಷ್ಟು ಸ್ಥಿರನಾಗಿ ನುಡಿದ: "ನನ್ನ ಕೊನೆಯ ಮಾತು, ನಿಜವಾಗಿಯೂ ಯಾರನ್ನಾದರೂ ಬೇಗನೆ ಮದುವೆಯಾಗು. ಹೀಗೆ ಅವಿವಾಹಿತ ಅವಸ್ಥೆಯಲ್ಲಿ ಇನ್ನು ಹೆಚ್ಚು ದಿನ ಇರಬೇಡ. ಇನ್ನೊಂದು ಮಾತು—"

ಇಷ್ಟೆಂದು ಅವನು ಮತ್ತೆ ಸ್ವಲ್ಪ ಹೊತ್ತು ಮೌನವನ್ನು ಆರಾಧಿಸಿ, ಇನ್ನಷ್ಟು ಮೆಲುದನಿಯಿಂದ ಹೇಳತೊಡಗಿದ: "ಇನ್ನೊಂದು ವಿಷಯವು ನಿನ್ನನ್ನು ಚಿರಕಾಲ ಮನಸಿನಲ್ಲಿ ಇರಿಸುವುದು. ಅದು ಯಾವಾಗಲೂ ಮರೆಯುವುದಿಲ್ಲ,–ಲಜ್ಜೆಯಂತೆ ಅಭಿಮಾನವೂ ಸ್ತ್ರೀಜಾತಿಗೆ ಭೂಷಣವೇನೋ ಹೌದು; ಆದರೆ ಹಿಗ್ಗಾಟ ಜಗ್ಗಾಟದಿಂದ—"

ಮಾ-ಶೋಃಯೆ ಅಧೀರಳಾಗಿ ನಡುವೆಯೆ ಮಾತನಾಡಿದಳು: "ಅದೆಲ್ಲವನ್ನೂ ಇನ್ನೊಂದು ದಿನ ಕೇಳೇನಂತೆ. ಹಣವನ್ನು ಎಲ್ಲಿಂದ ತಂದೆ?"

ಬಾ-ಥಿನನು ನಕ್ಕ. "ಇದನ್ನೇಕೆ ಕೇಳುತ್ತೀ? ನನ್ನದೇನು ನಿನಗೆ ಗೊತ್ತಿಲ್ಲವೆ?" ಎಂದ.

"ಹಣ ತಂದೆ ಎಲ್ಲಿಂದ?"

"ಅಪ್ಪನ ಸಾಲ ಅವನ ಸಂಪತ್ತಿನಿಂದಲೇ ತೀರಿತು. ಅಲ್ಲದೆ ಹೋದರೆ ನನ್ನದೆಂಬುದು ಏನಿತ್ತು?"

"ನಿನ್ನ ಹೂದೋಟ?"

"ಅದೂ ಅಪ್ಪನದೇ."

"ನಿನ್ನ ಇಷ್ಟು ಪುಸ್ತಕಗಳು?"

"ಪುಸ್ತಕಗಳಿಂದ ಇನ್ನೇನಾಗಬೇಕಾಗಿದೆ. ಅಲ್ಲದೆ, ಅವೂ ಕೂಡ ಅಪ್ಪನವೇ."

ಮಾ-ಶೋಃಯೆಯೊಮ್ಮೆ ಉಸಿರ್ಗರೆದು ಎಂದಳು: "ಹೋಗಲಿ, ಚೆನ್ನಾಯಿತು. ಈಗ ಮೇಲೆ ಹೋಗಿ ಮಲಗಿಕೋ ನಡೆ."

"ಆದರೆ ಇಂದೆಯೆ ನಾನು ಹೋಗಬೇಕಾಗಿದೆ."

" ಈ ಜ್ವರದಲ್ಲಿ? ನಿನ್ನನ್ನು ನಾನು ಈ ಅವಸ್ಥೆಯಲ್ಲಿ ಬಿಡುತ್ತೇನೆಂದು ನೀನು ನಿಜವಾಗಿ ನಂಬುತ್ತೀಯಾ? "

ಹೀಗೆಂದು ಅವಳು ಹತ್ತಿರಕ್ಕೆ ಬಂದು ಮತ್ತೆ ಅವನ ಕೈಯನ್ನು ಹಿಡಿದಳು. ಬಾ-ಥಿನನು ಈಗ ವಿಸ್ಮಯದಿಂದ ನೀರಿಕ್ಷಿಸಿದ, ಮಾ-ಶೋಯೆಯ ಮುಖಮುದ್ರೆ ಒಂದು ಗಳಿಗೆಯಲ್ಲಿ ಒಮ್ಮೆಲೆ ಬದಲಾಗಿಬಿಟ್ಟಿತ್ತು. ಆ ಮುಖದಲ್ಲಿ ವಿಷಾದ, ವಿದ್ವೇಷ, ನಿರಾಶೆ, ಲಜ್ಜೆ, ಅಭಿಮಾನ ಏತರ ಚಿಹ್ನವೂ ಇರಲಿಲ್ಲ. ಕೇವಲ ವಿರಾಟ್ ಸ್ನೇಹವು ಆವರಿಸಿತ್ತು. ಅಷ್ಟೇ ವಿಪುಲ ಶಂಕೆಗಳಿದ್ದವು. ಈ ಮುಖವು ಅವನನ್ನು ಒಮ್ಮೆಲೆ ಮಂತ್ರಮುಗ್ಧನನ್ನಾಗಿ ಮಾಡಿಬಿಟ್ಟಿತು. ಅವನು ನಿಶ್ಶಬ್ದವಾಗಿ ಮೆಲ್ಲಮೆಲ್ಲನೆ ಆಕೆಯ ಹಿಂದೆ ಹಿಂದೆ ನಡೆದು ಅಟ್ಟದ ಮೇಲಿನ ಮಲಗುವ ಕೋಣೆಗೆ ಹೋದ.

ಅವನನ್ನು ಮಾ-ಶೋಯೆ ಹಾಸಿಗೆಯಲ್ಲಿ ಮಲಗಿಸಿ ತಾನು ಹತ್ತಿರ ಕುಳಿತಳು. ಸಜಲ ನೇತ್ರಗಳೆರಡನ್ನೂ ಆತನ ಬೆಳುಪಾದ ಮೋರೆಯಲ್ಲಿ ಬೆಸೆದು ನುಡಿದಳು: " ಒಂದಿಷ್ಟು ಹಣವನ್ನು ತಂದ ಮಾತ್ರಕ್ಕೆ ನನ್ನ ಋಣವೆಲ್ಲಾ ತೀರಿತೆಂದು ನೀನು ಬಗೆಯುವೆಯೇನು? ಮೂಂದಾಲೆಗೆ ಹೋಗುವ ಮಾತನ್ನು ಬಿಟ್ಟುಬಿಡು. ನನ್ನ ಅಪ್ಪಣೆಯನ್ನು ಮೀರಿ ನೀನು ಈ ಮನೆಯಿಂದ ಹೊರಬಿದ್ದರೆ ನೋಡು— ನಾನು ಈ ಉಪ್ಪರಿಗೆಯ ಮೇಲಿಂದ ಕೆಳಗೆ ಹಾರಿಕೊಂಡು ಜೀವ ಕೊಡುತ್ತೇನೆ. ನೀನು ನನಗೆ ಈತನಕ ಬಹಳ ದುಃಖ ಕೊಟ್ಟಿದ್ದೀ. ಆದರಿನ್ನು ನಾನು ಸ್ವಲ್ಪವೂ ದುಃಖವನ್ನು ಸಹಿಸಲಾರೆ— ಇದನ್ನು ನಿನಗೆ ಖಂಡಿತವಾಗಿ ಹೇಳಿಟ್ಟಿರುತ್ತೇನೆ! "

ಬಾ-ಥಿನನು ಅದಕ್ಕೆ ಉತ್ತರ ಕೊಡಲಿಲ್ಲ. ಮೈಮೇಲೆ ಬಟ್ಟೆಯನ್ನು ಎಳೆದುಕೊಂಡು ಒಂದು ನಿಟ್ಟುಸಿರನ್ನು ಬಿಟ್ಟು, ಮಗ್ಗುಲನ್ನು ಬದಲಿಸಿ ಮಲಗಿದ.

ದಾಯಾದಿಗಳು

ಮುದುಕನಾದ ವೃಂದಾವನ ಸಾಮಂತನು ಒಂದು ದಿನ ತೀರಿಕೊಂಡ. ಆತನಿಗೆ ಇಬ್ಬರು ಮಕ್ಕಳು, ಶಿವು ಮತ್ತು ಶಂಭು. ತಂದೆ ಹೋದಮೇಲೆ ಅವರು ಜಗಳಾಡಿಕೊಳ್ಳುತ್ತ ಬಡಿದಾಡಿಕೊಳ್ಳುತ್ತ ಐದಾರು ತಿಂಗಳು ಒಂದೇ ಮನೆಯೊಳಗೆ ಒಂದೇ ಒಲೆಯ ಮೇಲೆ ಕಳೆದರು. ಅಲ್ಲಿಂದ ಒಂದು ದಿನ ಇಬ್ಬರೂ ಬೇರೆಯಾದರು.

ಊರಿನ ಜಮೀನುದಾರ ಚೌಧುರಿ ಮಹಾಶಯರು ಸ್ವತಃ ಅವರ ಮನೆತನಕ ಬಂದು, ಅವರ ಹೊಲ-ಮನೆ, ನಗ-ನಾಣ್ಯ, ತೋಟ-ಕಟ್ಟೆ— ಎಲ್ಲವನ್ನೂ ಸಮನಾಗಿ ಹಂಚಿಕೊಟ್ಟರು. ಚಿಕ್ಕವನು, ಶಂಭು ಕೆರೆಯ ದಂಡೆಯ ಮೇಲಿದ್ದ ಸಣ್ಣ ಮಣ್ಣಿನ ಮನೆಯನ್ನು ಆರಿಸಿಕೊಂಡು, ತನ್ನ ಹೆಂಡತಿ, ಮಕ್ಕಳು-ಮರಿಗಳನ್ನು ಕಟ್ಟಿಕೊಂಡು ಹೋಗಿ ಅಲ್ಲಿ ಇರತೊಡಗಿದ.

ಎಲ್ಲ ಆಸ್ತಿಯೂ ಪಾಲಾಗಿತ್ತು. ಒಂದೇ ಒಂದು ಪಾಲಾಗದೆ ಉಳಿದಿದ್ದಿತು— ಬಿದಿರಿನ ಪೊದೆ. ಏಕೆಂದರೆ ಅದನ್ನು ಹಂಚುವುದಕ್ಕೆ ಶಿವು ಆತಂಕ ಒಡ್ಡಿದ. ಆತ ಚೌಧುರಿ ಮಹಾಶಯರಿಗೆ ಹೇಳಿದ: "ಮಹಾಶಯ, ಈ ಬಿದಿಗು ಪೊದೆ ನನಗೆ ಬೇಕೇ ಬೇಕು. ನೋಡಿರಿ, ನನ್ನ ಪಾಲಿಗೆ ಬಂದ ಮನೆಯೆಲ್ಲಾ ಬಹಳ ಹಳೆಯದು, ಮುರಕಳಿಗೆ ಬಂದಿದೆ. ಚೆಪ್ಪರದ ತೊಲೆ, ಜಂತೆ, ಕಂಬ ಎಲ್ಲವನ್ನೂ ತೆಗೆದು ಹೊಸದನ್ನು ಹಾಕಬೇಕು; ಅದಕ್ಕೆ ಬಂಬುಗಳು ಬೇಕು. ಮತ್ತಿದಕ್ಕೆ ಊರ ಮುಂದಿಗೆ ಎಲ್ಲಿ ಬಾಯಿ ತೆರೆಯಬೇಕು, ಹೇಳಿರಿ."

ಪ್ರತಿವಾದಿಸಲಿಕ್ಕೆ ಶಂಭು ಎದ್ದು ನಿಂತ. ಅವನು ತನ್ನ ಅಣ್ಣನಿಗಿಂತಲೂ ಮೇಲುದನಿ ತೆಗೆದು ಹೇಳಿದ: "ಮತ್ತೆ ಈ ಕಡೆಯವರ ಮನೆಯ ತೊಲೆ ಕಂಬಗಳಿಗೂ ಬಂಬು ಬೇಕು. ನಮ್ಮ ಮನೆಯ ಮುಟ್ಟುಗಳೇನೂ ಗಟ್ಟಿಮುಟ್ಟಿ ಚಿರಸ್ಥಾಯಿಯಾಗಿರುವವೆಂಬೆಯಾ? ಅದಾಗದು, ಚೌಧುರಿಯವರೆ ಅದಾಗದು. ಬಿದಿರು ಮೆಳೆಯನ್ನು ಬಿಟ್ಟರೆ ನಮಗೇನೂ ನಡೆಯುವುದಿಲ್ಲ, ಹೇಳಿರುತ್ತೇನೆ."

ಅಂದು ಈ ಮಾತಿನ ಚರ್ಚೆ ತಿರುಗಿ ಮುರುಗಿ ಇಷ್ಟೇ ಆಗಿ ಮುಗಿಯಿತು. ಅಂತೂ ಆ ಸಂಪತ್ತಿ ಹಾಗೇ ಇಬ್ಬರದೂ ಸೊತ್ತಾಗಿ ಉಳಿಯಿತು. ಅದರಿಂದಾದ ಪರಿಣಾಮವೆಂದರೆ ಇಷ್ಟೇ— ಶಂಭು ಗಿಡಕ್ಕೆ ಒಂದುಚೂರು ಕೈಹಚ್ಚಿದನೋ ಇಲ್ಲವೋ, ಶಿವು ಒಂದು ಬಡಿಗೆಯನ್ನು ತೆಗೆದುಕೊಂಡು ಏರಿಬರುವನು; ಶಿವೂನ ಹೆಂಡತಿ ಬಿದಿರು ಮೆಳೆಯ ಹತ್ತಿರದಲ್ಲಿ ಹಾಯ್ದಾಡಿದಳೋ ಇಲ್ಲವೋ, ಶಂಭು ಒಂದು ಗುದಿಗೆಯನ್ನು ಹಿಡಿದುಕೊಂಡು ಧಾವಿಸುವನು.

ಆವೊತ್ತಿನ ದಿವಸ ಮುಂಜಾನೆ ಈ ಬಿದಿರು ಮೆಳೆಯ ಕಾಲೊಳಗೇ, ಆ ಎರಡೂ ಮನೆಯವರಲ್ಲಿ ಒಂದು ಅಕಾಂಡ ತಾಂಡವವೇ ನಡೆಯಿತು. ಷಷ್ಠೀ ಪೂಜೆಗೋ ಅಥವಾ ಅಂತಹದೇ ಇನ್ನಾವ ದೇವರ ಕೆಲಸಕ್ಕೋ ಹಿರಿಯ ನೆಗೆಣ್ಣೆ ಗಂಗಾಮಣಿಗೆ ಸ್ವಲ್ಪ ಬಿದಿರಿನ ತೊಪ್ಪಲು ಬೇಕಾಯಿತು. ಆ ಹಳ್ಳಿಯೊಳಗೆ ಈ ವಸ್ತುವಿಗೆ ಏನೂ ಕೊರತೆ

ಯಿರಲಿಲ್ಲ. ಬೇರೆ ಕಡೆ ಎಲ್ಲಿಯಾದರೂ ಆಯಾಸವಿಲ್ಲದೆ ಸಿಕ್ಕಬಹುದಾಗಿತ್ತು. ಆದರೆ ತಮ್ಮ ಗಿಡವನ್ನಿಟ್ಟುಕೊಂಡು ಮುಂದಿಗೆ ಬಾಯಿ ತೆಗೆಯುವುದಕ್ಕೆ ಆಕೆಗೆ ನಾಚಿಕೆಯಿಲ್ಲವೇ? ಅವಳ ಮನಸಿಗೆ ಇನ್ನೂ ಒಂದು ಭರವಸೆಯಿತ್ತು. — ಈ ಹೊತ್ತಿನೊಳಗೆ ಮೈದುನ ನಿಶ್ಚಯವಾಗಿಯೂ ಹೊಲಕ್ಕೆ ಹೋಗಿರುತ್ತಾನೆ, ಮನೆಯೊಳಗೆ ಚಿಕ್ಕ ನೆಗೆಣ್ಣಿ ಒಬ್ಬಾಕೆಯೇ ಇರುತ್ತಾಳೆ, ಅವಳೇನು ಮಾಡುತ್ತಾಳೆ!

ಆದರೆ ಏನು ಕಾರಣವೊ, ಅಂದು ಶಂಭು ಹೊಲಕ್ಕೆ ಹೋಗುವುದು ತಡವಾಗಿತ್ತು. ಅದೇ ನ್ಯಾರಿಯನ್ನು ಮುಗಿಸಿ ಅವನು ಕೈ ಬಾಯಿ ತೊಳೆಯುತ್ತಾ ಇದ್ದ. ಅಷ್ಟರಲ್ಲಿ ಚಿಕ್ಕ ನೆಗೆಣ್ಣಿ ಕೆರೆಯ ಮೆಟ್ಟಿಲ ಕಡೆಯಿಂದ ಬೀಳುತ್ತೇಳುತ್ತ ಓಡಿಬಂದಳು. ಬಂದವಳೇ ಹಿರಿಯ ನೆಗೆಣ್ಣಿಯ ಕಾಯಕವನ್ನು ಗಂಡನಿಗೆ ಉಸುರಿದಳು. ಶಂಭುವಿನ ತಂಬಿಗೆ ಎಲ್ಲಿಯೋ ಉಳಿಯಿತು, ಕೈ ತೊಳೆದುಕೊಳ್ಳುವುದು ಎತ್ತಲೋ ಹೋಯಿತು. ಅವನು ಕೋಲಾಹಲ ಶಬ್ದದಿಂದ ಓಣಿಯನ್ನೆ ಗದಗಮಿಸುತ್ತ ಬಿದಿರು ಮೆಳೆಯ ಹತ್ತಿರಕ್ಕೆ ಹೋದ— ಮೂರೇ ಮೂರು ನೆಗೆತಕ್ಕೆ! ಎಂಜಲು ಗೈಯಿಂದಲೇ ಅತ್ತಿಗೆಯ ಕಯ್ಯಲ್ಲಿದ್ದ ಬಿದಿರು ಸೊಪ್ಪನ್ನು ಕಸಿದುಕೊಂಡು ಬೀಸಾಡಿದ. ಕೈ ತೀಟದೊಡನೆಯೆ ಅವನು ತನ್ನ ಅಣ್ಣನ ಮೇಲೆ ಸಿಕ್ಕಾಬಟ್ಟೆ ಬಾಯಿತಿಂಡಿಯನ್ನೂ ತೀರಿಸಿಕೊಂಡ. ಅವನ್ನೆಲ್ಲಾ ಅವನು ಇನ್ನೆಲ್ಲಿ ಕಲಿತುಕೊಂಡನೋ— ಆದರೆ ನಿಶ್ಚಯವಾಗಿಯೂ ರಾಮಾಯಣದ ಲಕ್ಷ್ಮಣಚರಿತ್ರೆಯಿಂದ ಈ ಶಿಕ್ಷಣವನ್ನು ಪಡೆದಿರಲಾರ.

ಇತ್ತ ಹಿರಿ ನೆಗೆಣ್ಣಿ ಅಳುತ್ತ ರಂಬಾಟ ಮಾಡುತ್ತ ಮನೆಗೆ ಹೋದಳು. ಗಂಡ ಮನೆಯಲ್ಲಿ ಇರಲಿಲ್ಲ. ಅವನಿರುವಲ್ಲಿಗೇ ಸುದ್ದಿಯನ್ನು ಕಳುಹಿದಳು. ಶಿವು ಹೊಲದಲ್ಲಿ ಕೆಲಸ ಮಾಡುತ್ತಿದ್ದವನು, ನೇಗಿಲನ್ನು ಅಲ್ಲಿಯೇ ಚೆಲ್ಲಿಕೊಟ್ಟು, ಕೈಯೊಳಗೆ ಒಂದು ಕೋಲನ್ನು ತೆಗೆದುಕೊಂಡು ಓಡಿಬಂದ. ಬಿದಿರುಗಿಡದ ಹತ್ತಿರ ನಿಂತುಕೊಂಡು, ಅಲ್ಲಿ ಇಲ್ಲದಿದ್ದ ತನ್ನ ತಮ್ಮನನ್ನು ಕುರಿತು ಮಾತಿನ ಅಂಬುಗಳನ್ನು ಎಸೆಯ

ತೊಡಗಿದ. ಅವನು ಎಬ್ಬಿಸಿದ ಈ ಕೂಗಾಟದ ಪ್ರಕಾಂಡಕ್ಕೆ ಅಲ್ಲಿ ಜನ ಜಾತ್ರೆಯೇ ಕೂಡಿತು. ಇಷ್ಟಕ್ಕೆ ಅವನ ಹೊಟ್ಟೆಯೊಳಗಿನ ಸಿಟ್ಟು ತೀರ ಬೇಕಲ್ಲ! ಅವನು ತಮ್ಮನ ಮೇಲೆ ದೂರು ಹೇಳಲಿಕ್ಕೆಂದು ಜಮೀನು ದಾರ ಮಹಾಶಯರ ಮನೆಗೆ ಹೋದ. ಕಾಲು ಹೋಗುತ್ತಲಿದ್ದಾಗ ಬಾಯಿ ತನ್ನ ಕೆಲಸವನ್ನು ನಿರರ್ಗಳವಾಗಿ ನಡೆಸಿಯೆ ಇತ್ತು- ಚೌಧುರಿ ಯವರು ಇದನ್ನು ವಿಚಾರಿಸಿ ಅವನಿಗೆ ಶಾಸನ ಮಾಡಿದರು, ನೆಟ್ಟ ಗಾಯ್ತು; ಇಲ್ಲದೆ ಹೋದರೆ ತಾನು ಕಚೇರಿಕಟ್ಟೆಗೆ ಹೋಗಿ ವ್ಯಾಜ್ಯ ವನ್ನು ಹೂಡುವನು. ಹೀಗೆ ಮಾಡಿದರೇ ತನ್ನ ಹೆಸರು ಶಿವು ಸಾಮಂತ!

ಇತ್ತ ಬಿದಿರುಗಳಗಳನ್ನು ಮುರಿದು ಹಾಕುವ ತನ್ನ ಕರ್ತವ್ಯ ವನ್ನು ಪೂರೈಸಿದುದಕ್ಕಾಗಿ ಶಂಭುವಿನ ಮನಸಿಗೆ ನೆಮ್ಮದಿಯಾಯಿತು. ಆ ಮೇಲೆ ಎತ್ತುಗಳನ್ನು ಬಿಟ್ಟುಕೊಂಡು, ರಂಟೆಯನ್ನು ತೆಗೆದುಕೊಂಡು ಹೊಲಕ್ಕೆ ಹೋದ. ಅವನ ಹೆಂಡತಿ ಚಾಲುವರಿದು 'ಮನೆಬಿಟ್ಟು ಹೋಗ ಬೇಡಿರಿ ಈ ಹೊತ್ತು' ಎಂದು ಹೇಳಿದಳು; ಆದರೆ ಅವನು ಕೇಳಲಿಲ್ಲ. ಮನೆಯಲ್ಲಿ ಕಿರಿನೆಗೆಣ್ಣೆ ಒಬ್ಬಳೇ ಆದಳು. ಅಷ್ಟರಲ್ಲಿ ಅವಳ ಭಾವ ಉಚ್ಚ ಸ್ವರದಿಂದ ಒದರಾಡುತ್ತ ಬಂದೇ ಬಿಟ್ಟ. ಬಾಯಿಗೆ ಬಂದಂತೆ ಮಾತಾಡಿ ವೀರದರ್ಪದಿಂದ—ಎದುರಾಳಿ ಇಲ್ಲದೆಯೆ ವಿಜಯಿಯಾಗಿ— ಹೊರಟುಹೋದ. ಅವಳೋ, ಅದೆಲ್ಲವನ್ನೂ ಕಿವಿಮುಟ್ಟ ಕೇಳಿದರೂ ಒಂದೇ ಒಂದು ಮಾತನ್ನು ಎದುರಾಡಲಿಲ್ಲ. ಆದರೆ ಈ ಘಟನೆಯಿಂದ ಅವಳ ಅಂತರಂಗದಲ್ಲಿ ಮನಸ್ತಾಪವೂ ತನ್ನ ಗಂಡನ ವಿಷಯದಲ್ಲಿ ಒಂದು ಬಗೆಯ ತಿರಸ್ಕಾರವೂ ಮೇರೆ ಮೀರಿದವು. ಅವಳು ಅಡಿಗೆ ಮನೆಯ ಕಡೆಗೆ ಕಾಲು ಕೂಡ ಹಾಕಲಿಲ್ಲ. ವಿರಸಮುಖದಿಂದ ಕಾಲು ಚಾಚಿಕೊಂಡು ಕುಳಿತುಬಿಟ್ಟಳು.

ಅತ್ತ ಶಿವೂನ ಮನೆಯಲ್ಲಿಯೂ ಇದೇ ಹಾಡು. ಹಿರಿ ನೆಗೆಣ್ಣೆ ಶಪಥ ಮಾಡಿಕೊಂಡೇ ಗಂಡ ಬರುವ ಹಾದಿ ಕಾಯುತ್ತ ಕುಳಿತಿದ್ದಳು. 'ಹೌದು ಇದಕ್ಕೆ ಏನಾದರೂ ತಕ್ಕ ಶಾಸ್ತಿ ಮಾಡಿಸಲೇಬೇಕು. ಅದಾ ಗದ ಪಕ್ಷದಲ್ಲಿ, ಬಾಯೊಳಗೆ ಗುಟುಕು ನೀರನ್ನು ಕೂಡ ಹಾಕದೆ ತವರು

ಮನೆಗೆ ಎದ್ದುಬಿಡುವುದು. ಎರಡು ಬಿದಿರು ಎಲೆಗಳಿಗಾಗಿ ಮೈದುನನಿಂದ ಇಷ್ಟೊಂದು ಅವಮಾನ!'

ಹೊತ್ತು ಒಂದೂವರೆ ಪ್ರಹರ ಆಗಿಹೋಗಿದೆ. ಶಿವು ಇನ್ನೂ ಮನೆಗೆ ಬಂದಿರಲಿಲ್ಲ. ಹಿರಿನೆಗೆಣ್ಣೆ ಚಡಪಡಿಸತೊಡಗಿದಳು. "ಚೌಧುರಿಯವರಲ್ಲಿ ಕೆಲಸ ಆಯಿತೋ ಇಲ್ಲವೊ, ಅವರೇನು ಚೌಧುರಿಯವರ ಮನೆಯಿಂದ ಅತ್ತೇ ಕಚೇರಿಯಕಡೆಗೆ ದೂರಿಕೊಳ್ಳಲು ಹೋದರೋ ಏನೊ!'

ಅಷ್ಟರಲ್ಲಿ ಹೊರಗಿನ ಬಾಗಿಲು ಧಡಾರನೆ ತೆರೆಯಿತು. ಯಾರೆಂದು ನೋಡಲು, ಗಯಾರಾಮ— ಶಂಭುವಿನ ಹಿರಿಮಗನ ಪ್ರವೇಶವಾಯಿತು. ಅವನ ವಯಸ್ಸು ಹದಿನಾರು ಹದಿನೇಳು;— ಅಷ್ಟೇ ಸ್ವಲ್ಪ ಹೆಚ್ಚು ಕಡಿಮೆ. ಆದರೆ ಈ ವಯಸ್ಸಿನಲ್ಲಾಗಲೇ ಗಯಾರಾಮ ತನ್ನ ತಂದೆಯನ್ನು ಮೀರಿದ್ದ— ಸಿಟ್ಟಿನಲ್ಲಿ ಮತ್ತು ಮಾತಾಡುವುದರಲ್ಲಿ. ಅವನು ಊರಿನ ಮೈನರ್‌ಸ್ಕೂಲಿನೊಳಗೆ ಓದುತ್ತಿದ್ದ. ಈಗ ಮುಂಜಾನೆಯ ಶಾಲೆ. ಹತ್ತುವರೆ ಗಂಟೆಗೆ ಸಾಲೆ ಬಿಟ್ಟಿತ್ತು.

ಅವನ ತಾಯಿ ತೀರಿಕೊಂಡಾಗ ಗಯಾರಾಮ ಇನ್ನೂ ಒಂದು ವರುಷದ ಕೂಸು. ಅವನ ತಂದೆ ಶಂಭು ಮತ್ತೆ ಮದುವೆ ಮಾಡಿಕೊಂಡು ಹೊಸ ಹೆಂಡತಿಯನ್ನು ಮನೆ ತುಂಬಿಸಿಕೊಂಡನೇನೋ ಹೌದು; ಆದರೆ ಈ ತಬ್ಬಲಿ ಮಗುವನ್ನು ಸಾಕಿ ಸಲಹಿ ಮನುಷ್ಯನನ್ನಾಗಿ ಮಾಡುವ ಭಾರ ಮಾತ್ರ ಅದರ ದೊಡ್ಡವ್ವ ಗಂಗಾಮಣಿಯ ಪಾಲಿಗೇ ಬಂದಿತು. ಇಬ್ಬರೂ ಅಣ್ಣತಮ್ಮಂದಿರು ಕೂಡಿರುವವರೆಗಂತೂ ಅವಳು ಈ ಕೆಲಸವನ್ನು ಹೊತ್ತುಕೊಂಡು ಚೆನ್ನಾಗಿಯೇ ಮಾಡಿದಳು; ಮಲತಾಯಿಯೊಡನೆ ಎಂದೂ ಯಾವ ಸಂಬಂಧವೂ ಗಯಾರಾಮನಿಗೆ ಇರಲಿಲ್ಲ. ಈಗ, ಅವರು ಬೇರೆ ಮನೆ ಮಾಡಿದ ಅನಂತರವೂ ಗಯಾರಾಮ ತಮ್ಮ ಮನೆಯಲ್ಲಿ ಇರುವುದೂ ಊಟ ಉಪಹಾರ ಮಾಡುವುದೂ ಇಲ್ಲವೆಂಬಷ್ಟು ಕಡಿಮೆ.

ಈ ಹೊತ್ತಿನ ದಿವಸ ಗಯಾರಾಮ ಸಾಲೆ ಬಿಟ್ಟ ಕೂಡಲೆ ತಮ್ಮ ಆ ಮನೆಗೆ ಹೋಗಿ ನೋಡಿದ. ಮಲತಾಯಿಯ ಬಿಗುಮೋರೆಯನ್ನೂ

ಅಡಿಗೆಮನೆಯಲ್ಲಿಯ ಪರಿಸ್ಥಿತಿಯನ್ನೂ ಕಂಡು, ಬೆಂಕಿ ಬೆಂಕಿಯಾಗಿ ಈ ಮನೆಗೆ ಬಂದದ್ದು ಈಗ. ದೊಡ್ಡವ್ವನ ಮುಖವನ್ನು ನೋಡಿದ. ಅವನ ಆ ಬೆಂಕಿಗೆ ಅದು ನೀರನ್ನು ಹಾಕಲಿಲ್ಲ; ಕೋರೋಸಿನ್ ಸುರುವಿತು. ಅವನು ಯಾವ ಮುನ್ನುಡಿಯೂ ಇಲ್ಲದೆ "ಊಟಕ್ಕೆ ಹಾಕು, ದೊಡ್ಡವ್ವ." ಎಂದ.

ದೊಡ್ಡವ್ವ ಮಾತನಾಡಲಿಲ್ಲ. ಹೇಗೆ ಕುಳಿತಿದ್ದಳೋ ಹಾಗೆಯೇ ಕುಳಿತಿದ್ದಳು— ಮಿಟ್ಟನೆ ಮಿಸುಕಲಿಲ್ಲ.

ಗಯಾರಾಮನಿಗೆ ರೇಗಿಹೋಯಿತು. "ಊಟಕ್ಕೆ ಹಾಕುತ್ತೀಯೋ ಇಲ್ಲವೋ, ಏನೆಂದೆ?" ಎಂದ.

ದೊಡ್ಡವ್ವ ಸಿಟ್ಟುಸಿಟ್ಟಿನಿಂದ ಮುಖವನ್ನು ಮೇಲಕ್ಕೆತ್ತಿ ಕೈ ತಿರುವುತ್ತ ಬಾಯ್ಬಿಟ್ಟಳು: "ಹೂಂ, ನಿನ್ನ ದೆಸೆಯಿಂದ ಕೂಳು ಕುಚ್ಚಿ ಇಟ್ಟಿದ್ದೇನೆ, ಹಾಕದೇನು ಮಾಡಲಿ ಊಟಕ್ಕೆ? ನಿನ್ನ ಆ ತಾಯಿ ಅಭಾಗಿನಿ ಅನ್ನಹಾಕಲಾರಳೇನೋ. ಇಲ್ಲಿಗೆ ಬಂದು ದಾಂಡಿಗತನ ಮಾಡುತ್ತೀಯಾ?"

ಗಯಾರಾಮ ಚೀತ್ಕಾರಸ್ವರದಿಂದ ಹೇಳಿದ: "ಹೂಂ, ಆ ಅಭಾಗಿನಿಯ ವಿಷಯ ನನಗೆ ಬೇಕಾಗಿಲ್ಲ. ನೀನೇನು ಊಟಕ್ಕೆ ಹಾಕುತ್ತೀಯೋ ಇಲ್ಲವೋ ಹೇಳು. ಒಲ್ಲೆ ಎಂದರೆ ಇಕೋ ಹೊರಟೆ, ನಿನ್ನ ಪಾತ್ರೆ ಪಡಗ ಎಲ್ಲವನ್ನೂ ಬೀಸಾಡಿ ಬಿಡುತ್ತೇನೆ, ನೋಡು." ಹೀಗೆಂದು ಒಲೆಗೆ ಹಚ್ಚುವ ಒಂದು ಕಟ್ಟಿಗೆಯನ್ನು ಕೈಗೆ ತಗೆದುಕೊಂಡು ಅಡಿಗೆಮನೆಯ ಕಡೆಗೆ ಸರ್ರನೆ ಸಾಗಿದ.

ದೊಡ್ಡವ್ವ ಭಯಭ್ರಾಂತಳಾಗಿ ಕೂಗಿಕೊಂಡಳು: "ಗಯ, ಏ ಕೋಣಾ, ಮನೆಯೊಳಗೆ ಪುಂಡಾಟಿಕೆ ಮಾಡುತ್ತೀಯಾ? ಈಗಿನ್ನೂ ಎರಡು ದಿನಗಳಾಗಿಲ್ಲ, ನಾನು ಹೊಸ ಭಾಂಡಿ ಬಡಕಲ ಕೊಂಡುತಂದು ಇಟ್ಟಿದ್ದೇನೆ. ಅದೊಂದೇ ಒಡೆಯಲಿ ನೋಡು, ನಿನ್ನ ದೊಡ್ಡಪ್ಪನ ಮುಂದೆ ಹೇಳಿ ನಿನ್ನ ಕಾಲುಗಣಿಕೆಯನ್ನು ಮುರಿಸದಿದ್ದರೆ ಹೇಳು."

ಗಯಾರಾಮು ಅಡಿಗೆಮನೆಯೊಳಗೆ ತೆಗ್ಗಿನ ಕಟ್ಟೆಯವರೆಗೂ ಹೋಗಿದ್ದ. "ಅಷ್ಟರಲ್ಲಿ ಅವನ ಮನಸಿಗೆ ಒಂದು ಆಲೋಚನೆ ಹೊಳೆಯಿತು. ಅವನು ಶಾಂತಭಾವವನ್ನು ತಂದುಕೊಂಡು, ಹಿಂದಕ್ಕೆ ಬಂದು, "ಆಗಲಿ, ಒಳ್ಳೆಯದು ಹಾಕದಿದ್ದರೆ ಹಾಕಲಿಲ್ಲ. ನಾನೆಲ್ಲಿಯಾದರೂ ದೊರಕಿಸಿಕೊಳ್ಳುತ್ತೇನೆ. ಈವೊತ್ತು ಹೊಳೆಯ ದಂಡೆಯ ಮೇಲೆ ಆಲದ ಮರದ ಕೆಳಗೆ ಹಾರುವರ ಹೆಣ್ಣುಮಕ್ಕಳೆಲ್ಲ ಬುಟ್ಟಿ ಬುಟ್ಟಿ ತಿಂದಿ ತಿನಿಸು ಒಯ್ದು ಪೂಜೆ ಮಾಡುತ್ತಾರೆ. ಕೇಳಿ ಕೇಳಿದವರಿಗೆ ಅವರು ತಿನ್ನಲು ಕೊಡುತ್ತಾರೆ. ನಾನೂ ಅಲ್ಲಿಗೆ ಹೋಗಿ ನೋಡುತ್ತೇನೆ, ಹೋಗು," ಎಂದ.

ಗಂಗಾಮಣಿಗೆ ಇದನ್ನು ಕೇಳಿದೊಡನೆಯೆ ಈವೊತ್ತು ಅರಣ್ಯ ಷಷ್ಠಿ ಎಂಬುದು ಹೊಳೆಯಿತು. ಆಕ್ಷಣದಲ್ಲಿಯೇ ಆಕೆಯ ಮನಸು ತೀವ್ರದಿಂದ ಕೋಮಲಕ್ಕೆ ಇಳಿಯಿತು. ಆದರೆ ಅವಳ ಬಾಯಿಯ ರಭಸವೇನೂ ಇಳಿಯಲಿಲ್ಲ. "ಹೋಗಿಯಾದರೂ ಹೋಗಲ್ಲ, ನೋಡೋಣ ಹೇಗೆ ಹೋಗುತ್ತೀಯೊ?" ಎಂದಳು ಆಕೆ.

"ನೋಡು ಹೋಗುತ್ತೇನೆ; ಯಾರು ನನ್ನನ್ನು ತಡೆಯುವವರು?" ಎಂದೆನ್ನುತ್ತ ಗಯಾರಾಮು ಒಂದು ಪಂಜೆಯನ್ನು ಎಳೆದುಕೊಂಡು ಹೆಚ್ಚಿಕೊಂಡು ಹೋಗುವ ಉದ್ಯೋಗದಲ್ಲಿ ತೊಡಗಿದ. ಅದನ್ನು ಕಂಡು ಗಂಗಾಮಣಿಗೆ ಭಾವೋದ್ರೇಕವಾಯಿತು. ಅವಳೆಂದಳು: "ಈವೊತ್ತು, ಷಷ್ಠಿಯ ದಿವಸ ಮಂದಿಯ ಕಡೆ ಹೋಗಿ ತಿರಿದು ತಿನ್ನಲು ನಿನಗೇನು ಬಂತು ದುರ್ಗತಿ!"

ಗಯಾರಾಮು ಉತ್ತರ ಹೇಳಲಿಲ್ಲ. ಅಡಿಗೆಮನೆಯೊಳಗೆ ಹೋಗಿ, ಒಂದು ಬೊಟ್ಟು ಕೊಬ್ಬರಿ ಎಣ್ಣೆಯನ್ನು ತೆಗೆದುಕೊಂಡು, ತಲೆಗೆ ತಿಕ್ಕಿಕೊಳ್ಳುತ್ತ ಹೊರಗೆ ಹೊರಟ. ಗಂಗಾಮಣಿ ಹಿಂದೆ ಹಿಂದೆ ಅಂಗಳಕ್ಕೆ ಇಳಿದು ಬಂದಳು. ಹೆದರಿಸುವ ಭಾವದಿಂದ ಸಾರಿಹೇಳಿದಳು: "ಖೋಡಿಯನ್ನು ತಂದು! ಅವರ ಹಾಗೆ, ತಮ್ಮಪ್ಪನ ಹಾಗೆ ಮುಟ್ಠಾಳ

ಖೋಡಿ! ನೋಡು ಮತ್ತೆ, ನದಿಯೊಳಗೆ ಮುಳುಗು ಹಾಕಿ ಮನೆಗೆ ತಿರುಗಿ ಬರದಿದ್ದರೆ ನೆಟ್ಟಗಾಗಲಿಕ್ಕಿಲ್ಲ, ಹೇಳಿರುತ್ತೇನೆ, ಆಂ!''

ಆದರೆ ಗಯಾರಾಮ ಹೆದರುವ ಮಗನಲ್ಲ. ಅವನು ಹಲ್ಲು ಕಿರಿದು ದೊಡ್ಡವ್ವನಿಗೆ ಕೈತೋರಿಸಿ ಜಿಗಿತಕೊಟ್ಟ.

ಗಂಗಾಮಣಿ ಅವನ ಹಿಂದೆ ಹಿಂದೆ ಮತ್ತೆ ಬೀದಿಯತನಕ ಬಂದು ಒದರಾಡಿದಳು. "ಈವೊತ್ತು, ಅರಣ್ಯಷಷ್ಠಿಯ ದಿವಸ ಯಾರ ಮನೆಯ ಹುಡುಗರು ಉಣ್ಣುತ್ತಾರಂತ, ನೀನು ಊಟ ಮಾಡಬೇಕೆನ್ನುತ್ತಿ? ಮನೆಯೊಳಗೆ ಸಂದೇಶ, ಚಾಪಾಕಲಾ, ಹಾಲು ಮೊಸರು ಫರಾಳ ಮಾಡಬಾರದೆ? ಮುಂದಿಯ ಕಡೆಗೆ ಹೋಗಿ ಬೇಡಿ ತಿನ್ನುತ್ತೀಯಾ? ನೀನೂ ಚಲೋ ಹುಡುಗ ಹುಟ್ಟಿದೆ ನಮ್ಮ ಮನೆತನದೊಳಗೆ!''

ಗಯಾರಾಮ ಸ್ವಲ್ಪ ಮುಂದಕ್ಕೆ ಹೋಗಿದ್ದವನು, ಅಲ್ಲಿಯೇ ತಿರುಗಿ ನಿಂತು "ಹಾಗಾದರೆ ನೀನೇಕೆ ಕೊಡಲಿಲ್ಲ ಹೇಳು ಮತ್ತೆ? ಇಲ್ಲ ಎಂತ ಏಕೆನ್ನಬೇಕು?'' ಎಂದ.

ಗಂಗಾಮಣಿ ಗಲ್ಲದ ಮೇಲೆ ಕೈಯಿಟ್ಟುಕೊಂಡು ಬೆರಗಿನ ದನಿಯಲ್ಲಿ ನುಡಿದಳು: "ಕೇಳಿರಿ ಕೇಳಿರಿ, ಹುಡುಗನ ಮಾತ. ನಾನೆಲ್ಲಿ ಹೇಳಿದೆನೋ ನಿನಗೆ ಏನೂ ಇಲ್ಲ ಎಂದು? ಒಳಗೆ ಬರುವ ಪ್ರಸಕ್ತಿಲ್ಲದೆ ಹೂಂ ಊಟಕ್ಕೆ ಹಾಕು ಎಂದೆ ನೀನು. ಈವೊತ್ತು ಷಷ್ಠಿ, ಯಾರಾದರೂ ಉಣ್ಣುತ್ತಾರೆಯೇ— ನಿನಗೆ ಹೇಗೆ ನಾನು ಊಟಕ್ಕೆ ಹಾಕಲಿ? ಅದಕ್ಕೆ ನಾನು ಹೇಳಿದೆ—"ಎಲ್ಲಾ ಅಣಿಮಾಡಿಟ್ಟಿರುತ್ತೇನೆ, ನೀನು ಜಳಕ ಮಾಡಿಕೊಂಡು ಬರುತ್ತಲೇ— ''

ಗಯಾರಾಮ ಮತ್ತೆ ಸಿಟ್ಟಿನಿಂದ ಉತ್ತರ ಕೊಟ್ಟ: "ಇರಲಿ, ನಿನ್ನ ಫರಾಳ ನಿನಗೆ [illegible] ನೀವು ಅಭಾಗಿಗಳೆಲ್ಲರೂ ಕಾದಾಡಿರಿ; [illegible] ಬಾಗಿಲು ಹಿಡಿದು, ಕಾಲನ್ನು ಬಾಗಿಲ ತೋಳ ಮೇಲಿಟ್ಟುಕೊಂಡು [illegible] ಕುಳಿತಿರಿ—ಮತ್ತೆ ನಾನು ದಿನಾಲು ಎರಡೂ ಕೈಗಳಿಂದ ಹಿಡಿದುಕೊಂಡುಣ್ಣುವುದೇ ಸರಿ. ಹೋಗು

ನಾನು ನಿಮ್ಮ ಯಾರ ಕಡೆಗೂ ಇನ್ನು ಊಟಮಾಡುವುದಿಲ್ಲ---” ಎಂದು ಅವನು ಧುಸುಮುಸುಗುಟ್ಟುತ್ತ ತಿರುಗಿ ಮುಂದುವರಿದ.

ತುಸು ಅಳುಬರಿತ ದನಿಯಲ್ಲಿ ಗಂಗಾಮಣಿ ಮತ್ತೂ ಗಟ್ಟಿಯಾಗಿ ಹೇಳಿದಳು: “ ತಮ್ಮಾ ಗಯಾ, ಇಂದು ಷಷ್ಠಿ; ಯಾರ ಹತ್ತಿರವೂ ಬೇಡಿತಿಂದು ಇಲ್ಲದ ಅಪಶ್ಯ ಮಾಡಬೇಡ. ಬಂಗಾರಿ ನಮ್ಮಪ್ಪ— ನಾಲ್ಕು ದುಡ್ಡು ದಕ್ಷಿಣೆಯನ್ನು ಕೊಡುತ್ತೇನೆ—ಇಲ್ಲಿ ಕೇಳಿಲ್ಲೆ ಗಯಾ, — ”

ಗಯಾರಾಮು ಕಣ್ಣು ಹೊರಳಿಸಿಯೂ ನೋಡಲಿಲ್ಲ. ಭರಭರನೆ ಹೊರಟುಹೋದ. “ ನನಗೆ ಫರಾಳವೂ ಬೇಡ, ದುಡ್ಡೂ ಬೇಡ. ನಿನ್ನ ಫರಾಳ ನಾನು— ” ಇತ್ಯಾದಿ ಇತ್ಯಾದಿ ಅವನ ಬಾಯಿ ಒಟಗುಟ್ಟುತ್ತಲಿತ್ತು.

ಅವನು ನೋಟದಿಂದ ಮರೆಯಾದಮೇಲೆ, ಗಂಗಾಮಣಿ ಮನೆಯೊಳಗೆ ಬಂದಳು. ಸಿಟ್ಟಿನಿಂದ ದುಃಖದಿಂದ, ಅಭಿಮಾನದಿಂದ, ನಿರ್ಜೀವವಾದಂತಾಗಿ, ಮತ್ತೆ ಹೊಸತಿಲಿನ ಮೇಲೆ ಕುಕ್ಕರಿಸಿದಳು. ಕುಳಿತು ಗಯಾರಾಮನ ಪುಂಡತನದಿಂದ ಮರ್ಮಾಹತಳಾಗಿ, ಮನಸಿನೊಳಗೇ ಅವನ ಮಲತಾಯಿಯನ್ನು ಉದ್ಧಾರ ಮಾಡತೊಡಗಿದಳು.

ನದಿಗೆ ಹೋಗುತ್ತಿದ್ದ ಗಯಾರಾಮನ ಮನಸಿನಲ್ಲಿ ಮಾತ್ರ ಒಂದೇಸವನೆ ದೊಡ್ಡಮ್ಮನ ಮಾತುಗಳು ಸನದಿಸುತ್ತಿದ್ದವು. ಒಳ್ಳೊಳ್ಳೆಯ ತಿನಿಸುಗಳೆಂದರೆ ಅವನಿಗೆ ಹುಟ್ಟು ಒಂದಿಷ್ಟು ಅಭಿರುಚಿ ಹೆಚ್ಚು. ಸಂದೇಶ, ಚಾಪಾಕಲಾ, ಹಾಲು ಮೊಸರು ಇತ್ಯಾದಿ ಇತ್ಯಾದಿ— ಮೇಲೆ ನಾಲ್ಕು ದುಡ್ಡು ದಕ್ಷಿಣೆ ಬೇರೆ--ಅವನ ಮನಸು ಬೇಗಬೇಗನೆ ಮಿದುವಾಗುತ್ತ ನಡೆಯಿತು.

ಗಯಾರಾಮು ನದಿಯಲ್ಲಿ ಜಳಕಮಾಡಿಕೊಂಡು ಅತಿಶಯವಾದ ಹಸಿವಿನಿಂದ ಕಕ್ಕಾಂತನಾಗಿ ದೊಡ್ಡಮ್ಮನ ಮನೆಗೆ ಮರಳಿಬಂದ. ನಿಂತು ನಿಂತಿರಲಿಕ್ಕೆಯೆ ಹೇಳಿದ: “ ಫರಾಳದ ತಿಂಡಿಗಳನ್ನೆಲ್ಲಾ ತಂದಿಕ್ಕು

ದೊಡ್ಡವ್ವ, ನನಗೆ ಬಹಳ ಹಸಿವು ಆಗಿಬಿಟ್ಟಿದೆ. ಮತ್ತೆ ಸಂದೇಶವನ್ನು ಮಾತ್ರ ತುಸುಗಿಸು ತಂದುಗಿಂದಿ. ನಿನ್ನ ಮೋರೆಯ ಮೇಲೆಯೆ ಎಸೆದು ಬಿಟ್ಟೇನು. ''

ಗಂಗಾಮಣಿ ಅದೇ ದನಕರುಗಳ ಕೆಲಸಕ್ಕಾಗಿ ಹಟ್ಟಿಯೊಳಗೆ ಹೋಗಿದ್ದಳು. ಗಯಾರಾಮು ಕರೆದುದನ್ನು ಕೇಳಿದಾಗ ' ಕೆಲಸ ಕೆಟ್ಟಿತಲ್ಲಾ ' ಎಂದೆನಿಸಿತು. ಮನೆಯೊಳಗೆ ಹಾಲು, ಮೊಸರು, ಅವಲಕ್ಕಿ, ಬೆಲ್ಲ ಎಲ್ಲಾ ಇದ್ದಿತು ; ಆದರೆ ಅವನಿಗೆ ಬೇಕಾದ ಸಂದೇಶ, ಚಾಪಾಕಲಾಗಳೇ ಇರಲಿಲ್ಲ. ಆಗಳೇ ಗಯಾರಾಮುನನ್ನು ನಿಗ್ರಹಿಸುವಾಗ ಯಾವ ಬಿಗುವಿನಿಂದ ಇದ್ದಳೋ ಪ್ರೀತಿಯನ್ನೂ ಅದೇ ಬಿಗುವಿನಲ್ಲಿ ತೋರ್ಪಡಿಸಿದಳು. ಅವಳು ಹಟ್ಟಿಯೊಳಗೆ ಕೆಲಸ ಮಾಡುತ್ತಲೇ ಹೇಳಿದಳು : " ನೀನು ಮೊದಲು ಬೇಗ ಒದ್ದೆ ಬಟ್ಟೆಗಳನ್ನು ಬಿಡು. ನಾನಿದೇ ಈಗ ಬಂದೆ, ಕೆರೆಗೆ ಹೋಗಿ ಕೈತೊಳೆದುಕೊಂಡು. ''

" ಬೇಗ ಬಾ ಹಾಗಾದರೆ. ''

ಗಂಗಾಮಣಿ ಕೆರೆಯ ಕಡೆ ಹೋದಳು. ಗಯಾರಾಮು ಅವಳಿಗೆ ತ್ವರಿತ ಬರುವಂತೆ ಮತ್ತೊಮ್ಮೆ ಅಪ್ಪಣೆಕೊಟ್ಟು, ಒಣ ಬಟ್ಟೆಗಳನ್ನು ತೊಟ್ಟುಕೊಂಡ ; ತಾನೇ ಒಂದು ಮಣೆಯನ್ನು ತಂದು ಹಾಕಿಕೊಂಡ ; ಕೊಡದೊಳಗಿನ ನೀರನ್ನು ತಂಬಿಗೆಗೆ ಬಾಗಿಸಿ ಇಟ್ಟುಕೊಂಡ ; ಗಂಗಾಮಣಿ ಬರುವುದನ್ನು ಕಾಯುತ್ತ ಫರಾಳಕ್ಕೆ ಅಣಿಯಾಗಿ ಕುಳಿತುಕೊಂಡ. ಗಂಗಾಮಣಿ ಲಗುಬಗೆಯಿಂದ ಕೈತೊಳೆದುಕೊಂಡು ತಿರುಗಿ ಬಂದಳು. ಮಗನ ಮೋರೆಯ ಮೇಲಿನ ಪ್ರಸನ್ನತೆಯನ್ನು ಕಂಡು ಅವಳಿಗೆ ಬಹಳ ಸಂತೋಷವಾಯಿತು

" ಭಲೆ ಭಲೆ, ನಿಜವಾಗಿಯೂ ಬಂಗಾರದಂತಹ ಹುಡುಗ. ಮಾತುಮಾತಿಗೆ ಹೀಗೇಕೆ ಸಿಟ್ಟು ಸಿಟ್ಟು ಹಾಯುತ್ತೀಯಪ್ಪ ತಮ್ಮ ? '' ಎನ್ನುತ್ತ ಅವಳು ಪೆಟ್ಟಿಗೆಯಲ್ಲಿಯ ಫರಾಳದ ಪದಾರ್ಥಗಳನ್ನೆಲ್ಲ ತಂದು ಅವನ ಮುಂದೆ ಇರಿಸಿದಳು.

ಗಯಾರಾಮು ಅವುಗಳ ಮೇಲೆಲ್ಲ ಒಂದಾವರ್ತಿ ಕಣ್ಣಾಡಿಸಿ, ಒಗರುದನಿಯಲ್ಲಿ ಕೇಳಿದ: "ಹೂಂ! ಎಲ್ಲಿದೆ ಚಾಪಾಕಲಾ?"

ಗಂಗಾಮಣಿ ಈ ಪ್ರಶ್ನೆಯಿಂದ ಕಕ್ಕಾವಿಕ್ಕಿಯಾದಳು. "ಏನು ಹೇಳಲಿ, ಮನೆಯೊಳಗಿನ ಇಲಿಯ ಕಾಟ? ಸುಳ್ಳು ಹೇಳುವುದಿಲ್ಲ— ಎಲ್ಲಾ ಚಾಪಾಕಲಾ ಇಲಿಯ ಪಾಲಾಯಿತು. ಒಂದು ಬೆಕ್ಕನ್ನು ತಂದು ಸಾಕದಿದ್ದರೆ ಯಾವ ತಿಂಡಿ ತಿನಿಸೂ ಉಳಿಯುವಂತಿಲ್ಲ," ಎಂದಳಾಕೆ.

ಗಯಾರಾಮು ಸ್ವಲ್ಪ ನಕು ಎಂದ: "ಅಲ್ಲ ದೊಡ್ಡವ್ವಾ, ಇಲಿ ಹೇಗೆ ತಿಂದವೇ ಅವನ್ನು?— 'ನಿನಗೆ ಕೊಡುವುದಿಲ್ಲಪ್ಪ' ಎಂತ ಏಕೆ ಹೇಳಬಾರದು?"

ಗಂಗಾಮಣಿ ಅವಾಕ್ಕಾದಳು. "ಇದೇನು ಮಾತೋ ನಿನ್ನದು! ಇಲಿ ಕಲಾ ತಿಂದದ್ದು ಸುಳ್ಳೆನ್ನುತ್ತೀಯೇನು?" ಎಂದಳು.

ಗಯಾರಾಮು ಮೊಸರು ಅವಲಕ್ಕಿಯನ್ನು ಕಲಸುತ್ತ "ಒಳ್ಳೆಯದು, ತಿನ್ನಲಿ ತಿನ್ನಲಿ. ನನಗೇನು ಆ ಕಲೆಯ ಅಗತ್ಯ ಅಷ್ಟಿಲ್ಲ. ಸಂದೇಶವನ್ನಾದರೂ ತೆಗೆದುಕೊಂಡು ಬಾ. ನೋಡಿಲ್ಲೆ, ಸ್ವಲ್ಪ ಗಿಲ್ಪ ತಂದುಗಿಂದೀ ಮತ್ತೆ!" ಎಂದ.

ದೊಡ್ಡವ್ವ ಕೊಟಡಿಯೊಳಗೆ ಹೋಗಿ, ಸ್ವಲ್ಪ ಹೊತ್ತು ಸುಳ್ಳು ಸುಳ್ಳೇ ಪಾತ್ರೆಗಳನ್ನು ಅತ್ತ ಇತ್ತ ಎತ್ತಾಡಿದಳು; — ಸಂದೇಶವನ್ನು ಹುಡುಕಾಡುವ ಅಭಿನಯ. ಕೊನೆಗೆ ಭಯಗೊಂಡಂತೆ ಹೇಳಿದಳು: "ಅಯ್, ಅದನ್ನೂ ಇಲಿಗಳು ಬಕ್ಕರಿಸಿಬಿಟ್ಟಿವೆಯಲ್ಲಪ್ಪ! ಏನು ಮಾಡಲಿ, ಒಂದು ಚೂರೂ ಬಿಟ್ಟಿಲ್ಲ. ಯಾವಾಗ ಮರೆತು ಭಾಂಡಿಯ ಬಾಯಿ ತೆರೆದು ಇಟ್ಟೆನೋ—"

ಅವಳ ಮಾತಿನ್ನೂ ನಡೆದಿರುವಾಗಲೇ ಗಯಾರಾಮುನು ಕಣ್ಣು ಕೆಕ್ಕರಿಸಿ ಗಡುಸುದನಿಯಿಂದ "ರಕ್ಕಸೀ, ಇದೇನು ಹೇಳುತ್ತೀ–ಸಂದೇಶವನ್ನೂ ತಿಂದುಬಿಟ್ಟವೇ ಇಲಿ? ಸರಿಯಾಯಿತು. ಇದನ್ನೆಲ್ಲ ನನ್ನ ಮುಂದೆ ಕಲಿಸಬೇಡ. ಅಲ್ಲ, ನಿಮ್ಮ ಮನೆಯೊಳಗೆ ಏನೇನೂ ಇಲ್ಲದಿದ್ದರೆ ನನ್ನನ್ನು ಕರೆದೆಯೇಕೆ ಮತ್ತೆ?" ಎಂದ.

ದೊಡ್ಡವ್ವ ಕೋಣೆಯೊಳಗಿಂದ ಹೊರಕ್ಕೆ ಬಂದು “ ನಿಜವಾಗಿಯೂ ಹೀಗಾಗಿಬಿಟ್ಟಿದೆ, ತಮ್ಮಾ ” ಎಂದಳು.

ಗಯಾರಾಮ ನೆಗೆದೆದ್ದ. “ ನಿಜವಾಗಿಯೆ ? ಏನಾದರಾಗಲಿ ಹೋಗು, ನಿನ್ನ ತಿಂಡಿ ತಿನಿಸು ಏನೂ ನನಗೆ ಬೇಕಾಗಿಲ್ಲ.” ಎನ್ನುತ್ತ ನೆಲಕ್ಕೆ ಕಾಲನ್ನಪ್ಪಳಿಸಿ, ಅತ್ಯಂತ ಉತ್ಸಾಹದಿಂದ ಇಟ್ಟಿದ್ದ ತಿಂಡಿಗಳನ್ನೆಲ್ಲ ಸೂರೆ ಮಾಡಿದ. “ ಹೂಂ, ನೋಡು, ಈಗ ಮಾಡುತ್ತೇನೆ ಮಜಾ” ಎಂದು ಗಯಾರಾಮ ಆ ಉರುವಲು ಕಟ್ಟಿಗೆಯನ್ನು ಮತ್ತೆ ತೆಗೆದುಕೊಂಡು ಕೋಣೆಯ ಕಡೆ ಸಾಗಿಹೋದ.

ಗಂಗಾಮಣಿ ಹಾಂ ಹಾಂ ಎಂದೆನ್ನುತ್ತ ಅವನ ಹಿಂದೆ ಧಾವಿಸಿದಳೇನೋ ನಿಜ. ಆದರೆ ಗಯಾರಾಮ ಕಣ್ಣುಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ತನ್ನ ಕೆಲಸವನ್ನು ಕೊನೆಗಾಣಿಸಿದ: ಪಾತ್ರೆಪಡಗಗಳನ್ನು ಹೊಡೆದು ಉರುಳಿಸಿದ; ಸಾಮಾನುಗಳನ್ನೆಲ್ಲ ಚೆಲ್ಲಾಡಿದ; ಮನೆಯಲ್ಲೆಲ್ಲಾ ರಂದೆ ರಂಬಾಟ ಮಾಡಿಬಿಟ್ಟ. ಅವನ ಈ ಹುಚ್ಚು ದಾಳಿಯನ್ನು ತಡೆಯಹೋದ ಗಂಗಾಮಣಿಯ ಕೈಗೆ ಸ್ವಲ್ಪ ಪೆಟ್ಟು ತಗಲಿತು.

ಸರಿಯಾಗಿ ಇದೇ ಹೊತ್ತಿಗೆ ಹೇಳಿ ಕಳಿಸಿದಂತೆ ಶಿವು ಜಮೀನುದಾರರ ಮನೆಯಿಂದ ತಿರುಗಿ ಬಂದ. ಮನೆಯೊಳಗೆ ನಡೆದ ಹುಯಿಲನ್ನು ಕೇಳಿ ಅವನು ಪ್ರವೇಶಿಸುತ್ತಲೇ ಆರ್ಭಟಿಸಿದ. ಏನು ಏನಾಯಿತೆಂದು ಹೆಂಡತಿಯನ್ನು ಕೇಳುವುದೇ ತಡವಾಯಿತು— ಗಂಗಾಮಣಿ ಗಂಡನ ಸ್ವರ ಕಿವಿಗೆ ಬೀಳುಬೀಳುತ್ತಲೆ, ಬೋರಾಡಿ ಅಳುವುದಕ್ಕಾರಂಭಿಸಿದಳು. ಗಯಾರಾಮ ಗಾಬರಿ ಗಾಬರಿಯಿಂದ ಕೈಯೊಳಗಿನ ಕಟ್ಟಿಗೆಯನ್ನು ಚೆಲ್ಲಿಕೊಟ್ಟವನೇ ಉಸಿರುಬಿಡದೆ ಅಲ್ಲಿಂದ ಓಡಿದ.

ಶಿವು ಕಡುಗೋಪದಿಂದ ಕೇಳಿದ: “ ಏನಿದು, ಏನಿದು ಮನೆಯೊಳಗೆ ರಾದ್ಧಾಂತ ? ”

ಇದರಿಂದ ಗಂಗಾಮಣಿಯ ಅಳು ಇಮ್ಮಡಿಸಿಬಿಟ್ಟಿತು. ಅವಳು ಹೇಳಿದಳು: “ ಕತ್ತೆ- ಗಯಾ ಇದ್ದಾನಲ್ಲ, ಮನೆಯೊಳಗಿನ ಸಾಮಾ

ನುಗಳನ್ನೆಲ್ಲ ಹಾಳುಮಾಡಿ, ನನ್ನ ಕೈಗೆ ಒಂದೇಟು ಕೊಟ್ಟು ಓಡಿ ಹೋದ. ನೋಡದಿರಾ, ಕಡುಬು ಹೇಗೆ ಎದ್ದಿದೆ ಇಲ್ಲಿ!''

ಅವಳು ಗಂಡನಿಗೆ ತನ್ನ ಕೈಯನ್ನು ತೋರಿಸಿದಳು. ಶಿವೂನ ಸಂಗಡ ಅವನ ದೂರದ ಸಂಬಂಧಿಯೊಬ್ಬ ಬಂದಿದ್ದ. ಅವನು ಗಂಗಾ ಮಣಿಗೆ ಹೇಗೋ ಎಂತಹದೋ ತಮ್ಮನಾಗಬೇಕಂತೆ. ಅವನು ಸ್ವಲ್ಪ ಓದು-ಬರೆ ಬಲ್ಲವ. ಚೆಲೋ ಬುದ್ಧಿವಂತ ಎಂದು ತಿಳಿದು, ಜಮೀನು ದಾರರ ಮನೆಗೆ ಹೋಗುವಾಗ ಶಿವು ಅವನನ್ನು ತನ್ನೊಡನೆ ಕರೆದೊ ಯ್ದಿದ್ದ. ಅವ ಹೇಳಿದ: "ಸಾಮಂತ ಮಹಾಶಯ, ಇದೆಲ್ಲ ಏನೆಂದು ತಿಳಿದಿದ್ದೀರಿ, ಇದು ಆ ಚಿಕ್ಕ ಸಾಮಂತರ ಬೇಟ— ತನ್ನ ಮಗನ ಕಿವಿ ಯೂದಿ ಈ ಕೆಲಸವನ್ನು ಮಾಡಿಸಿದವ ಅವನೇ. ಏನೆನ್ನುತ್ತೀರಿ ಅಕ್ಕ ನೀವಿದಕ್ಕೆ, ಹೌದೋ ಅಲ್ಲವೋ?"

ಗಂಗಾಮಣಿಯ ಹೊಟ್ಟೆಯೊಳಗೆ ಮುಂಚೆಯೆ ಉರಿ ಉರಿಯು ತ್ತಿತ್ತು. ಅವಳು ತಡವಿಲ್ಲದೆ ತಲೆ ಹಾಕಿದಳು. "ಹೌದಪ್ಪ" ಎಂದ ವಳು ಮತ್ತೆ ಮುಂದುವರಿಸಿದಳು: "ಆತನೇ, ಆ ಸುಟ್ಟ ಮೋರೆ ಯವನೇ, ಆ ಪರದೇಶಿ ಹುಡುಗನಿಗೆ ಕಲಿಸಿಕೊಟ್ಟು ನನ್ನನ್ನು ಹೊಡೆ ಯಿಸಿದ. ಇದಕ್ಕೆ ನೀವೇನೇನು ಮಾಡುತ್ತೀರೋ ಮಾಡಿರಿ. ಇಲ್ಲದೆ ಹೋದರೆ, ನಾನು ಉರುಲು ಹಾಕಿಕೊಂಡು ಸತ್ತು ಹೋಗುತ್ತೇನೆ!''

ಇಷ್ಟು ಹೊತ್ತಾದರೂ ಶಿವೂಗೆ ಜಳಕವಿಲ್ಲ, ಊಟವಿಲ್ಲ, ತಿಂಡಿಯೂ ಇಲ್ಲ; ಅವನು ಬಾಯೊಳಗೆ ನಾಲ್ಕು ಕಾಳು ನೀರು ಕೂಡ ಹಾಕಿಲ್ಲ. ಹೋದಲ್ಲಿ— ಜಮೀನುದಾರರಲ್ಲಿ— ಅವನಿಗೆ ಸಹಾನು ಭೂತಿ ದೊರೆತಿರಲಿಲ್ಲ. ಅಲ್ಲಿಂದ ಬಂದು ಮನೆಯೊಳಗೆ ಕಾಲು ಹಾಕಿ ದನೋ ಇಲ್ಲವೋ, ಇಲ್ಲಿ ಈ ಯುದ್ಧಕಾಂಡ. ಆಯಿತು, ಅವನಿಗೆ ಹಿತಾಹಿತಗಳ ವಿವೇಕ ಉಳಿಯಲಿಲ್ಲ. ಅವನೊಮ್ಮಿಂದೊಮ್ಮಿಗಿಲೆ ಪ್ರಚಂಡವಾದ ಶಪಥವನ್ನೇ ಮಾಡಿದ.— "ಈಗಲೇ ನಾನು ಕೊತ ವಾಲ ಚಾವಡಿಗೆ ಹೋಗುತ್ತೇನೆ. ಇದಕ್ಕೆ ತಕ್ಕ ಶಾಸನ ಮಾಡಿಸದೆ ಇದ್ದರೆ, ನಾನು ಬಿಂದು ಸಾಮಂತರ ಮಗನೇ ಅಲ್ಲ.''

ಶಿವೂನ ಆ ಸಾಲೆ ಓದಿದ ತಿಳಿವಳಿಕೆಯುಳ್ಳ ಮನುಷ್ಯ— ಅವನಿಗೆ ಮೊದಲಿನಿಂದಲೂ ಗಯಾರಾಮನ ಮೇಲೆ ಬಹಳ ಸಿಟ್ಟಿದ್ದಿತು— ತನ್ನ ಅಮೋಘವಾದ ವಿಚಾರಗಳನ್ನು ಹೇಳಿದ: “ ಕಾಯಿದೆಯ ದೃಷ್ಟಿಯಿಂದ ನೋಡಿದರೆ, ಗಯಾರಾಮ ನಿಮ್ಮ ಮನೆಯೊಳಗೆ ಬಂದುದು ಅನಧಿಕಾರ ಪ್ರವೇಶ. ಬಡಿಗೆಯನ್ನು ಹಿಡಿದು ಮನೆಯೊಳಗೆ ನುಗ್ಗುವುದು, ವಸ್ತು ಒಡವೆಗಳನ್ನೆಲ್ಲಾ ಒಡೆದು ಹಾಕುವುದು, ಹೆಣ್ಣು ಮಕ್ಕಳ ಮೈಮೇಲೆ ಕೈಮಾಡುವುದು— ಇವುಗಳಿಗೆಲ್ಲ ಶಾಸ್ತಿಯೆಂದರೆ ಆರು ತಿಂಗಳು ಸೆರೆಮನೆ. ಸಾಮಂತ ಮಹಾಶಯ, ನೀವು ಟೊಂಕ ಕಟ್ಟಿಕೊಂಡು ನಿಂತು ನೋಡಿರಿ; ನಾನು ಆ ತಂದೆ ಮಗ ಇಬ್ಬರನ್ನೂ ಕೂಡಿಯೆ ಹೇಗೆ ಸೆರೆಮನೆಗೆ ಅಟ್ಟಿಸದೆ ಇರುತ್ತೇನೊ! ”

ಶಿವು ಇದಕ್ಕೆ ಪ್ರತಿ ಹೇಳಲಿಲ್ಲ. ಆ ಸಂಬಂಧಿಯ ಕೈಯನ್ನು ಹಿಡಿದುಕೊಂಡು ಕೊತವಾಲ ಚಾವಡಿಯನ್ನು ಕುರಿತು ಆಗಲೇ ಪ್ರಸ್ಥಾನ ಬೆಳೆಯಿಸಿದ.

ಗಂಗಾಮಣಿಗೆ ಎಲ್ಲರಿಗಿಂತ ಹೆಚ್ಚಾಗಿ ಸಿಟ್ಟು ಬಂದಿರುವುದು ಮೈದುನನ ಮೇಲೆ, ಮತ್ತು ಸಣ್ಣ ನೆಗೆಣ್ಣೆಯ ಮೇಲೆ. ಅವಳು ಅದೇ ಸಿಟ್ಟಿನಲ್ಲಿ ಏನಾದರೂ ದಂಗೆ ಮಾಡಬೇಕೆಂಬ ಮನಸಿನಿಂದ, ಮನೆಯ ಬಾಗಿಲಿಕ್ಕಿ ಚಿಲಕ ಹಾಕಿಕೊಂಡು, ಅದೇ ಕಟ್ಟಿಗೆಯನ್ನು ಕೈಲಿ ತೆಗೆದುಕೊಂಡು, ನೆಟ್ಟಗೆ ಶಂಭುವಿನ ಮನೆಯಂಗಳದಲ್ಲಿ ಬಂದು ನಿಂತಳು. “ ಏ ಚಿಕ್ಕರಾಯ, ನಿನ್ನ ಗುಣ ಎಂತಹದೊ, ನಿನ್ನ ಮಗನ ಕೈಯಿಂದ ನನ್ನನ್ನು ಬಡಿಸಬೇಕೆ? ಆಯಿತು, ಈಗ ಹೋಗಿರಿ, ತಂದೆ ಮಗ ಇಬ್ಬರೂ ಕೂಡಿಯೆ ಸೆರೆಮನೆಗೆ! ” ಎಂದು ಒಳ್ಳೆಯ ಉಚ್ಚ ಕಂಠಸ್ವರದಿಂದ ದೂರಿದಳು.

ಶಂಭು ಇನ್ನೂ ಅದೇ ಈ ಸಂಬಂಧದ ಮಕ್ಕಳ ಸಂಗಡ ಫರಾಳ ಮಾಡಿ, ಎಡೆಯಾಡುತ್ತಿದ್ದ. ಅತ್ತಿಗೆಮ್ಮನವರ ಈ ಮೂರ್ತಿಯನ್ನೂ ಕೈಯೊಳಗಿನ ಉರುವಲ ಕಟ್ಟಿಗೆಯನ್ನೂ ಆ ಧ್ವನಿಯನ್ನೂ ನೋಡಿ ಕೇಳಿ, ಅವನಿಗೆ ದುರ್ಗಾವತಾರದ ನೆನಪಾಯಿತು. ಅವನು ಅರುಳು ಮರುಳಾಗಿ ನಿಂತುಕೊಂಡ.

“ ಏನು, ಏನಾಯಿತು ? ಇದೇನೊಂದೂ ನನಗೆ ಗೊತ್ತಿಲ್ಲವಲ್ಲ ? ” ಎಂದು ಕೇಳಿದ ಶಂಭು.

ಗಂಗಾಮಣಿಯ ಮೋರೆ ವಿಕೃತವಾಯಿತು. ಅವಳೆಂದಳು : “ ಇನ್ನು ಮುಂದೆ ಇದೆಲ್ಲ ಸೋಗು ನಡೆಯುವುದಿಲ್ಲ, ತಿಳಿಯಿತೆ? ಚಾವಡಿಯ ಕೊತವಾಲರು ಬರುತ್ತಾರೆ, ಅವರ ಮುಂದೆ ಏನು ಹೇಳುತ್ತೀರೋ ಹೇಳಿಕೊಳ್ಳಿರಿ. ಪಾಪ, ನಿಮಗೆ ಯಾವುದೂ ಗೊತ್ತೇ ಇಲ್ಲವಲ್ಲವೇ ? ”

ಈ ವಾಗ್ಬಾಣಗಳನ್ನು ಗಂಗಾಮಣಿ ತನ್ನ ಮೈದುನನಿಗೆ ಎಸೆಯುವ ಹೊತ್ತಿಗೆ, ಕಿರಿನೆಗೆಣ್ಣೆ ಮನೆಯೊಳಗಿಂದ ಹೊರಗೆ ಬಂದು, ಒಂದು ಕಂಬಕ್ಕೆ ಒರಗಿಕೊಂಡು ನಿಃಶಬ್ದವಾಗಿ ನಿಂತಳು. ಶಂಭುವಿಗೆ ಒಳಗೊಳಗೆ ಒಂದು ತರಹದ ಭಯವಾದಂತಾಯಿತು. ಗಂಗಾಮಣಿಯ ಹತ್ತಿರಕ್ಕೆ ಬಂದು ಅವಳ ಕೈಯನ್ನು ಹಿಡಿದು ಹೇಳಿದ: “ ಅತ್ತಿಗೆ, ನಿಜವಾಗಿಯೂ ಇದಾವುದೂ ನಮಗೆ ಗೊತ್ತಿಲ್ಲವಲ್ಲ ! ”

ನಿಜವಾಗಿಯೂ ಶಂಭು ಹೇಳಿದುದು ಸತ್ಯವೇ. ಗಂಗಾಮಣಿಗೂ ಇದು ಗೊತ್ತು; ನಂಬಿಗೆಯೂ ಇತ್ತು. ಆದರೆ ಮಾಡುತ್ತಾಳೇನು ಅವಳು ? ಅದು ಔದಾರ್ಯವನ್ನು ತೋರಿಸುವುದಕ್ಕೆ ತಕ್ಕ ಸಮಯವಾಗಿರಲಿಲ್ಲ. ಅವಳು ಶಂಭುವಿನ ಮೇಲೆಯೆ ಇದರ ಹಟನಾರಾಣೆ ತಪ್ಪನ್ನು ಹೊರಿಸುತ್ತ, ಸುಳ್ಳು ಸತ್ಯಗಳನ್ನೆಲ್ಲ ಸರಿಬೆರಕೆ ಮಾಡಿ, ಗಯಾರಾಮನ ಕೀರ್ತಿಯನ್ನು ಬಣ್ಣಿಸಿದಳು. ಅವಳು ನಿಜವೆಂಬಂತೆ ವಿವರಿಸಿದ ಘಟನೆಗಳನ್ನು, ಆ ಹುಡುಗನನ್ನು ಬಲ್ಲವರೇ ನಂಬದಿರಲು ಶಕ್ತರು.

ಮುಗ್ಧ ಸ್ವಭಾವದ ಕಿರಿ ನೆಗೆಣ್ಣೆ ಈಗ ಬಾಯಿ ಬಿಟ್ಟಳು. ಗಂಡನಿಗೆ ಅವಳೆಂದಳು: “ ನೋಡಿರಿ, ಈಗ ಹೇಗಾಯಿತು ! ನಾನು ಹಿಂದಕ್ಕೆ ಹೇಳಿದ್ದೆನಲ್ಲ, ಅದೇ ಆಯಿತೋ ಇಲ್ಲವೊ ? ಎಷ್ಟೋ ದಿನ ನಿಮಗೆ ಹೇಳುತ್ತ ಬಂದೆ. — ‘ ಮಹಾಯರೆ, ಈ ತಬ್ಬಲಿಯನ್ನು, ಈ ದುಷ್ಟನನ್ನು ಮನೆಯೊಳಗೆ ಇಟ್ಟುಕೊಳ್ಳಬೇಡಿರಿ ; ನಿಮ್ಮ ಈ ಸಣ

ಮಕ್ಕಳನ್ನು ಹೌದಾದುದಕ್ಕೆ, ಅಲ್ಲವಾದುದಕ್ಕೆ ಎಲ್ಲಕ್ಕೂ ಹೊಡೆದು ಹೊಡೆದು ಯಾವಾಗ ಜೀವ ತೆಗೆದುಕೊಳ್ಳುತ್ತಾನೊ ಪುಂಡ!' ಎಂದು. ಅದಕ್ಕೆ ನೀವು ಲಕ್ಷ್ಯವನ್ನೇ ಕೊಡಲಿಲ್ಲ. ಉಣ್ಣಿರಿ ಅದರ ಫಲ!"

ಶಂಭು ಗಂಗಾಮಣಿಯನ್ನು ರಮಿಸತೊಡಗಿದ: "ನನ್ನಾಣೆಯೆಂದರೂ ಅಣ್ಣ ಕೊತವಾಲ ಚಾವಡಿಗೆ ಹೋದುದು ನಿಜವೇ, ಅತ್ತಿಗೆ?" ಎಂದ.

ಅವನ ಈ ಕರುಣಾಮಯ ಕಂಠಸ್ವರದಿಂದ ಅತ್ತಿಗೆ ಒಂದಿಷ್ಟು ಮಿದುವಾದಳು. ಆದರೂ ತನ್ನ ಮಾತಿನ ಸತ್ಯತೆಯನ್ನು ಸ್ಪಷ್ಟಗೊಳಿಸಲು, ಅದೇ ಗಟ್ಟಿಯಾದ ಸ್ವರದಲ್ಲಿ ಹೇಳಿದಳು: "ಹೂ, ನಿನ್ನಾಣೆಯಾಗಿಯೂ ಅವರು ಹೋಗಿದ್ದಾರೆ; ಸಂಗಡ ನಮ್ಮ ಪಾಂಚುವೂ ಹೋಗಿದ್ದಾನೆ!"

ಅಣ್ಣ, ಸಂಗಡ ಪಾಂಚು! ಶಂಭು ಬಹಳ ಬೆದರಿದ. ಕಿರಿಯಳು ತನ್ನ ಯಜಮಾನರನ್ನು ಅನುಲಕ್ಷಿಸಿ, ತನ್ನ ಅಕ್ಕನನ್ನು ಕುರಿತು ಮಾತಾಡಿದಳು: "ಅಕ್ಕಾ, ನಾನು ಹಗಲೆಲ್ಲ ಹೇಳುತ್ತಿದ್ದೆ— 'ಎಲ್ಲಿಯೋ ಏನೋ ನದಿಗೆ ಸರಕಾರದವರು ಸಂಕ ಕಟ್ಟುತ್ತಿದ್ದಾರಂತೆ; ಎಷ್ಟು ಜನರು ಕೆಲಸಕ್ಕೆ ಹೋಗುತ್ತಾರೆ ಅಲ್ಲಿಗೆ; ಇವನನ್ನೂ ಕರೆದುಕೊಂಡು ಹೋಗಿ ಅದರಲ್ಲಿ ಸೇರಿಸಿಬಿಡಿರಿ; ಅವರು ಇವನಿಂದ ಜಡಿದು ಕೆಲಸ ಮಾಡಿಸಿಕೊಳ್ಳುತ್ತಾರೆ; ಓಡಿಹೋಗುವ ಸಂಭವವೂ ಇಲ್ಲ; ಎರಡು ದಿನಗಳೊಳಗಾಗಿ ನೆಟ್ಟಗಾಗುತ್ತಾನೆ' ಎಂತ. 'ಅದು ಬೇಡ, ಇಸ್ಕೂಲಿನಲ್ಲಿ ಕಲಿಯಲಿ' ಎಂದರು. ಇಕಾ ಕಂಡಿರಾ, ಹುಡುಗ ಕಲಿತು ವಕೀಲ ಬಹಾದ್ದೂರನಾಗುತ್ತಾನೆ!"

ಶಂಭು ಕಾತರದಿಂದ ನುಡಿದ: "ಇಕಾ, ಬೇಕೆಂತಲೇ ಅವನನ್ನು ಅಲ್ಲಿಗೆ ಕಳಿಸಲಿಲ್ಲ. ಅಲ್ಲಿಗೆ ಹೋದವರು ಎಲ್ಲರೂ ಏನು ಮರಳಿ ಮನೆಯನ್ನು ಕಂಡರೊ? ಅರ್ಧಮರ್ಧ ಮಂದಿ ಸಂಕದ ಮಣ್ಣು ಕಸ್ಪುರಿಸಿ ಬಿದ್ದು ಯಾವ ತಳವನ್ನು ಕಂಡರೋ, ಎಷ್ಟು ಹುಡುಕಿದರೂ ಹೆಣ ಕೂಡ ಸಿಕ್ಕಲಿಲ್ಲ."

ಕಿರಿಯಳು ಅದಕ್ಕೆ ಹೀಗೆಂದಳು : “ ಹಾಗಾರೆ ಈಗ ತಂದೆ ಮಗ ಇಬ್ಬರೂ ಜೋಡಾಗಿ ಹೋಗಿರಿ— ಸೆರೆಮನೆಯ ಹೋರೆ ಮಾಡುವುದಕ್ಕೆ. ”

ಹಿರಿಯಳು ಸುಮ್ಮಗಿದ್ದಳು. ಶಂಭು ಮತ್ತೆ ಆಕೆಯ ಕೈಯನ್ನು ಹಿಡಿದು ಹೇಳಿಕೊಂಡ: “ ನಾಳೆಯೇ ಆ ದಿಕ್ಕೇಡಿಯನ್ನು ಅಲ್ಲಿಗೆ ಅಟ್ಟಿಬಿಡುತ್ತೇನೆ, ಅತ್ತಿಗೆ. ನೀನು ಹೇಗಾದರೂ ಅಣ್ಣನನ್ನು ಸ್ವಲ್ಪ ತಣ್ಣಗೆ ಮಾಡು. ಇನ್ನೆಂದೂ ಹೀಗೆ ಆಗುವುದಿಲ್ಲ. ”

ಆತನ ಹೆಂಡತಿ ತನ್ನ ಹೃದ್ಗತ ವಿಚಾರಗಳನ್ನು ಮತ್ತೂ ಹೊರಗೆಡಹಿದಳು: “ ಜಗಳ ತಂಟೆ ಎಲ್ಲಾ ಹತ್ತುವುದು ಆ ಅರಿಷ್ಟ ಖೋಡಿಯಿಂದಲೆ. ನಿನಗೂ ಮತ್ತೆ ಎಷ್ಟು ಸಾರೆ ಹೇಳಿದ್ದೆನಕ್ಕಾ— ಅವನನ್ನು ನಿಮ್ಮ ಮನೆಯೊಳಗೆ ಕಾಲು ಹಾಕಗೊಡಬೇಡ, ಅವನಿಗೆ ಅಚ್ಚಚ್ಚೆ ಮಾಡಬೇಡ, ಎಂತ. ಅಕ್ಕ, ನಿನಗೆ ಈವರೆಗೆ ಹೇಳಿರಲಿಲ್ಲ,- ಈಗ ತಿಂಗಳು ತಿಂಗಳುವರೆ ಹಿಂದೆ ನಿಮ್ಮ ಹಿತ್ತಲೊಳಗೆ ಹೊಕ್ಕು ಬಾಳೆಗೊನೆಯನ್ನು ರಾತ್ರಿ ಯಾರು ಕೊಯ್ದರೆನ್ನುತ್ತೀ ? ಅದೂ ಈ ಮುಟ್ಠಾಳನದೇ ಕೆಲಸ. ನಾಯಿಗೆ ತಕ್ಕ ಕೋಲು ಉಪಯೋಗಿಸದಿದ್ದರೆ ಹೇಗೆ ಸರಿಹೋದೀತು ? ಅವನನ್ನು ಸಂಕದ ಕೆಲಸಕ್ಕೆ ಅಟ್ಟಿಬಿಡಿರಿ, ಸಾಲೆಯನ್ನು ಬಿಡಿಸಿ. ”

ಶಂಭು ತನ್ನ ತಾಯಿಯಾಣೆ ಇಟ್ಟುಕೊಂಡು ಸಂಕಲ್ಪಿಸಿದ— “ ನಾಳೆಯೆ, ಏನಾದುದಾಗಲಿ ಆ ತಬ್ಬಲಿಯನ್ನು ಊರಿಂದ ಹೊರಗಟ್ಟಿಯೇ ನೀರು ಕುಡಿಯುವುದು ! ”

ಗಂಗಾಮಣಿ ಈ ಮಾತಿಗೆ ಏನನ್ನೂ ಉತ್ತರ ಕೊಡಲಿಲ್ಲ. ತನ್ನ ಕೈಯೊಳಗಿನ ಕಟ್ಟಿಗೆಯನ್ನು ಬಿಸುಟಿ ಸುಮ್ಮನೆ ಮನೆಯ ಹಾದಿ ಹಿಡಿದಳು.

ಗಂಗಾಮಣಿಯ ಗಂಡ, ತಮ್ಮ ಪಾಂಚು ಇಬ್ಬರೂ ಇನ್ನೂ ಉಪವಾಸ. ಸಂಜೆಯ ಹೊತ್ತಿನಲ್ಲಿ ಅವಳು ವಿಷಣ್ಣ ಮುಖದಿಂದ ಅಡಿಗೆಮನೆಯ ಬಾಗಿಲಲ್ಲಿ ಕುಳಿತುಕೊಂಡು, ಅವರ ಊಟಕ್ಕಾಗಿ

ಏನೇನೋ ಮಾಡುತ್ತಲಿದ್ದಳು. ಗಯಾರಾಮು ಅಳುಕುತ್ತ, ಹಣಿಕಿ ಹಣಿಕಿ ನೋಡುತ್ತ ಸಪ್ಪುಳಿಲ್ಲದೆ ಮನೆಯೊಳಗೆ ಪ್ರವೇಶಿಸಿದ. ಒಳಗೆ ಮತ್ತೆ ಯಾರೂ ಇಲ್ಲದಿರುವುದನ್ನು ಅರಿತು, ಒಮ್ಮೆಲೆ ಭರ್ರನೆ ಮುಂದು ವರಿಯುವ ಸಾಹಸ ಮಾಡಿದ. ಗಂಗಾಮಣಿಯ ಹಿಂದೆ ಬಂದು ನಿಂತು "ದೊಡ್ಡವ್ವಾ" ಎಂದು ಕೂಗಿದ.

ದೊಡ್ಡವ್ವ ಬೆಚ್ಚಿ ಬಿದ್ದಳು; ಏನೂ ಮಾತನಾಡಲಿಲ್ಲ. ಗಯಾರಾಮು ಅವಳ ಹತ್ತಿರವೇ ಬತ್ತಿದ ಮುಖದಿಂದ ಧೊಪ್ಪನೆ ಕುಕ್ಕರು ಕುಳಿತ. "ಆಗಲೆವ್ವ ಆಗಲಿ, ಇದ್ದುದನ್ನೇ ಕೊಡು. ನನಗೆ ವಿಪರೀತ ಹಸಿವೆಯಾಗಿದೆ." ಎಂದ.

ಫರಾಳದ ಮಾತು ಕೇಳುತ್ತಲೇ ಗಂಗಾಮಣಿಯ ಆರಿದ ಕೋಪ ಕ್ಷಣದೊಳಗೆ ಭುಗಿಲೆಂದಿತು. ಅವಳು ಗಯಾರಾಮುನ ಮೋರೆಯ ಕಡೆಗೆ ಕೂಡ ನೋಡದೆ "ನಾಚಿಕೆಗೇಡಿ, ನಿನ್ನ ಮುಖಕ್ಕೆ ಒಂದಿಷ್ಟು ಉರಿಹಚ್ಚಿತು; ನನಗೆ ನಿನ್ನ ಫರಾಳ ಬೇಡ, ನೀ ಬೇಡ ಎಂದು ಹೋದವ, ಮತ್ತೆ ನನ್ನ ಕಡೆಗೇ ಬಂದೆಯಾ ಹೊಟ್ಟೆ ಹಸಿವೆಂತ? ನಾಚಿಕೆಗೇಡಿ, ಹೊರಟು ಹೋಗು ಇಲ್ಲಿಂದ." ಎಂದು ಗರ್ಜಿಸಿದಳು.

"ಏಕೆ ದೊಡ್ಡವ್ವ, ಹೀಗೇಕೆ ಮಾಡುತ್ತೀಯೇ?"

ದೊಡ್ಡವ್ವ ಇನ್ನೂ ಗಟ್ಟಿಮುಟ್ಟಾಗಿ ಹೇಳಿದಳು: "ಕೆಟ್ಟ ಸೂಳೆ ಮಗನೆ, ಇಷ್ಟೆಲ್ಲಾ ಆಗಿ, ನಾನು ಇನ್ನೂ ನಿನ್ನ ಹೊಟ್ಟೆನೆತ್ತಿ ನೋಡ ಬೇಕೆ? ನಡೆ."

"ನೀನೇ ಹೀಗೆ ತಳ್ಳಿದರೆ ಮತ್ತೆ ಯಾರವ್ವ ಹಾಕುತ್ತಾರೆ ನನಗೆ? ನೀನು ಏಕೆ ಇಲಿಯಮೇಲೆ ತಪ್ಪುಹಾಕಿ ಸುಳ್ಳು ಹೇಳಿದೆ ದೊಡ್ಡವ್ವ? ನನಗೆ ಏಕೆ ಸಿಟ್ಟು ತರಿಸಿದೆಯವ್ವ? ಪ್ರೀತಿಯಿಂದ ಹೇಳಬಾರದಿತ್ತೆ–ತಮ್ಮಾ, ಇದಿಷ್ಟಿದೆ ತೆಗೆದುಕೋ. ಮತ್ತೇನೂ ಮಾಡಿಲ್ಲವಪ್ಪ ಈವೊತ್ತು, ಎಂದು. ಹೀಗೆ ಹೇಳಿದ್ದರೆ ನನಗೆ ಸಿಟ್ಟು ಬರುತ್ತಿರಲಿಲ್ಲ. ಇರಲಿ. ಈಗಾದರೂ ಇದ್ದುದನ್ನು ಕೊಡು, ಲಗುನೆ, ಹೊಟ್ಟೆಯೊಳಗೆ ಪಾತ್ರ ಕುಣಿಯಲಿಕ್ಕೆ ಹತ್ತಿವೆ." ಎಂದ ಗಯಾರಾಮು.

ಅವನ ಮೋರೆ, ಅವನ ಮಾತು, ಅವನ ಧ್ವನಿ ಗಂಗಾಮಣಿಯನ್ನು ಆಕ್ಷಣದಲ್ಲಿ ಕರಗಿಸಿತು. ಆದರೂ ಅವಳು ಸ್ವಲ್ಪ ಸುಮ್ಮನಿದ್ದು ಎಂದಳು: "ಹೊಟ್ಟೆಯೊಳಗೆ ಪಾತ್ರ ಕುಣಿಯುತ್ತಿದ್ದರೆ, ಹೋಗು, ಇದ್ದಾಳಲ್ಲ ನಿಮ್ಮವ್ವ- ಅವಳ ಕಡೆ."

ಮಲತಾಯಿಯ ವಿಷಯ ಕಿವಿಗೆ ಬಿದ್ದೊಡನೆಯೆ ಗಯಾರಾಮನ ಕಣ್ಣುಗಳಲ್ಲಿ ಬೆಂಕಿಯೇ ಹೆಟ್ಟಿಕೊಂಡಿತು. "ನಾನಿನ್ನು ಆ ಅರಿಷ್ಟೆಯ ಮೋರೆಯನ್ನಾದರೂ ನೋಡೇನೇ? ಮತ್ತೇತಕ್ಕಲ್ಲ ಏನಲ್ಲ-- ನನ್ನ ಬಟ್ಟೆಗಳನ್ನು ತೆಗೆದುಕೊಳ್ಳಲು ಮನೆಗೆ ಹೋದರೆ 'ನಡೆ ನಡೆ, ಇನ್ನು ಮುಂದೆ ಸೆರೆಮನೆಯ ಕೂಳು ತಿಂದು ಬಿದ್ದಿರುವೆಯಂತೆ, ಹೋಗು' ಎಂದಳು. ನಾನೇನು ಸುಮ್ಮನೆಯೆ ಬಿಟ್ಟೆನೇ? 'ನಿಮ್ಮ ಮನೆಯ ಕೂಳಿಗೇನೂ ಬಂದಿಲ್ಲ ನಾನು; ನಮ್ಮ ದೊಡ್ಡವ್ವ ಇದ್ದಾಳೆ, ಅಲ್ಲಿಗೆ ಹೋಗುತ್ತೇನೆ' ಎಂದು ಹೇಳಿದೆ. ಮತ್ತೆ ಅಪ್ಪನೇನು ಕಡಿಮೆಯ ರಕ್ಕಸನೆ? ನಾನು ಆ ಮನೆಗೆ ಹೋಗಿದ್ದಾಗ ಕಿವಿಗೆ ಬಿತ್ತು— ಅಪ್ಪನೇನೋ ನಿನಗೆ ಸಿಕ್ಕ ಸಿಕ್ಕಂತೆ ಅಂದಾಡಿ ನಿನ್ನ ಕೈಯೊಳಗಿನ ವಂಶಪತ್ರವನ್ನು ಕಸಿದುಕೊಂಡನಂತೆ!" ಎಂದವನು ಆವೇಶದುಂಬಿ ಕಾಲನ್ನೆತ್ತಿ ಅಪ್ಪಳಿಸುತ್ತ ಮತ್ತೆ ಎಂದ: "ನೀನೇಕೆ ಹೋಗಿದ್ದೆಯವ್ವ ದೊಡ್ಡವ್ವ, ಆ ದುಗ್ಗಾಣಿ ತೊಪ್ಪಲ ತರಲಿಕ್ಕೆ? ಆತನ ಕಡೆಯಿಂದ ಅವಮಾನ ಮಾಡಿಸಿಕೊಳ್ಳಲಿಕ್ಕೆ? ನಾನಿದ್ದೆನಲ್ಲ, ನನಗೇಕೆ ಹೇಳಬಾರದಿತ್ತು? ನೋಡು, ಆ ಬಿದಿರಿನ ಮೆಳೆಯನ್ನೆಲ್ಲಾ ಬೆಂಕಿ ಹಚ್ಚಿ ಸುಟ್ಟು ಹಾಕದಿದ್ದರೆ, ನಾನು ಗಯಾರಾಮನೇ ಅಲ್ಲ! ಅಲ್ಲ, ಆ ಅರಿಷ್ಟೆ ನನಗೆ ಇನ್ನೂ ಏನೇನೆಂದಳು ಗೊತ್ತಿದೆಯೇನು ದೊಡ್ಡವ್ವ? ಆಕೆ ಎಂದಳು– 'ನಿನ್ನ ದೊಡ್ಡವ್ವನೇ ನಿನ್ನ ಮೇಲೆ ಚಾವಡಿಗೆ ದೂರು ಕಳಿಸಿದ್ದಾಳೆ, ಕೊತವಾಲರು ಬರುತ್ತಾರೆ, ನಿನ್ನ ರಟ್ಟೆಗೆ ಹಗ್ಗ ಹಚ್ಚಿ ಸೆರೆಮನೆಗೆ ಎಳೆದೊಯ್ಯುತ್ತಾರೆ.' ಕೇಳಿದೆಯಾ, ಚಂಡಾಲೆಯ ಮಾತು?"

ಗಂಗಾಮಣಿ ಹೇಳಿದಳು: "ನಿನ್ನ ದೊಡ್ಡಪ್ಪ ಮಹಾಶಯರು ಪಾಂಚುವನ್ನು ಸಂಗಡ ಕರೆದುಕೊಂಡು ಚಾವಡಿಗೆ ಹೋಗಿದ್ದಾರೆ.

ನೀನು ನನ್ನ ಮೈಮೇಲೆ ಕೈಮಾಡಿದೆಯಲ್ಲ, ಎಂತಹ ಮಹಾ ಸೊಕ್ಕು ನಿನ್ನದು!"

ಪಾಂಚು ಮಾವನಿಗೂ ಗಯಾರಾಮನಿಗೂ ಒಬ್ಬರನ್ನೊಬ್ಬರು ಕಂಡರೆ ಒಂದೂರಾಗುತ್ತಿರಲಿಲ್ಲ. ಈಗ ಈ ಪ್ರಕರಣದಲ್ಲಿ ಅವನು ಕೈ ಹಾಕಿರುವುದನ್ನು ಕೇಳಿ ಗಯಾರಾಮನ ಮೈಯೆಲ್ಲ ಕಾಯ್ದು ಹೋಯಿತು. "ನನಗೆ ಸಿಟ್ಟು ತಲೆಗೇರಿದ ಹೊತ್ತಿನೊಳಗೆ ನೀನೇಕೆ ತಡೆಯಲಿಕ್ಕೆ ಬಂದಿದ್ದಿ?" ಎಂದು ಸಂತಯಿಸುವ ಮಾತನ್ನಾಡಿದ.

"ಅದಕ್ಕೇ ಹೊಡೆದೆಯೇನು ನನ್ನನ್ನು? ಹಾಗಾದರೆ ಈಗ ಹೋಗು, ಸೆರೆಮನೆಯೊಳಗೆ ಬಂದಿಯಾಗಿ ಬಿದ್ದಿರು," ಎಂದು ನುಡಿದಳು ಗಂಗಾಮಣಿ.

"ಹೂಂ, ನೀನೇ ಕುಳಿತು ನನ್ನನ್ನು ಸೆರೆಮನೆಗೆ ಹಾಕಿಸುತ್ತೀಯಾ? ಆಗಲಿ, ಹಾಕಿಸು; ಹಾಕಿಸಿ ಒಂದಿಷ್ಟು ಮೋಜು ನೋಡು! ನೀನೂ ಅತ್ತು ಅತ್ತು ಒಂದು ದಿನ ಸತ್ತುಹೋಗುತ್ತೀ— ಇನ್ನು ನನಗೆ ನನ್ನವರೆಂಬವರು ಯಾರು ಇದ್ದಾರೆ?" ಎಂದ ಗಯಾರಾಮ.

"ಇಡೀ ನನ್ನ ಬಾಳೇ ಅಳುತ್ತಳುತ್ತ ಹೋಗುತ್ತದೆ! ಹೋಗು ನನ್ನೆದುರಿನಿಂದ. ನೀನೆಲ್ಲಿಯೊ ಹಗೆಯಾಗಿ ಹುಟ್ಟಬೇಕಾಗಿತ್ತು— ತಪ್ಪಿ ಮಗನಾಗಿ ಹುಟ್ಟಿದ್ದೀ," ಎಂದಳು ಗಂಗಾಮಣಿ.

ಗಯಾರಾಮ ಮತ್ತೆ ಕೂಗಿಕೊಂಡ: "ಮೊದಲು ನನಗೆ ತಿನ್ನಲಿಕ್ಕೆ ಕೊಡು; ಆಮೇಲೆ ಹೋಗುತ್ತೇನೆ. ಯಾವಾಗ ಮುಂಜಾನೆ ಏಳು ಗಂಟೆಗೆ ಒಂದು ನಾಲ್ಕು ಕಾಳು ಚುರುಮುರಿ ತಿಂದು ಹೋಗಿರುತ್ತೇನೆ, ನೋಡು. ವಿಪರೀತ ತಾಳಲಾರದ ಹಸಿವು, ದೊಡ್ಡವ್ವ."

ಗಂಗಾಮಣಿ ಇದಕ್ಕೆ ಏನೇನು ಹೇಳಬೇಕೆಂದಿದ್ದಳೊ. ಅಷ್ಟರೊಳಗೆ ಶಿವು ಪಾಂಚುವಿನೊಡನೆ ಚಾವಡಿಗೆ ಹೋಗಿದ್ದವನು ತಿರುಗಿ ಬಂದ. ಅವನಿಗೆ ಗಯಾರಾಮ ಕಣ್ಣಿಗೆ ಬೀಳುತ್ತಲೇ ಮದ್ದಿಗೆ ಕಿಡಿ ಸಿಡಿದಂತಾಯಿತು. "ಹೊಲೆಯಾ, ಮತ್ತೆ ಬಂದೆಯಾ ನಮ್ಮ ಮನೆಗೆ! ಹೊರಡು, ಹೋಗುತ್ತೀಯೋ ಏನೆನ್ನುತ್ತೀ? ಏ ಪಾಂಚು, ಹಿಡಿ ಈ ಹಂದಿಯನ್ನು!" ಎಂದು ಗರ್ಜಿಸಿದ ಶಿವು.

ಗಯಾರಾಮ ವಿದ್ಯುದ್ವೇಗದಿಂದ ಬಾಗಿಲ ಕಡೆ ಓಡಿದ. ಅಲ್ಲಿಂದ ಹೋಗು ಹೋಗುತ್ತ ಒದರಾಡಿದ: "ಈ ಪೇಂಚೋಣೂವನ ಕಾಲ ಗಣಿಕೆಯನ್ನು ಮುರಿಯದಿದ್ದರೆ, ನನ್ನನ್ನು ಗಯಾರಾಮ ಎಂದು ಕರೆಯ ಬೇಡಿರಿ."

ಇಷ್ಟೆಲ್ಲ ಘಟನೆ ಕಣ್ಣಿವೆ ಬಡಿಯುವುದರೊಳಗೇ ಆಗಿಹೋಯಿತು. ಈ ಮಧ್ಯೆ ಗಂಗಾಮಣಿಗೆ ಒಂದು ಮಾತನ್ನಾದರೂ ಆಡಲಿಕ್ಕೆ ಅವ ಕಾಶ ಸಿಕ್ಕಲಿಲ್ಲ.

ಶಿವು ಸಿಟ್ಟು ಬೆಂಕಿಯಾಗಿದ್ದ. ಅವನು ಗಂಗಾಮಣಿಗೆ ಸಾರಿ ಹೇಳಿದ: "ನಿನ್ನ ಅಚ್ಚುಚ್ಚೆಯಿಂದಲೆ ಅವ ಈ ಪರಿ ಮಾಡುವುದು. ಇನ್ನೊಮ್ಮೆಂದಾದರೂ ಈ ಚಂಡಾಲನನ್ನು ಮನೆಯೊಳಗೆ ಕಾಲು ಹಾಕ ಗೊಟ್ಟೀ! ನೋಡು, ನಿನ್ನ ಗತಿ ನೆಟ್ಟಗಾಗಲಿಕ್ಕಿಲ್ಲ!"

ಪಾಂಚು ಹೇಳಿದ: "ಅಕ್ಕ, ನಿಮಗೇ ಏಕೆ, ಇವನಿಂದ ನನಗೂ ಕ್ಷೇಮವಿಲ್ಲ. ಇದೇ ಈಗ ನೀನೇ ಕೇಳಿದೆಯಲ್ಲ; ಇವನು ರಾತ್ರಿ ಹೊತ್ತು ಎಲ್ಲಿಯಾದರೂ ಹೊಂಚು ಹಾಕಿ ನನ್ನ ಮುಗ್ಗಲು ಮುರಿಯಲು ಹವಣಿಸುತ್ತಿದ್ದಾನೆ."

ಶಿವು ಪಾಂಚುವಿನ ಮಾತಿಗೆ ಸಂಬಂಧಿಸಿಯೋ ಸಂಬಂಧಿಸ ದೆಯೋ ತನ್ನ ಮಾತನ್ನು ಮುಂದುವರಿಸಿದ: "ನಾಳೆ ಬೆಳಗಾಗುವುದ ರೊಳಗೆ ಅವನಿಗೆ ಬೇಡಿ ಹಾಕಿಸದಿದ್ದರೆ ನನ್ನ............" ಇತ್ಯಾದಿ ಇತ್ಯಾದಿ.

ಗಂಗಾಮಣಿ ಬೊಡ್ಡೆ ಕುಳಿತ ಹಾಗೆ ಕುಳಿತುಕೊಂಡಿದ್ದಳು. ಆಕೆಯ ಬಾಯಿಂದ ಒಂದೇ ಒಂದು ಮಾತು ಹೊರಡಲಿಲ್ಲ. ಅಂಜಿದ ಪಾಂಚಪ್ಪನವರು ಆ ರಾತ್ರಿ ತಮ್ಮ ಮನೆಗೇ ಹೋಗಲಿಲ್ಲ; ಇಲ್ಲಿಯೇ ಮಲಗಿಕೊಂಡರು.

ಮರುದಿನ ಹತ್ತುಗಂಟೆಯ ಹೊತ್ತಿಗೆ ಕೊತವಾಲ ಮಹೋದ ಯರು, ಉಪಯುಕ್ತ ದಕ್ಷಿಣಾದಿಗಳನ್ನು ತೆಗೆದುಕೊಂಡು, ಕೆಲವು ಪೇದೆ ಗಳೊಂದಿಗೆ ಎರಡು ಹರದಾರಿ ದೂರದಿಂದ ಪಲ್ಲಕ್ಕಿಯಲ್ಲಿ ದಯಮಾಡಿ

ಸಿದರು— ಈ ಪ್ರಕರಣದ ವಿಚಾರಣೆ ನಡೆಸಲು. ಅಧಿಕಾರವಿಲ್ಲದೆ ಮನೆಯೊಳಗೆ ಪ್ರವೇಶಿಸಿದುದು, ವಸ್ತು ಒಡವೆಗಳನ್ನೆಲ್ಲಾ ಕೆಡಿಸಿದುದು, ಹೆಂಗುಸಿನ ಮೇಲೆ ಏರಿಹೋಗಿ ಕಟ್ಟಿಗೆಯಿಂದ ಹೊಡೆದುದು--- ಇಂತು ಮೊದಲಾಗಿ ದೊಡ್ಡ ದೊಡ್ಡ ಆಪಾದನೆಗಳ ಸರಪಂಚಾಂಗದ ಫಿರ್ಯಾದು ; ಆ ಊರ ತುಂಬ ಎಲ್ಲೆಲ್ಲಿಯೂ ಇದೇ ಮಾತಿನ ಹುಯಿಲು ಒಂದೇಸವನೆ ಎದ್ದಿತು.

ಮುಖ್ಯವಾದ ಆರೋಪಿ ಗಯಾರಾಮ. ಅವನನ್ನು ಹಂಚಿಕೆಯಿಂದ ಹಿಡಿದು ತಂದು ಕೊತವಾಲರ ಮುಂದೆ ನಿಲ್ಲಿಸಿದರು. ಆ ಪೇದೆಗಳು, ಆ ಕೊತವಾಲರು, ಆ ಊರಿನ ಗೌಡರು........ ಇವರನ್ನೆಲ್ಲಾ ಕಂಡೊಡನೆಯೆ ಗಯಾರಾಮ ಅಂಜಿ ಅಳುತ್ತಳುತ್ತಾ ನುಡಿದ: "ನನ್ನನ್ನು ಹಚ್ಚಿಕೊಳ್ಳುವವರು ಯಾರೂ ಇಲ್ಲ ಎಂದು ಹೀಗೆ ಹಿಡಿದು ಸೆರೆಮನೆಗೆ ಹಾಕಬೇಕೆಂದು ಮಾಡಿದ್ದೀರಾ?"

ಕೊತವಾಲರು ಆಗಲೆ ವಯಸ್ಸಾದ ಮನುಷ್ಯ. ಆರೋಪಿಯ ಎಳೆವಯಸ್ಸೂ ಅವನ ಆ ಅಳುವೂ ಅವರ ಮನವನ್ನು ಸೆಳೆದವು. ಅವರ ಎದೆ ದಯೆಯಿಂದ ತೋಯಿತು. "ಏಕೆ, ನಿನ್ನನ್ನು ಪ್ರೀತಿಸುವವರು ಯಾರೂ ಇಲ್ಲವೇನು, ಗಯಾರಾಮ?" ಎಂದು ಕೇಳಿದರು.

"ನನಗೆ ಪ್ರೀತಿಯವರೆಂದರೆ ಒಬ್ಬಾಕೆಯೇ ಇದ್ದಾಳೆ—ನಮ್ಮ ದೊಡ್ಡವ್ವ. ಮತ್ತೆ ಯಾರೂ ಇರುವುದಿಲ್ಲ!" ಎಂದು ಗಯಾರಾಮ ಹೇಳಿದ.

ಕೊತವಾಲರು ಮತ್ತೆ ಪ್ರತಿಪ್ರಶ್ನೆ ಹಾಕಿದರು: "ಹಾಗಾದರೆ ನಿಮ್ಮ ದೊಡ್ಡವ್ವನನ್ನು ಏಕೆ ಹೊಡೆದೆ ನೀನು?"

"ಇಲ್ಲ, ಹೊಡೆದಿಲ್ಲ" ಎಂದು ಉಸುರಿದ ಗಯಾರಾಮ. ಬಾಗಿಲಿನ ಹಿಂದೆ ಮರೆಯಾಗಿ ನಿಂತುಕೊಂಡಿದ್ದಳು ಗಂಗಾಮಣಿ. ಅವಳ ಕಡೆ ನೋಡುತ್ತ ಗಯಾರಾಮ ಕೇಳಿದ: "ನಾನು ನಿನ್ನನ್ನು ಯಾವಾಗ ಹೊಡೆದೆನೆ, ದೊಡ್ಡವ್ವ?"

ಪಾಂಚು ಅಲ್ಲಿಯೆ ಅಕ್ಕನ ಹತ್ತಿರ ಕುಳಿತುಕೊಂಡಿದ್ದ. ಅವನು ಒಂದು ತರಹದ ನೋಟವನ್ನು ಅವಳ ಕಡೆ ಬೀರುತ್ತ ನುಡಿದ: "ಅಕ್ಕ,

ಧನಿಯರು ಕೇಳುತ್ತಾರೆ--ಸತ್ಯಸತ್ಯವಾಗಿ ಹೇಳು. ಅವ ನಿನ್ನೆಯ ದಿನ ಮಧ್ಯಾಹ್ನ ಮನೆಯೊಳಗೆ ಹೊಕ್ಕು, ಉರುವಲು ಕಟ್ಟಿಗೆಯಿಂದ ನಿನ್ನನ್ನು ಹೊಡೆಯಲಿಲ್ಲವೆ? ಧರ್ಮರಾಯರ ಎದುರಿಗೆ ಸುಳ್ಳು ಹೇಳಬಾರದು."

ಗಂಗಾಮಣಿ ಅಸ್ಫುಟವಾಗಿ ಏನು ಹೇಳಿದಳೋ ಏನು ಇಲ್ಲವೊ ; — ಪಾಂಚು ಅದನ್ನೇ ಸ್ಫುಟವಾಗಿ ಸಭೆ ಅರಿಯುವಂತೆ ಕೊತವಾಲರಿಗೆ ನಿವೇದಿಸಿದ :

" ಧನಿಯರೆ, ನಮ್ಮಕ್ಕ ಹೇಳುತ್ತಾಳೆ— ಅವ ಹೊಡೆದನಂತೆ."

ಗಯಾರಾಮ ಕಿಡಿಕಿಡಿಯಾಗಿ ಹಲ್ಲು ಕಡಿದ. " ಏ ಏ ಪೇಂಚೋ, ನೋಡು, ನಾನು ನಿನ್ನ ಕಾಲುಗಣಿಕೆ ಮುರಿದು ಕೈಯೊಳಗೆ ಕೊಡದಿದ್ದರೆ— " ಎಂದ. ಅವನ ಸ್ವರವು ಒಳ್ಳೇ ಉಚ್ಚವಾಗಿತ್ತು. ಸಿಟ್ಟಿನ ಆವೇಗ ಮೇರೆವರಿದುದರಿಂದ ಮುಂದೆ ಅವನ ನಾಲಗೆಯೇ ನಡೆಯಲಿಲ್ಲ. ಮತ್ತೆ ಅಳತೊಡಗಿದ.

ಪಾಂಚುವಿಗೂ ಆವೇಶ ತುಂಬಿತು. ಕಾಲುಚಂಡಿನಂತೆ ಪುಟಿನೆಗೆದು ಅವನೆಂದ : " ಇಕ ಇಕಾ, ನೋಡಿದಿರೋ ಇಲ್ಲವೋ ಧನಿಯರಿರ. ನಿಮ್ಮ ಎದುರಿನಲ್ಲಿಯೇ ಈ ಪರಿ ಮಾತಾಡುತ್ತಿದ್ದಾನೆ— ನನ್ನ ಕಾಲು ಮುರಿಯುತ್ತಾನಂತೆ. ನಿಮ್ಮ ಹಿಂದಾದರೆ ಇವನೇನು ಕೊಂದು ಹಾಕುವುದಕ್ಕೂ ಹೇಸ[illegible]ವನಲ್ಲ ಕಂಡಿರಾ ! ಇವನನ್ನು ಬಂಧನದಲ್ಲಿಡುವಂತೆ ಅಪ್ಪಣೆ ಕೊಡಿ[illegible]ಬೇಕೆಂದು ಬೇಡುವೆನು."

ಕೊತವಾಲರು ಒಂದು ಸ್ವಲ್ಪ ನಕ್ಕರಷ್ಟೆ. ಗಯಾರಾಮ ಕಣ್ಣುಗಳನ್ನು ಒರಸಿಕೊಳ್ಳುತ್ತ ಮತ್ತೆ ಆರಂಭಿಸಿದ : " ನನಗೆ ತಾಯಿಯಿಲ್ಲ, ಅದಕ್ಕೇ ! ಇಲ್ಲದಿದ್ದರೆ .... " ತನ್ನ ಮಾತನ್ನು ಪೂರ್ತಿಗೊಳಿಸುವುದು ಈ ಸಲವೂ ಅವನಿಗಾಗಲಿಲ್ಲ. ಯಾವಾಕೆಯ ನೆನಪೂ ಅವನಿಗಿರಲಿಲ್ಲವೋ, ನೆನೆಯುವುದರಿಂದ ಎಂದೂ ಪ್ರಯೋಜನವೂ ಆಗುತ್ತಿರಲಿಲ್ಲವೋ, ಇಂದು ಈ ವಿಪತ್ತಿನಲ್ಲಿ ಒಮ್ಮಿಗಲೇ ಆ ತಾಯಿಯನ್ನು ನೆನಸಿಕೊಂಡು ಬೋರಾಡಿ ಅಳತೊಡಗಿದ.

ಎರಡನೆಯ ಆರೋಪಿ ಶಂಭು— ಅವನ ಮೇಲಿನ ದೂರಿಗೆ ಸರಿಯಾದ ಪ್ರಮಾಣಗಳು ಸಿಕ್ಕಲಿಲ್ಲ. ಈ ಪ್ರಕರಣವನ್ನು ನ್ಯಾಯಾ

ಸ್ಥಾನಕ್ಕೆ ದೂರಿಕೊಳ್ಳುವಂತೆ ಹೇಳಿ, ತಮ್ಮ ಪರಿಶೀಲನೆಯ ವರದಿಯನ್ನು ಬರೆದುಕೊಂಡು ಕೊತವಾಲರು ಹೊರಟುಹೋದರು. “ ಪಾಂಚು ಈ ಕಲಹವನ್ನು ಇಲ್ಲಿಗೇ ಇಂಗಗೊಡುವವನಲ್ಲ, ಕಟ್ಟಳೆಯನ್ನು ಹೂಡುವವನೇ. ತಾನು ಅದರ ವಾದವನ್ನು ಯಥಾವಿಧಿಯಾಗಿ ನಡೆಯಿಸುವ ಹೊಣೆಯನ್ನು ಹೊತ್ತುಕೊಂಡಿದ್ದಾನೆ. ಇನ್ನೇನು, ತನ್ನ ಸಹೋದರಿಯ ಮೇಲೆ ಗುರುತರವಾದ ಅತ್ಯಾಚಾರ ಮಾಡಿದುದಕ್ಕೆ ತಕ್ಕ ಪ್ರಾಯಶ್ಚಿತ್ತ ಗಯಾನಿಗೆ ಆಗುವುದು ಖಂಡಿತ ” — ಎಂದು ಮೊದಲಾಗಿ ಊರ ತುಂಬೆಲ್ಲಾ ಪಾಂಚುವಿನ ಬಾಯಿಂದ ಪ್ರಚುರವಾಯಿತು.

ಆದರೆ ಗಯಾ ಮಾತ್ರ ಈ ವಿಷಯದಲ್ಲಿ ಪೂರಾ ಅಲಿಪ್ತನಾಗಿದ್ದ; ಅವನಿಗೆ ಯಾವುದೂ ಪರಿವೆಯಿಲ್ಲ. ಓಣಿಯವರಿಗೆ ಬಟ್ಟೆಯವರಿಗೆ ಶಿವು ಮಾಡಿದುದು ಸರಿದೋರಲಿಲ್ಲ; ಅವರು ಆತನನ್ನು ಬಹಳ ಆಡಿಕೊಳ್ಳುತ್ತಿದ್ದರು. ಅವರೆಲ್ಲರ ಮೇಲೂ ಹರಿಹಾಯ್ದು ಜಗಳವಾಡುತ್ತ ತಿರುಗುವುದು ಶಿವೂನ ಕೆಲಸವಾಗಿತ್ತು. ಆದರೆ ಅವನ ಹೆಂಡತಿ ಈ ಬಗ್ಗೆ ಯಾವಾಗಲೂ ಪಿಟ್ಟೆನ್ನುತ್ತಿರಲಿಲ್ಲ. ಗಯಾರಾಮನಿಗೆ ದೂರದ ಹತ್ತುಗಡೆಯ ಅಬಚಿಯೊಬ್ಬಳಿದ್ದಳು; ಆಕೆ ಈ ಸುದ್ದಿಯನ್ನು ಕೇಳಿ ನೇರಾಗಿ ಶಿವೂನ ಮನೆಗೆ ಬಂದಳು; ಆತನ ಹೆಂಡತಿ ಗಂಗಾಮಣಿಗೆ ಮನಬಂದಂತೆ ಸಿಕ್ಕಾಪಟ್ಟೆ ಅಂದು ಆಡಿ, ಶಪಿಸಿ ಸಗಣೆ ಮನೆ ಕಟ್ಟಿ ಹೋದಳು; ಎಂದರೂ ಗಂಗಾಮಣಿ ಬಾಯಿ ಹೊಲಿದು ಹೋಗಿರುವುದೋ ಏನೋ ಎನ್ನುವಂತೆ ಸುಮ್ಮಗಿದ್ದುಬಿಟ್ಟಳು! ಗಂಡನಿಗೂ ತಿಳಿಸಲಿಲ್ಲ. ಈ ಅಬಚಿ ಮಾಡಿದ ರಣಕತ್ತಲ ಶಿವೂನಿಗೆ ನೆರೆಹೊರೆಯವರಿಂದ ಗೊತ್ತಾಯಿತು. ‘ ಪಾಪ, ಗಂಗಾಮಣಿ ಸಾಧು ಪ್ರಾಣಿ, ಎಷ್ಟೆಂದರೂ ಒಂದು ತುಟಿ ಎರಡು ಮಾಡಲಿಲ್ಲ’ ಎಂದು ಅವರು ಆತನೆದುರಿಗೆ ಆಕೆಯನ್ನು ಕೊಂಡಾಡಿದರು. ಇದರಿಂದ ಶಿವೂನಿಗೆ ರೇಗಿಹೋಯಿತು. ಮನೆಗೆ ಬಂದು ಹೆಂಡತಿಗೆ ಗದ್ದರಿಸಿದ:

“ ನೀನು ಎಲ್ಲದಕ್ಕೂ ಸುಮ್ಮನೆ ಇದ್ದೆಯಾ? ಒಂದು ಮಾತೂ ಆಡಲಿಲ್ಲವೇ? ”

" ಇಲ್ಲ. " ಉದಾಶೀನತೆಯಿಂದ ಗಂಗಾಮಣಿ ಉಸುರಿದಳು.

" ಹೂಂ! ನಾನು ಮನೆಯಲ್ಲಿ ಇದ್ದಿದ್ದರೆ ನೋಡುತ್ತಿದ್ದೆ; ಆಕೆಯನ್ನು ಪಾತ್ರ ಕುಣಿಸಿಬಿಡುತ್ತಿದ್ದೆ. ಇದ್ದಿಲ್ಲ, ಉಳಿದುಕೊಂಡಳು, ಏನುಮಾಡುವುದು! " ಎಂದ ಶಿವು.

ಗಂಗಾಮಣಿ ಹೇಳಿದಳು: " ಆಯಿತು, ಇನ್ನೇನು ಹಾಗಾದರೆ, ನೀವು ಈವೊತ್ತಿನಿಂದ ಮನೆಹಿಡಿದು ಕುಳಿತುಕೊಳ್ಳಿರಿ; ಎಲ್ಲಿಯಾದರೂ ಹೊರಗೆ ಹೋದಗೀದೀರಿ ಮತ್ತೆ! " ಇಷ್ಟೆಂದು ಅವಳು ತನ್ನ ಕೆಲಸಕ್ಕೆ ತಾನು ಹೊರಟುಹೋದಳು. ಇದು ಮಾತು ಅಷ್ಟೆ. ಶಿವೂನಿಗೆ ಮನೆಯನ್ನು ಕಾಯ್ದುಕೊಂಡಿರಲಾಗುತ್ತದೆಯೋ? ಊರವರು ಆಡಿಕೊಳ್ಳುವುದನ್ನು ಇದಿರಿಸಬೇಕಲ್ಲ—

ಮತ್ತೆ ಒಂದು ದಿನ– ಮುಂದೆ ಸ್ವಲ್ಪ ದಿನಗಳಲ್ಲಿ— ಶಂಭು ಬಂದು ಬಿದಿರುಮೆಳೆಯಿಂದ ಕೆಲವು ಗಳಗಳನ್ನು ಮುರಿದುಕೊಂಡು ಒಯ್ದ. ಶಿವೂ ಮನೆಯೊಳಗಿರಲಿಲ್ಲ. ಗಂಗಾಮಣಿ ಸಪ್ಪಳವನ್ನು ಕೇಳಿ ಮನೆಯ ಹೊರಗೆ ಬಂದು, ಎಲ್ಲವನ್ನೂ ತನ್ನ ಕಣ್ಣಾರೆ ನೋಡಿದಳು. ಆದರೆ, ಹಿಂದಿನಂತೆ ಅದಕ್ಕೆ ಅಡ್ಡಿಮಾಡುವುದು ಒತ್ತಟ್ಟಿಗಿರಲಿ, ಈ ದಿನ ಅವಳು ಆ ಕಡೆ ಹೋಗಲಿಲ್ಲ ಕೂಡ, ಒಂದು ಮಾತೂ ಆಡಲಿಲ್ಲ; ನೋಡಿಕೊಂಡು ಸುಮ್ಮನೆ ಮತ್ತೆ ಒಳಗೆ ಹೋದಳು. ಶಿವೂನಿಗೆ ಒಂದೆರಡು ದಿನಗಳ ತರುವಾಯ ಈ ಸುದ್ದಿ ಹತ್ತಿತು. ಆಗ ಅವನು ಊರೆಲ್ಲ ಹಾರಾಡಿದ. ಮನೆಗೆ ಬಂದು ಹೆಂಡತಿಗೆ ಗುಡುಗಿದ: " ನಿನ್ನ ಕಿವಿ, ನಿನ್ನ ಕಣ್ಣು, ನಿನ್ನ ಬಾಯಿ ಎಲ್ಲಾ ಸೇದಿಹೋದವೆ? ಮನೆಯ ಮಗ್ಗುಲೊಳಗೇ ಇದೆ ಬಿದಿರುಮೆಳೆ. ಅವ– ಆ ಶಂಭ್ಯಾ– ಬಂದು ಸಿಕ್ಕ ಹಾಗೆ ಮುರಿದುಕೊಂಡು ಹೋದ. ನಿನಗದು ಗೊತ್ತೇ ಆಗಬಾರದೆ?"

ಆಕೆ ಉತ್ತರ ನುಡಿದಳು: " ಗೊತ್ತಾಗದೆ ಏನು? ನಾನು ಕಣ್ಣಾರೆ ನೋಡಿದ್ದೇನೆ ಎಲ್ಲವನ್ನೂ!"

ಇದನ್ನು ಕೇಳುತ್ತಲೆ ಶಿವು ಕಿಡಿಕಿಡಿಯಾದ. "ಹಾಗಾದರೆ ನೀನು ನನಗೇಕೆ ಅದನ್ನು ತಿಳಿಸಲಿಲ್ಲ?" ಎಂದ.

"ಇದರೊಳಗೇನು ಹೇಳುವುದಿತ್ತು ನಿಮಗೆ? ಈ ಮೆಳೆಯೇನು ನಮ್ಮೊಬ್ಬರದೇನೇ? ಶಂಭುಮೈದುನರ ಪಾಲೂ ಇರುವುದಲ್ಲವೇ ಅದರಲ್ಲಿ?" ಎಂದು ಗಂಗಾಮಣಿ ನುಡಿದಳು.

ಶಿವು ವಿಸ್ಮಯದಿಂದ ತಣ್ಣಗಾದ. "ನಿನ್ನ ತಲೆಗಿಲೆ ಕೆಟ್ಟಿದೆಯೋ ಏನು ಮತ್ತೆ!" ಎಂದಿಷ್ಟೇ ನುಡಿದು ಸುಮ್ಮನಾದ.

ಅದೆ ದಿನ ಸಂಜೆ ಹೊತ್ತುಮುಳುಗಿ, ಕಚೇರಿಗೆ ಹೋಗಿದ್ದ ಪಾಂಚು ದಣಿದು ತಿರುಗಿಬಂದು, ಉಸ್ಸೆಂದು ಧಪ್ಪನೆ ಕುಕ್ಕರಿಸಿದ. ಶಿವು ದನಗಳಿಗೆ ಮೇವು ಕೊರೆಯುವುದರಲ್ಲಿ ತೊಡಗಿದ್ದ. ಪಾಂಚುವಿನ ಮೋರೆಯ ಮೇಲೆ ಹರಿದಾಡುತ್ತಿದ್ದ ನಗೆ, ಆತನ ಕಣ್ಣುಗಳಲ್ಲಿ ಸೂಸುತ್ತಿದ್ದ ಗೆಲುವಿನ ಕಳೆ ಶಿವೂನ ಗಮನಕ್ಕೇ ಬರಲಿಲ್ಲ. ಅವನು ಸಭಯ ಚಕಿತ ಸ್ವರದಿಂದ ಪ್ರಶ್ನಿಸಿದ: "ಏನು, ಏನಾಯಿತು?"

ಗಂಭೀರವಾಗಿ ಒಂದು ನಗೆಯನ್ನು ನಕ್ಕು ಪಾಂಚು ಆಢ್ಯತೆಯಿಂದ ಹೇಳಿದ: "ಆಗುವುದೇನು? ಪಾಂಚು ಕೈಹಾಕಿದಮೇಲೆ ಏನಾಗಬೇಕೋ ಅದಾಯಿತು! ವಾರಂಟು ಹೊರಡಿಸಿಯೇ ಬಂದಿದ್ದೇನೆ. ಈಗ ಅವ ಎಲ್ಲಿ ಬೇಕಾದಲ್ಲಿರಲಿ, ಹಿಡಿಯಬಲ್ಲೆ!"

ಶಿವೂನಿಗೆ ಭಯಂಕರವಾದ ದುರಾಗ್ರಹವೇ ಮೈದುಂಬಿತ್ತೊ ಏನೋ. ಅವನೆಂದ: "ಎಷ್ಟು ಬೇಕಾದಷ್ಟು ವೆಚ್ಚವಾಗಲಿ, ಆ ದಿಕ್ಕೇಡಿಯನ್ನು ಹಿಡಿದು ಸೆರೆಮನೆಗೆ ಅಟ್ಟಿಯೇ ತೀರಬೇಕು. ಆ ತರುವಾಯವೇ ಮಿಕ್ಕುಳಿದ ಕೆಲಸ."

ಮುಂದೆ ಎಷ್ಟೋ ಹೊತ್ತು ಇಬ್ಬರೂ ಮಾತುಕತೆ ಆಡಿಕೊಂಡರು. ಮಾತಿನ ಮೈಮರೆವಿನಲ್ಲಿಯೇ ರಾತ್ರಿಯು ಒಂದಾಯಿತು. ಅವರಿಗೆ ಮೈಮೇಲೆ ಎಚ್ಚರ ಬಂದಾಗ ಇಷ್ಟೊತ್ತಾದರೂ ಒಳಗಿಂದ ಊಟದ ಕರೆಯೇ ಬರಲಿಲ್ಲವೆಂಬುದು ಗೊತ್ತಾಯಿತು. ಶಿವೂನಿಗೆ ಒಳ್ಳೇ ಆಶ್ಚರ್ಯವಾಯಿತು; ಎದ್ದು ಅಡಿಗೆ ಮನೆಗೆ ಹೋಗಿ ನೋಡಿದ. ಅಲ್ಲೆಲ್ಲಾ ಕಗ್ಗತ್ತಲೆಯ ಆಳಿಕೆ.

ಅಲ್ಲಿಂದ ಶಿವು ಪಡುಕೋಣೆಗೆ ಹೋಗಿ ಇಣಿಕಿದ; — ಹೊರಸಿನ ಮೇಲೆ ಚಾಪೆಯನ್ನು ಚೆಲ್ಲಿಕೊಂಡು ಮಲಗಿಬಿಟ್ಟಿದ್ದಾಳೆ, ಗಂಗಾ

ಮಣಿ ! ಮುನಿಸು ಬೆರೆತ ಅಚ್ಚರಿಯ ದನಿಯಲ್ಲಿ " ಊಟದ ಹೊತ್ತು ಕಳೆದುಹೋಯಿತು. ಏಕೆ, ನಮ್ಮನ್ನು ಊಟಕ್ಕೆ ಎಬ್ಬಿಸಲೇ ಇಲ್ಲ ವಲ್ಲ ? " ಎಂದು ಅವನು ಕೇಳಿದ.

ಗಂಗಾಮಣಿ ಮೆಲ್ಲನೆ ಆ ಮಗ್ಗುಲಿಂದ ಈ ಮಗ್ಗುಲಿಗೆ ಹೊರಳಿ ಎಂದಳು : " ಯಾರು ಅಡಿಗೆ ಅಟ್ಟಿಟ್ಟಿದ್ದಾರೆಂತ ಎಬ್ಬಿಸಬೇಕು ? "

ಶಿವು ಗರ್ಜನೆಯಿಂದ ಪ್ರಶ್ನೆಯನ್ನು ಒಗೆದ : " ಏನು, ಕೂಳನ್ನೇ ಕುಚ್ಚಲಿಲ್ಲವೇ ಇನ್ನೂ ? "

" ಇಲ್ಲ. ಈ ದಿನ ನನ್ನ ಮೈಯಲ್ಲೇ ನೆಟ್ಟಗಿಲ್ಲ ; ನಾನು ಕುಚ್ಚ ಲಾರೆ " ಎಂದು ನುಡಿದಳು.

ಶಿವೂನಿಗೆ ಮೊದಲೇ ಹೊಟ್ಟೆಯೊಳಗೆ ಹಸಿವಿನ ಬೇಗೆ ಹೊತ್ತಿದ್ದಿತು. ಇನ್ನೂ ಸಹನೆಯಿಂದಿರುವುದು ಅವನಿಗಾಗಲಿಲ್ಲ. ಕೋಣೆಯೊಳಗೆ ಹೋಗಿ ಮಲಗಿದ್ದ ಹೆಂಡತಿಯ ಬೆನ್ನಿಗೆ ಒಂದು ಗುದ್ದು ಹಾಕಿದ. " ಚೆನ್ನಾಯಿತು ! ಇತ್ತೀಚೆಗೇಕೋ ನಿನಗೆ ದಿನಾಲು ಜಡ್ಡು, ದಿನಾಲು ಕೈಲಾಗುವುದಿಲ್ಲ! ಆಗದಿದ್ದರೆ ಇದ್ದೀಯೇಕೆ ಮಣ್ಣು ಹೊಯ್ಕೊಳ್ಳಲಿಕ್ಕೆ? ಹೊರಟುಹೋಗು ನಮ್ಮ ಮನೆ ಬಿಟ್ಟು ! " ಎಂದು ಮಾತಿನ ಬಿರುಸು ಹಚ್ಚಿದ.

ಗಂಗಾಮಣಿ ಇಷ್ಟಕ್ಕೂ ಮಾತಾಡಲೂ ಇಲ್ಲ, ಎದ್ದು ಕುಳಿತುಕೊಳ್ಳಲೂ ಇಲ್ಲ. ಹೇಗೆ ಬಿದ್ದುಕೊಂಡಿದ್ದಳೋ ಹಾಗೆಯೇ ಬಿದ್ದುಕೊಂಡಿದ್ದಳು. ಆ ರಾತ್ರಿ ಪಾಂಚು, ಶಿವು ಯಾರಿಗೂ ಊಟವಿಲ್ಲ.

ಬೆಳಗುಮುಂಜಾನೆ ಎದ್ದಮೇಲೆ ಎಷ್ಟೋ ಹೊತ್ತಿಗೆ, ಗಂಗಾಮಣಿ ಮನೆಯೊಳಗಿಲ್ಲವೆಂದು ಗೊತ್ತಾಯಿತು. ಅತ್ತಲಾಗಿ ಇತ್ತಲಾಗಿ ತುಸ ಹುಡುಕುವುದಾಯಿತು. ಆ ಮೇಲೆ ಪಾಂಚು " ಅಕ್ಕ ನಮ್ಮ ಮನೆಗೆ ಹೋಗಿರುವುದೇ ಖಂಡಿತ " ಎಂದು ಹೇಳಿದ.

ಹೆಂಡತಿಯಲ್ಲಿ ಆಕಸ್ಮಿಕವಾಗಿ ಈ ರೀತಿ ಬದಲಾವಣೆ ಏಕೆ ಆಯಿತೆಂಬುದನ್ನು ಶಿವು ತನ್ನಷ್ಟಕ್ಕೆ ತಾನು ಅರಿತುಕೊಂಡಿದ್ದ. ಇದರಿಂದ ದಿನದಿನಕ್ಕೆ ಅವನಲ್ಲಿ ವಿರಕ್ತಿಯೂ ಹೆಚ್ಚು ಹೆಚ್ಚಾಗತೊಡಗಿತ್ತು ; ಕೈಕೊಂಡ ಮೊಕದ್ದಮೆಯನ್ನು ನಡೆಯಿಸುವುದರಲ್ಲಿ ಅವನ ಆಸಕ್ತಿಯೂ ಕಡಿಮೆಯಾಗುತ್ತ ಬಂದಿತ್ತು. ಅವನು " ಆಕೆ ಎಲ್ಲಿಗಾದರೂ ಏಕೆ

ಹೋಗಿಕೊಳ್ಳಲಿ, ಅವಳನ್ನು ಹುಡುಕುವ ಅಗತ್ಯವೇನೂ ನಮಗಿಲ್ಲ" ಎಂದು ಮಾತ್ರ ನುಡಿದ.

ಮಧ್ಯಾಹ್ನದ ಮೇಲೆ ಸುದ್ದಿ ಬಂದಿತು— ಗಂಗಾಮಣಿ ತನ್ನ ತವರುಮನೆಗೆ ಎಂದರೆ ಪಾಂಚುವಿನಮನೆಗೆ ಹೋಗಿಲ್ಲ ಎಂದು. ಪಾಂಚು ಮತ್ತೆ ಭರವಸೆ ಕೊಟ್ಟ: "ಹಾಗಾದರೆ ಅವಳು ನಿಶ್ಚಯವಾಗಿಯೂ ಅತ್ತೆವ್ವನ ಮನೆಗೆ ಹೋಗಿದ್ದಾಳೆ."

ಆ ಅತ್ತೆವ್ವ ಇರುವುದು ಅಲ್ಲಿಂದ ಐದಾರು ಹರದಾರಿ ದೂರದ ಒಂದು ಹಳ್ಳಿಯಲ್ಲಿ. ಆಕೆ ಯಾವಾಗಯಾವಾಗಲಾದರೂ ಹಬ್ಬ ಹುಣ್ಣಿವೆಗಳಿಗೆ ಗಂಗಾಮಣಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ಶಿವೂನಿಗೆ ಹೆಂಡತಿಯೆಂದರೆ ಬಲು ಪ್ರೀತಿ. ಅವನು ಬಾಯಿಂದೇನೋ "ಮನಸ್ಸಿಗೆ ಬಂದಲ್ಲಿಗೆ ಹೋಗಲಿ, ಸತ್ತುಕೊಳ್ಳಲಿ!" ಎಂದು ನುಡಿದ. ಆದರೆ ಒಳಗೊಳಗೆ ತಳಮಳಗೊಳ್ಳುತ್ತ ಒಳ್ಳೇ ಉತ್ಕಂಠಿತನಾಗಿದ್ದ. ಅದೇ ಕೋಪದ ಆವೇಶ ಆವೇಗದಲ್ಲಿ ಐದಾರು ದಿನಗಳು ಕಳೆದವು. ಇತ್ತ ಮನೆಯ ಕೆಲಸ ಬೊಗಸೆಗಳು, ಅತ್ತ ದನಕರುಗಳ ಹೋರೆ ದಗದಗಳು. ಸಂಸಾರವು ಒಂದು ತೆರದಿಂದ ಅವನಿಗೆ ಬೆಟ್ಟವಾಗಿಬಿಟ್ಟಿತು; ಇನ್ನು ಒಂದು ದಿನವೂ ಜಗ್ಗಲಾರದು ಎಂಬಷ್ಟಾಯಿತು.

ಏಳನೆಯ ದಿನ ಶಿವು ತಾನೇ ಹೋಗಲಿಲ್ಲವೇನೋ ಹೌದು— ಆದರೆ ತನ್ನ ಪೌರುಷದ ಬಿಂಕವನ್ನೆಲ್ಲ ವಿಸರ್ಜನೆಗೊಳಿಸಿ, ಆಕೆಯ ಅತ್ತೆವ್ವನ ಮನೆಗೆ ಚಕ್ಕಡಿಯನ್ನು ಕಳಿಸಿಕೊಟ್ಟ. ಮರುದಿನ ಚಕ್ಕಡಿ ಮರಳಿ ಬಂತು, — ಹೇಗೆ ಹೋಗಿತ್ತೋ ಹಾಗೇ ಉಧೋ ಲಕ್ಷ್ಮಣ ಎಂತ. 'ಅಲ್ಲಿ ಯಾರೂ ಇಲ್ಲ' ಎಂದು ಆಳುಮಗನು ಹೇಳಿದ. ಶಿವು ಹಣೆಗೆ ಕೈಹಚ್ಚಿಕೊಂಡು ಕುಳಿತುಬಿಟ್ಟ.

ಇಡೀ ದಿನ ಅವನಿಗೆ ಜಳಕವಿಲ್ಲ, ಊಟವಿಲ್ಲ. ಹಲಗೆ ಮಂಚದ ಮೇಲೆ ಹೆಣ ಬಿದ್ದಂತೆ ಬಿದ್ದುಕೊಂಡಿದ್ದ. ಪಾಂಚು ಅತ್ಯಂತ ಉತ್ಸಾಹಭಾವದಿಂದ ಮನೆಯನ್ನು ಪ್ರವೇಶಿಸುತ್ತ "ಶೋಧವಾಯಿತಲ್ಲ, ಸಾಮಂತ ಮಹಾಶಯ!" ಎಂದ.

ಶಿವು ಗಡಬಡಿಸಿ ಎದ್ದು ಕುಳಿತ. "ಎಲ್ಲಿ! ಎಲ್ಲಾ ಕುಶಲ ವಷ್ಟೆ? ಈಗಿಂದೀಗಲೇ ಇಬ್ಬರು ಹೋಗಬೇಕು, ಚಕ್ಕಡಿಯನ್ನು ಹೂಡಿಕೊಂಡು ಕರೆತರಲಿಕ್ಕೆ" ಎಂದು ಬಡಬಡಿಸಿದ.

ಪಾಂಚು ತಿಳಿಸಿಹೇಳಿದ: "ಅಕ್ಕನ ವಿಷಯವಲ್ಲ ನಾನು ಹೇಳಿದ್ದು. ಗಯಾ ಸಿಕ್ಕ ಎಂದು."

ಇದನ್ನು ಕೇಳಿ ಶಿವು ಪುನಃ ಹಾಗೆಯೇ ಬಿದ್ದುಕೊಂಡ; ಯಾವ ಮಾತನ್ನೂ ಆಡಲಿಲ್ಲ!

ಆಗ ಪಾಂಚು ಅವನಿಗೆ ಪರಿಪರಿಯಿಂದ ತಿಳಿವಳಿಕೆ ಹೇಳ ತೊಡಗಿದ: "ಇಂದಿನ ಸುಯೋಗವನ್ನು ಏನಾದರೂ ಕಳೆದುಕೊಳ್ಳು ವುದು ಲೇಸಲ್ಲ. ಅಕ್ಕನ ವಿಷಯ ಚಿಂತಿಸಬೇಕಾಗಿಲ್ಲ; ಅವಳು ಇಂದಿಲ್ಲ ನಾಳೆ ಬಂದೇ ಬರುತ್ತಾಳೆ. ಆದರೆ ಆಗ ಈ ಹುಡುಗ ನನ್ನು ಹಿಡಿದುಹಾಕೇನೆಂದರೆ ಆಗಲಾರದು."

ಉದಾಸ ಸ್ವರದಲ್ಲಿ ಶಿವು ಹೇಳಿದ: "ಈ ವಿಷಯವೀಗ ಸಾಕು ಪಾಂಚು. ಮೊದಲು ಅವಳಂತೂ ತಿರುಗಿಬರಲಿ--- ಆ ಮೇಲೆ—"

ಪಾಂಚು ಅವನ ಮಾತನ್ನು ನಡುವೆ ತಡೆದು "ಒಳ್ಳೇ ಹೇಳಿದೆ, ಅವಳು ಬಂದಮೇಲೆ ಏನಾಗುತ್ತದೆ ಸಾಮಂತ ಮಹಾಶಯ! ಅದಕ್ಕೇ ಹೇಳಿದ್ದು— ಅಷ್ಟರೊಳಗೇ ಈ ಕೆಲಸವನ್ನು ಮಾಡಿಕೊಂಡುಬಿಡ ಬೇಕು ಎಂದು," ಎಂದ.

ಈ ಮಾತಿಗೆ ಶಿವೂ ಒಪ್ಪಿಕೊಂಡನೇನೋ ಹೌದು ಆದರೆ ಭಣ ಭಣ ಎನ್ನುವ ತನ್ನ ಮನೆಯಕಡೆ ನೋಡಿ, ಅನ್ಯರ ಮೇಲೆ ವ್ಯಾಜ್ಯಹೂಡಿ ನಡೆಯಿಸುವ ಹುರುಪು ಅವನಲ್ಲಿ ಅಳಿದುಹೋಗಿದ್ದಿತು; ಮುತ್ತುಮಾಡಿ ಹುದುಕಿದರೂ ಅದು ಅವನಲ್ಲಿ ಕಂಡುಬರಲಿಲ್ಲ. ಕೆಲಸ ಮುಂದೆ ಸಾಗಿಸುವುದು ಪಾಂಚುವಿನ ಹುಮ್ಮಸ್ಸಿನಿಂದಲೇ.

ಮರುದಿನ ಇನ್ನೂ ರಾತ್ರಿಯಿರುವಾಗಲೇ ನ್ಯಾಯಾಸ್ಥಾನದ ಪೇದೆ ಮೊದಲಾದವರೊಂದಿಗೆ ಪಾಂಚು ಶಿವೂ ಹೊರಟರು. ದಾರಿಯಲ್ಲಿ ಪಾಂಚು ತನ್ನ ಹೆಗ್ಗಳಿಕೆ ಕೊಚ್ಚಿಕೊಂಡ: "ಒಳ್ಳೇ ಪ್ರಯಾಸದಿಂದ ಗೊತ್ತುಹಚ್ಚಿದೆ. ಶಂಭು ಅವನನ್ನು ಹೆಸರು ಬದಲಿಸಿ ಸರಕಾರೀ ಸೇತು

ವೆಯ ಕೆಲಸದಲ್ಲಿ ಸೇರಿಸಿದ್ದಾನೆ. ನಾವು ಈಗ ಅಲ್ಲಿಗೇ ಹೋಗಿ ಅವನನ್ನು ಹಿಡಿಯಬೇಕು.''

ಶಿವು ದಾರಿಯುದ್ದಕ್ಕೂ ಬಾಯಿ ಬಿಚ್ಚಿರಲಿಲ್ಲ; ಈ ಮಾತಿಗೂ ಮೌನವಾಗಿಯೇ ಇದ್ದ.

ಅವರು ಆ ಊರು ಸೇರಿದಾಗ ಮಧ್ಯಾಹ್ನವಾಗಿದ್ದಿತು. ಊರಿನ ಒಂದು ಪಕ್ಕದಲ್ಲಿ ವಿಶಾಲವಾದ ಬಯಲು. ಅಲ್ಲಿ ಕಬ್ಬಿಣ ಕಟ್ಟಿಗೆಗಳು, ಮಂದಿ ಮಕ್ಕಳು, ಯಂತ್ರ ಯಾನಗಳು ಕಿಕ್ಕಿರಿದಿದ್ದವು. ಎಲ್ಲೆಲ್ಲಿಯೂ ಚಿಕ್ಕ ಚಿಕ್ಕ ಮನೆಗಳನ್ನು–ಗುಡಿಸಲುಗಳನ್ನು ಕಟ್ಟಿಕೊಂಡು ಕೂಲಿಕುಂಬಳಿಯವರು ಇರುತ್ತಿದ್ದರು. ಬಹಳ ಕಡೆ ಕೇಳಿಯಾಡಿದರು. ಕೊನೆಗೆ ಒಬ್ಬನು ಹೇಳಿದ: " ಸಾಹೇಬರ ಮನೆಯೊಳಗೆ ಓದು ಬರೆ ಕೆಲಸ ಮಾಡುವ ಹುಡುಗನೆಂದು ಕಾಣುತ್ತದೆ. ಅವರ ಮನೆ ಅದು.'' ಅವನು ಒಂದು ಚಿಕ್ಕಗುಡಿಸಲನ್ನು ತೋರಿಸಿದ. ಸಾಮಾನುಗಳ ಗಜಿಬಿಜಿಯಲ್ಲಿ ಕಾಲನ್ನು ಜೋಕೆಯಿಂದ ಎತ್ತೆತ್ತಿ ಇಡುತ್ತ ಕಷ್ಟಪಟ್ಟು ಆ ಗುಡಿಸಲಿನ ಹತ್ತಿರ ಹೋಗಿ ನಿಂತರು ಅವರು. ಒಳಗೆ ಗಯಾರಾಮನ ದನಿಯಾಗುತ್ತಿದ್ದುದು ಕೇಳಿಸಿತು. ಪಾಂಚು ಪುಲಕಿತನಾಗಿ ಉಸಿರ್ಗರೆದ; ಶಿವು ಮತ್ತು ಪೇದೆಗಳೊಡನೆ ಗುಡಿಸಲಿನ ತೆರೆದ ಬಾಗಿಲಿಗೆ ಮುತ್ತಿಗೆ ಹಾಕಿದ. ಆದರೆ, ಕೂಡಲೆ ಅವನ ಮುಖವೆಲ್ಲ ವಿಸ್ಮಯದಿಂದ, ಕ್ಷೋಭೆಯಿಂದ, ನಿರಾಶೆಯಿಂದ ಕಪ್ಪಿಟ್ಟುಹೋಯಿತು: ಗಯಾರಾಮನು ಹಾಯಾಗಿ ಊಟಕ್ಕೆ ಕುಳಿತುಕೊಂಡಿದ್ದಾನೆ; ಗಂಗಾಮಣಿ–ಪಾಂಚುವಿನ ತಂಗಿ–ಅವನಿಗೆ ಊಟಕ್ಕೆ ನೀಡಿ ಹತ್ತಿರ ಕುಳಿತು ಬೀಸಣಿಕೆಯಿಂದ ಗಾಳಿ ಹಾಕುತ್ತಿದ್ದಾಳೆ!

ಗಂಗಾಮಣಿ ಶಿವೂನನ್ನು ನೋಡಿದಳು. ತಲೆಯ ಮೇಲೆ ಸೆರಗೆಳೆದುಕೊಂಡು ಹೇಳಿದಳು: " ನೀವು ಈ ತಂಬಿಗೆ ತೆಗೆದುಕೊಂಡು ಹೊಳೆಗೆ ಹೋಗಿ ಬನ್ನಿರಿ. ಸ್ನಾನ ತೀರಿಸಿಕೊಂಡು ಬರುವುದರೊಳಗೆ ಇನ್ನೊಂದು ತಪ್ಪೇಲಿ ಅನ್ನವನ್ನು ಅಟ್ಟು ಇಳಿಸುತ್ತೇನೆ.''

ಅಭಾಗಿನಿಯ ಸ್ವರ್ಗಾರೋಹಣ

೧

ಜ್ವರದಿಂದ ಏಳು ದಿನ ಬಳಲಿ, ಠಾಕುರದಾಸ ಮುಖರ್ಜಿಯ ಮುದುಕ ಹೆಂಡತಿ ತೀರಿಕೊಂಡಳು. ಮುದುಕ ಮುಖರ್ಜಿ ಹೇರಳವಾಗಿ ಗಂಟು ಮಾಡಿದ್ದ. ಮನೆಯಲ್ಲಿ ನಾಲ್ಕು ಗಂಡು, ಮೂರು ಹೆಣ್ಣು ಮಕ್ಕಳು, ಅಲ್ಲದೆ ಮೊಮ್ಮಕ್ಕಳು. ಬೀಗರು ಬಿಜ್ಜರು, ನೆರೆಹೊರೆಯುವರು, ಆಳುಹೋಳುಗಳು ಬಂದು ಹೋಗುವುದು ಒಂದು ಉತ್ಸವದಂತೆ ಆಯಿತು. ಊರಿಗೆ ಊರೇ ಕೂಡಿತು, ದೊಡ್ಡ ಸಂಭ್ರಮದಿಂದ ಹೊರಡುವ ಸ್ಮಶಾನಯಾತ್ರೆ ನೋಡುವುದಕ್ಕೆ. ಹೆಣ್ಮಕ್ಕಳು ಅಳುತ್ತಳುತ್ತ ತಾಯಿಯ ಅಡಿಗಳಿಗೆ ಅಲತಿಗೆಯ ರಸ, ಹಣೆಗೆ ಕುಂಕುಮ ಹಚ್ಚಿದರು. ಸೊಸೆಂದಿರು ಅತ್ತೆಗೆ ಚಂದನ ಹಚ್ಚಿ ಬೆಲೆಯುಳ್ಳ ಬಟ್ಟೆಗಳಿಂದ ಮುಚ್ಚಿದರು; ಅತ್ತೆಯ ಅಡಿಹುಡಿಯನ್ನು ಕೊನೆಯದಾಗಿ ನೆತ್ತಿಗೆ ಹಚ್ಚಿಕೊಂಡರು. ಮನೆಯೊಳಗೆ ಶೋಕಪ್ರಸಂಗ ಒದಗಿದೆ ಎಂಬುದೇ ತಿಳಿಯದಂತಾಯಿತು — ಹೂ-ಮಾಲೆ, ಇಂಪು ಕಂಪು, ಕಲ

ರವಗಳಲ್ಲಿ. ಇಪ್ಪತ್ತೈದು ವರ್ಷಗಳ ತರುವಾಯ ಮನೆಯೊಡತಿ ಪತಿಯೆಡೆಗೆ ಮರಳಿ ಬಂದಿರಬೇಕು— ಎಂದೇ ಎನಿಸಿತು. ಮುಖರ್ಜಿ ತನ್ನ ಬಲುದಿನದ ಜೊತೆಗಾತಿಯನ್ನು ಶಾಂತಮುಖದಿಂದ ಬೀಳ್ಕೊಟ್ಟು, ಕಣ್ಣೊರಸಿಕೊಂಡು ಹೆಣ್ಮಕ್ಕಳನ್ನು ಸೊಸೆಯರನ್ನು ಸಂತೈಸತೊಡಗಿದ. ಊರೆಲ್ಲ ಹೊರಟಿತು ಸಿದಿಗೆಯ ಹಿಂದೆ.

ಎಲ್ಲಕ್ಕೂ ಹಿಂದೆ ಒಬ್ಬಳು ಹೊರಟಿದ್ದಳು; ಕಂಗಾಲಿಯ ತಾಯಿಯವಳು. ಕಂಬನಿಯನ್ನು ಮಿಡಿಯುತ್ತಾ ಮಿಡಿಯುತ್ತಾ ಮಸಣವನ್ನು ತಲುಪಿದಳು. ಗರುಡನದಿಯ ತಡಿಯಲ್ಲಿ ಚಿತೆ ಅಣಿಯಾಗಿತ್ತು. ಕಂಗಾಲಿಯ ತಾಯಿಯದು ಕೀಳು ಜಾತಿ. ಹತ್ತಿರ ಹೋಗಲು ಇಲ್ಲ ಧೈರ್ಯ. ದೂರದಿಂದಲೇ ಅಂತ್ಯೇಷ್ಟಿಯನ್ನು ಅಥದಿಂದ ಇತಿವರೆಗೆ ನೋಡುವ ಉತ್ಸುಕತೆಯಿಂದ ಎತ್ತರದಲ್ಲಿ ನಿಂತಳು.

ಹೆಣ ಚಿತೆಯ ಮೇಲಿರಿಸಿದರು. ಅಲತಿಗೆಯ ರಸದಿಂದ ರಂಜಿತವಾದ ಪಾದಗಳನ್ನು ಕಂಗಾಲಿಯ ತಾಯಿ ಕಂಡಳು. ಅವಳ ಕಣ್ಣು ತಣಿದವು. ಓಡಿಹೋಗಿ ಒಂದು ತೊಟ್ಟು ಆ ರಸ ತೆಗೆದು ತಲೆಯ ಮೇಲೆ ಇಟ್ಟುಕೊಳ್ಳಲೇ ಎಂದೆನಿಸಿತಾಕೆಗೆ. ತಾಯಿ ಶವಕ್ಕೆ ಮಗ ಬೆಂಕಿ ಕೊಟ್ಟ. ನೋಡುತ್ತಲೇ ಇವಳ ಕಣ್ಣಲ್ಲಿ ನೀರು ತುಂಬಿದವು. ‘ಪುಣ್ಯವಂತಿಯವ್ವಾ ನೀನು, ಸ್ವರ್ಗಕ್ಕೆ ಹೊರಟೆ; ಹೀಗೆಯೆ ನನ್ನ ಕಂಗಾಲಿಯ ಕೈಯ ಬೆಂಕಿ ನನಗೆ ದೊರೆಯುವಂತೆ, ನನ್ನನ್ನು ಹರಸಿ ಹೋಗು ತಾಯಿ,’ ಎಂದು ಮನದೊಳಗೆ ಮತ್ತೆ ಮತ್ತೆ ಎಂದುಕೊಂಡಳು. ಮಗನ ಕೈಯ ಬೆಂಕಿ! ಇದೇನು ಸಾಮಾನ್ಯವಾದ ಮಾತಲ್ಲ!

ಹೊಗೆ ಮುಗಿಲಿಗೆ ನೆಗೆಯತೊಡಗಿತು. ಕಂಗಾಲಿಯ ತಾಯಿಗೆ ಕಂಡಿತು: ಅದರಲ್ಲಿ ಒಂದು ರಥ,–ತೀರ ನಿಚ್ಚಳವಾಗಿ. ನಾಲ್ಕೂ ಬದಿಗಳು ಚಿತ್ರಿತವಾಗಿವೆ, ಮೂಲೆಗಳಲ್ಲಿ ಬಳ್ಳಿಗಳು ಹಬ್ಬಿವೆ. ಒಳಗಿರುವವರು ಯಾರೋ ಗುರುತು ಸಿಕ್ಕದು; ಹಣೆಯಲ್ಲಿ ಕುಂಕುಮದೆಳೆ,

ಕಾಲಿನ ಅಲತಿಗೆಯ ರಸ ಕಾಣುತ್ತಿದೆ. ಅವಳು ಮೇಲೆ ನೋಡುತ್ತಲೇ ನಿಂತಳು. ಕಣ್ಣೀರು ಧಾರೆಗಟ್ಟಿತು.

"ನೀನು ಇಲ್ಲಿ ನಿಂತಿದ್ದೀಯಾ ಅವ್ವ? ರೊಟ್ಟಿ ಸುಡುವುದಿಲ್ಲವೆ?" ಹದಿನಾಲ್ಕು ಹದಿನೈದು ವರುಷದ ಹುಡುಗ ಅವಳ ಸೀರೆಯನ್ನು ಹಿಡಿದು ಜಗ್ಗುತ್ತ ಕೇಳಿದ.

ಬೆಚ್ಚಿಬಿದ್ದಳು ತಾಯಿ. ಮಗನ ಕಡೆ ನೋಡಿ, "ಸುಡುತ್ತೇನೆ" ಎಂದಳು. ಆ ಮೇಲೆ ಒಮ್ಮೆಲೆ ಮೇಲೆ ಬೆರಳು ಮಾಡಿ ವ್ಯಗ್ರವಾಗಿ ನುಡಿದಳು: "ನೋಡಿದೆಯಾ ತಮ್ಮಾ, ಹಾರುವರ ಅಮ್ಮಾಜಿ ರಥ ಏರಿಕೊಂಡು ಸ್ವರ್ಗಕ್ಕೆ ನಡೆದಿದ್ದಾಳೆ!"

ಹುಡುಗ ಮೇಲೆ ಮೊಗವೆತ್ತಿ "ಎಲ್ಲಿ?" ಎಂದು, ತುಸ ಹೊತ್ತು ಇನ್ನಷ್ಟು ಚೆನ್ನಾಗಿ ನೋಡಿ, "ಅವ್ವಾ, ಹುಚ್ಚುಗಿಚ್ಚು ಹಿಡಿಯಿತೇ ನಿನಗೆ! ಬರೀ ಹೊಗೆ ಅದು" ಎಂದ. ಅವನಿಗೆ ಸಿಟ್ಟೇ ಬಂದಿತು. "ಎರಡು ಪ್ರಹರವಾಯಿತು. ನನಗೇನು ಹಸಿವಾಗಿಲ್ಲ ಎನ್ನುತ್ತೀಯಾ?" ಎಂದೆನ್ನುತ್ತ ತಾಯ ಕಣ್ಣಲ್ಲಿಯ ನೀರನ್ನು ನೋಡಿದ.

"ಹಾರುವರ ಎವ್ವ ಸತ್ತಳು; ಅದಕ್ಕೆ ನೀನೇಕೆ ಅಳುತ್ತೀಯಮ್ಮಾ?"

ತಾಯಿ ಎಚ್ಚತ್ತಳು. ಸುಡುಗಾಡುಗಟ್ಟೆಯಲ್ಲಿ ನಿಂತುಕೊಂಡು ಯಾರಿಗಾಗಿಯೋ ಕಣ್ಣೀರು ಸುರಿಸಿದುದಕ್ಕೆ ಅವಳಿಗೆ ಸ್ವಲ್ಪ ನಾಚಿಕೆ ಯಾಯಿತು. ಮತ್ತು ವಾಗತ್ಯದಿಂದ ತಟ್ಟನೆ ಕಣ್ಣೊರಸಿಕೊಂಡು ನಗಲು ಯತ್ನಿಸಿದಳು. "ಏಕೆ ಅಳಲಪ್ಪ; ಹೊಗೆ ತುಂಬಿತು ಕಣ್ಣೊಳಗೆ, ಅದಕ್ಕೆ!" ಎಂದಳು.

"ಹೂಂ ಹೂಂ, ಹೊಗೆಯುಂತೂ ಸೈ. ನೀನು ಅಳುತ್ತಿದ್ದೆ ನಿಜಕ್ಕೂ."

ತಾಯಿ ಮರುಮಾತಾಡದೆ ಮಗನ ಕೈ ಹಿಡಿದುಕೊಂಡು ಹೊರಟು ಹೋದಳು. ಅಂತ್ಯಸಂಸ್ಕಾರವನ್ನು ಪೂರಾ ನೋಡುವುದನ್ನು ಅವಳು ಪಡೆದು ಬಂದಿರಲಿಲ್ಲ!

೨

ಕಂಗಾಲಿಯ ತಾಯಿಯನ್ನು ಹೆತ್ತು ಆಕೆಯ ತಾಯಿ ತೀರಿ ಹೋದಳು; ತಂದೆ ಸಿಟ್ಟು ಸಿಟ್ಟಿನಿಂದ ಮಗಳಿಗೆ 'ಅಭಾಗಿನಿ' ಎಂದು ಹೆಸರಿಟ್ಟ. ತಾಯಿ ಇಲ್ಲ, ಮೀನು ಹಿಡಿಯುತ್ತ ತಿರುಗುವ ತಂದೆ; ಆ ಕೆಲಸಕ್ಕೆ ಅವನಿಗೆ ಹಗಲಂತಿಲ್ಲ, ರಾತ್ರಿಯಂತಿಲ್ಲ. ಆದರೂ ಕಂಗಾಲಿಯ ತಾಯಿಯಾಗುವುದಕ್ಕೆ ಅಭಾಗಿನಿ ಹೇಗೆ ಬದುಕಿದಳೋ ಅದೊಂದು ಅಚ್ಚರಿ. ಅವಳನ್ನು ಮದುವೆಯಾದವನ ಹೆಸರು ರಸಿಕವ್ಯಾಘ್ರ. ಆ ವ್ಯಾಘ್ರನಿಗೆ ಇನ್ನೊಬ್ಬ ವ್ಯಾಘ್ರಿಣಿ ಇದ್ದಳು. ಅವಳನ್ನು ಕಟ್ಟಿಕೊಂಡು ಅವನು ಎಲ್ಲಿಗೋ ಹೋಗಿಬಿಟ್ಟ. ಅಭಾಗಿನಿ ಊರಲ್ಲೇ ಉಳಿದಳು–ತನ್ನ ದುರ್ದೈವ, ತನ್ನ ಮಗ ಕಂಗಾಲಿ ಇವರ ಸಂಗತಿಯಲ್ಲಿ.

ಕಂಗಾಲಿ ದೊಡ್ಡವನಾಗಿದ್ದಾನೆ; ಅವನಿಗೀಗ ಹದಿನೈದರಲ್ಲಿ. ಬೆತ್ತದ ಕೆಲಸವನ್ನು ಕಲಿಯುತ್ತಿದ್ದಾನೆ. ಅಭಾಗಿನಿಗೆ ಆಸೆ, ಇನ್ನೊಂದು ವರ್ಷ ದುರ್ದೈವದೊಡನೆ ಹೋರಾಡಿದೆನೆಂದರೆ, ತನ್ನ ದುಃಖ ದೂರಾಗುವುದು ಎಂದು. ಆಕೆಯ ದುಃಖ ಯಾವುದು? ಎಂತಹದು? ಅದು ನೋಡಿದವರಿಗೇ ಗೊತ್ತು.

ಹೊಂಡದಿಂದ ಕೈಬಾಯಿ ತೊಳೆದುಕೊಂಡು ಮಗ ಬರುವುದರೊಳಗೇ ತಾಯಿ ಅವನು ಉಂಡುಳಿದ ಅಡಿಗೆಯನ್ನು ಮುಚ್ಚಿಟ್ಟಿದ್ದಳು. ಅವನಿಗೆ ಆಶ್ಚರ್ಯವಾಯಿತು.

"ನೀನು ಉಣ್ಣುವುದಿಲ್ಲವೇ ಅವ್ವಾ?"

"ಹಸಿವಿಲ್ಲ"

"ಹೂಂ, ಹಸಿವೇನು ನಿಜವಾಗಿಯೂ ಆಗಿರಲಿಕ್ಕಿಲ್ಲ. ಎಲ್ಲಿ, ನಿನ್ನ ಪರಿವಾಣ?"

ಹೀಗೆ ಹಿಂದೆ ಎಷ್ಟೋ ದಿನ ತಾಯಿ ಮರೆಮಾಡುತ್ತ ಬಂದಿದ್ದಳು. ಇಂದು ಮಗ ಪರಿವಾಣ ನೋಡಿಬಿಟ್ಟ. ಇನ್ನೊಬ್ಬರಿಗಾಗುವಷ್ಟು ಅನ್ನವಿತ್ತು. ಅವನು ಪ್ರಸನ್ನ ಮುಖದಿಂದ ತಾಯ ತೊಡೆಯ ಮೇಲೆ ಹೋಗಿ

ಕುಳಿತ. ಇಷ್ಟು ಹುಡುಗರಾರೂ ಹೀಗೆ ಮಾಡುವುದಿಲ್ಲ. ಆದರೆ ಚಿಕ್ಕಂದಿನಿಂದ ಜಡ್ಡಿನದೆಸೆಯಿಂದ ಅಲ್ಲಿಯೇ ಬೆಳೆದವ ಕಂಗಾಲಿ. ತಾಯ ಕೊರಳಿಗೆ ಕೈಸುತ್ತಿ ಮುಖಕ್ಕೆ ಮುಖ ಹೊಂದಿಸಿದಾಗ ಅವನು ಬೆಚ್ಚಿಬಿದ್ದ.

"ನಿನ್ನ ಮೈ ಬಿಸಿಯಿದೆಯಲ್ಲ. ಬಿಸಿಲಲ್ಲಿ ಏಕೆ ನಿಂತಿದ್ದೆ ಹೆಣ ಸುಡುವುದು ನೋಡಲಿಕ್ಕೆ? ಮತ್ತಾಮೇಲೆ ಸ್ನಾನ! ಹೆಣ ಸುಡುವುದು...."

"ಛಿಹಿ ತಮ್ಮಾ, ಹೆಣ ಸುಡುವುದು ಎನ್ನ ಬೇಡ; ಪಾಪ. ಸತೀಲಕ್ಷ್ಮಿ, ತಾಯಿ ರಥವೇರಿ ಸ್ವರ್ಗಕ್ಕೆ ಹೋದಳು!"

"ನಿನಗೆ ಅದೊಂದೇ ಮಾತು. ರಥದಲ್ಲಿ ಕುಳಿತು ಯಾರೆಲ್ಲಿಯಾದರೂ ಸ್ವರ್ಗಕ್ಕೆ ಹೋಗುತ್ತಾರೆಯೆ!"

"ಕಣ್ಣಾರೆ ಕಂಡೆ ಮಗು- ಹಾರುವರಮ್ಮ ರಥದಲ್ಲಿ ಕುಳಿತು ಹೋದದ್ದು. ಆಕೆಯ ಕೆಂಪು ಪಾದ ಎಲ್ಲರೂ ನೋಡಿದರು!"

"ಎಲ್ಲರೂ?"

"ಹೂಂ, ಎಲ್ಲರೂ."

ಕಂಗಾಲಿ ತಾಯ ಎದೆಗೆ ಮುಖವಿಟ್ಟು ವಿಚಾರ ಮಾಡತೊಡಗಿದ. ಎಳೆತನದಿಂದಲೂ ತಾಯ ನಂಬುವ ರೂಢಿ. ತಾಯಿ ಕಂಡುದು, ಎಲ್ಲರೂ ನೋಡಿದರು ಎಂದು ಹೇಳುವುದು ಸುಳ್ಳಿರಲಾರದು. ತುಸ ತಡೆದು ಮೆಲ್ಲಮೆಲ್ಲನೆ ಕೇಳಿದ: "ನೀನೂ ಸ್ವರ್ಗಕ್ಕೆ ಹೋಗುವವಳೇನು? ಬಿಂದುವಿನ ತಾಯಿ ಎನ್ನುತಿದ್ದಳು, ನಮ್ಮ ಜನರೊಳಗೆ ಕಂಗಾಲಿಯ ತಾಯಿಯಂತಹ ಸತೀ ಲಕ್ಷ್ಮಿ ಮತ್ತೊಬ್ಬಳಿಲ್ಲ."

ತಾಯಿ ಸುಮ್ಮನಿದ್ದಳು. ಕಂಗಾಲಿ ಮುಂದುವರಿಸಿದ: "ಅಪ್ಪ ನಿನ್ನನ್ನು ಬಿಟ್ಟುಹೋದಾಗ ನಿನಗೆಷ್ಟು ಜನರು ಉಡಿಕೆ ಮಾಡಿಕೊಳ್ಳೆಂದು ಹೇಳಿದರು. ನೀನು ಒಪ್ಪಲಿಲ್ಲ. 'ಕಂಗಾಲಿ ದೊಡ್ಡವನಾದನೆಂದರೆ ನನ್ನ ದುಃಖ ದೂರಾಗುವುದು; ಮತ್ತೇಕೆ ಉಡಿಕೆ?' ಎಂದೆ. ಹೌದಮ್ಮ, ನೀನು ಉಡಿಕೆ ಮಾಡಿಕೊಂಡಿದ್ದರೆ ನಾನು ಎಲ್ಲಿ ಹೋಗಬೇಕಿತ್ತು? ಬಹುಶಃ ಕೂಳಿಲ್ಲದೆ ಸಾಯುತ್ತಿದ್ದೆ."

ತಾಯಿ ಮಗನನ್ನು ಅಮುಚಿಕೊಂಡಳು. ಅವಳಂದು ಉಡಿಕೆಯನ್ನು ನಿರಾಕರಿಸಿದುದೊಂದು ದೊಡ್ಡ ಗೊಂದಲವೇ ಆಯಿತು. ಅದರ ನೆನಪಿನಿಂದ ಅಭಾಗಿನಿಯ ಕಣ್ಣಲ್ಲಿ ಸೆಲೆಯೊಡೆಯಿತು. ಮಗ ಒರೆಸಿದ.

" ಕೌದಿ ಹಾಸಲೇ ಅವ್ವ? ಮಲಗುತ್ತೀಯಾ ? "

ಆಕೆ ಮಾತಾಡಲಿಲ್ಲ. ಕಂಗಾಲಿ ಚಾಪೆ ಉರುಳಿಸಿ, ಮೇಲೆ ಕೌದಿ ಹಾಕಿ, ದಿಂಬಿಟ್ಟ. ತಾಯ ಕೈಹಿಡಿದು ಮಲಗಿಸಲು ಕರೆದೊಯ್ದ.

"ಕಂಗಾಲೀ, ನೀನೀವೊತ್ತು ಹೋಗಬೇಡ ಕೆಲಸಕ್ಕೆ; ಇರಲ್ಹೊಲ್ಲದೇಕೆ." ಅದು ಅವನಿಗೂ ಒಳ್ಳೆಯದೆಂದು ಎನಿಸಿತು. ಆದರೂ " ಅನ್ನನೀರಿನ ಎರಡು ದುಡ್ಡೂ ಸಿಕ್ಕದೆ ಹೋದೀತವ್ವಾ! " ಎಂದ.

" ಹೋದರೆ ಹೋಗಲಿ. ಬಾ, ನಿನಗೆ ಕಥೆ ಹೇಳುತ್ತೇನೆ. "

ಹೆಚ್ಚಿನ ಆಸೆ ಉಳಿಯಲಿಲ್ಲ. ತಾಯ ಎದೆಗೆ ಹೊಂದಿ ಮಲಗಿದ ಕಂಗಾಲಿ. " ಹೇಳವ್ವ, ರಾಜಕುಮಾರನ ಕಥೆ, ಕೊತವಾಲನ ಮಗನ ಕಥೆ, ಹಕ್ಕಿಗುದುರೆಯ ಕಥೆ...."

ಬಹಳ ದಿನಗಳ ಹಿಂದೆ ಹೇಳಿಕೇಳಿದ ಕಥೆಗಳವು. ಅವನ್ನು ಹೇಳಲಾರಂಭಿಸಿದಳು ತಾಯಿ. ಒಂದು ಕ್ಷಣದೊಳಗೆ ಎಲ್ಲಿಯೋ ಉಳಿದರು— ಆ ರಾಜಕುಮಾರ, ಆ ಕೊತವಾಲನ ಮಗ, ಆ ಹಕ್ಕಿಗುದುರೆ. ಹೊಸದೊಂದು ಕಥೆ ಹೊರಟಿತು. ಎರಡನೆಯವರಿಂದ ಕಲಿತುದಲ್ಲ, ತಾನೇ ಕಟ್ಟಿದುದು. ಜ್ವರ ಹೆಚ್ಚು ಹೆಚ್ಚೇರಿದಂತೆ ಹೊಸ ಹೊಸ ಕಥೆಗಳ ರಚನೆ. ಭಯ-ವಿಸ್ಮಯಗಳಿಂದ ಪುಲಕಿತನಾಗಿ ಕಂಗಾಲಿ ತಾಯ ಕೊರಳಿಗೆ ಗಟ್ಟಿಯಾಗಿ ತೆಕ್ಕೆಬಿದ್ದು ಎದೆಗೆ ಹತ್ತಿ ಹತ್ತಿ ಅಂಟಿಕೊಂಡ.

ಹೊರಗೆ ಹಗಲು ತೀರಿತು. ಕತ್ತಲೆ ಮೆಲ್ಲಮೆಲ್ಲನೆ ಪಸರಿಸಿತು. ಆವರೆ ಗುಡಿಸಲಲ್ಲಿ ಇಂದು ದೀವಿಗೆ ಹಚ್ಚಲಿಲ್ಲ. ನಿಬಿಡ ಅಂಧಕಾರದಲ್ಲಿ ಜಡ್ಡಿನ ತಾಯಿಯ ಗುಂಜನವು ನಿಸ್ತಬ್ಧನಾದ ಮಗನ ಕಿವಿ

ಯಲ್ಲಿ ಅಮೃತವನ್ನು ಎರೆಯುತ್ತಿತ್ತು. ಅದೇ ಸ್ಮಶಾನ-ಸ್ಮಶಾನಯಾತ್ರೆಯ ಕತೆ. ಅದೇ ರಥ, ಅದೇ ಕೆಂಪು ಕೆಂಪು ಕಾಲು, ಅದೇ ಸ್ವರ್ಗಾರೋಹಣ. ಶೋಕವಿಹ್ವಲನಾದ ಪತಿ ಸತಿಯನ್ನು ಅಂತಿಮಪದಧೂಲಿಯಿತ್ತು ಹೇಗೆ ಬೀಳ್ಕೊಟ್ಟ; ಮಕ್ಕಳ ಬೆನ್ನಹಿಂದೆ ಹೇಗೆ ಹೋದಳು; ಆಮೇಲೆ ಮಗನ ಕೈಯ ಬೆಂಕಿ! "ಆ ಬೆಂಕಿ ಬೆಂಕಿಯಲ್ಲ ತಮ್ಮಾ, ಅದು ಹರಿಯ ರೂಪ. ಆ ಹೊಗೆ ಹೊಗೆಯಲ್ಲ ಮಗೂ, ಅದು ಸ್ವರ್ಗದ ರಥ. ಕಂಗಾಲಿಚರಣ, ನನ್ನ ಮಗೂ!"

"ಏಕಮ್ಮಾ?"

"ನಿನ್ನ ಕೈಯ ಬೆಂಕಿ ಸಿಕ್ಕರೆ, ನಾನೂ ಹಾರುವರಮ್ಮನಂತೆ ಸ್ವರ್ಗಕ್ಕೆ ಹೋಗುವೆ."

ಕಂಗಾಲಿ ಇಷ್ಟೇ ನುಡಿದ, ಅಸ್ಫುಟ ಸ್ವರದಿಂದ: "ಹೋಗು, ಹೀಗೆ ಎನ್ನಬೇಡ!"

ಆದರೆ ತಾಯಿಗೆ ಅದು ಕೇಳಿಸಿರಲಾರದು. ಅವಳು ಬಿಸುಸುಯ್ದು ಹೇಳತೊಡಗಿದಳು: "ಕೀಳು ಜಾತಿಯಾಗಲಿ, ಬಡವರು ಕಷ್ಟಿಗಳು ಆಗಲಿ, ಯಾವುದೂ ತಡೆಯಲಾರದು. ಓಹ್, ಮಗನ ಕೈ ಬೆಂಕಿ— ರಥ ಬಂದೇ ಬರಬೇಕು!"

ಮಗನು ತಾಯ ಮುಖಕ್ಕೆ ಮುಖವಿಟ್ಟು ಬಿಗಿದ ಕೊರಳಿನಿಂದ "ಹೀಗೆ ಎನ್ನಬೇಡಮ್ಮ, ಹೀಗೆನ್ನಬೇಡ; ನನಗೆ ಬಲು ಅಂಜಿಕೆಯಾಗುತ್ತಿದೆ!" ಎಂದ.

"ಇಲ್ಲಿ ಕೇಳು ಕಂಗಾಲಿ, ನೀನು ನಿನ್ನ ತಂದೆಯನ್ನು ಒಮ್ಮೆ ಹಿಡಿದುತಂದೆಯಾದರೆ, ಅವರು ಅವರಂತೆ ನನ್ನ ಹಣೆಗೆ ತಮ್ಮ ಪದಧೂಲಿಯನ್ನಿಟ್ಟು ಬೀಳ್ಕೊಡುವರು. ಹಾಗೆ ಕಾಲಿಗೆ ಅಲತಿಗೆ ರಸ, ಹಣೆಗೆ ಕುಂಕುಮ—ಎಲ್ಲ ಯಾರು ಮಾಡುವರು ತಮ್ಮಾ? ಕಂಗಾಲಿ, ನೀನು ಮಾಡುತ್ತೀಯೋ ಇಲ್ಲವೊ? ನೀನೇ ನನ್ನ ಮಗ, ನೀನೇ ನನ್ನ ಮಗಳು, ನೀನೇ ನನ್ನದೆಲ್ಲ" ಎಂದೆನ್ನುತ್ತೆನ್ನುತ್ತ ತಾಯಿ ಮಗನನ್ನು ಬಿಗಿದಪ್ಪಿಕೊಂಡಳು.

೩

ಅಭಾಗಿನಿಯ ಜೀವನ ನಾಟಕದ ಕೊನೆಯಂಕ ಮುಗಿಯುತ್ತ ಬಂದಿದೆ. ನಾಟಕ ದೊಡ್ಡದೇನಲ್ಲ, ಸಣ್ಣದೇ. ಬಹುಶಃ ಈ ಹೊತ್ತಿಗೆ ಮೂವತ್ತು ವರ್ಷ ದಿನ ಹೋಗಿರಬಹುದು, ಅಥವಾ ಇನ್ನೂ ಹೋಗಿರಲಿಕ್ಕಿಲ್ಲ. ಅದು ಮುಗಿದೂ ಮುಗಿಯಿತು, ಹಾಗೆಯೇ ಸಾಧಾರಣ ರೀತಿಯಿಂದ. ಊರಲ್ಲಿ ವೈದ್ಯನಿಲ್ಲ. ನೆರೆಯೂರಲ್ಲಿ ಒಬ್ಬನಿರುತ್ತಿದ್ದ. ಕಂಗಾಲಿ ಅಲ್ಲಿಗೆ ಯಾತ್ರೆ ಮಾಡಿದ. ಅತ್ತಾ ಕರೆದ, ಕೈಮುಗಿದ, ಕಾಲಿಗೆ ಬಿದ್ದ; ಕೊನೆಗೆ ಒಂದು ಚಂಬು ಒತ್ತೆಯಿಟ್ಟು ಒಂದು ರೂಪಾಯಿಯನ್ನೊಯ್ದು ಕಾಣಿಕೆ ಗೊಟ್ಟ. ಆದರೆ ಅವನೇನು ಬರಲಿಲ್ಲ. ನಾಲ್ಕೈದು ಗುಳಿಗೆಗಳನ್ನು ಕೊಟ್ಟು ಸಾಗಕಳುಹಿದ. ಆದರೆ ಅನುಪಾನದ ರೀತಿ? ಹಿಪ್ಪಲಿ, ಶುಂಟಿ, ತುಳಸಿ....ಏತೇತರ ರಸದೊಡನೆಯೊ ತೆಗೆದುಕೊಳ್ಳಬೇಕಂತೆ!

ತಾಯಿ ಮಗನಿಗೆ ಸಿಟ್ಟು ಮಾಡಿದಳು; ತನ್ನ ಔಷಧಕ್ಕಾಗಿ ಇಷ್ಟೆಲ್ಲ ಏಕೆ? "ನನ್ನನ್ನು ಕೇಳದೆ ಚಂಬು ಒತ್ತೆಯೇಕೆ ಇಟ್ಟೆ ತಮ್ಮಾ!" ಎಂದಳು. ಗುಳಿಗೆಗಳನ್ನು ಕೈಯಲ್ಲಿ ತೆಗೆದುಕೊಂಡು ತಲೆಗೆ ತಾಗಿಸಿ, ಒಲೆಯೊಳಗೆ ಎಸೆದಳು. "ನೆಟ್ಟಗಾಗುವುದಾದರೆ ಹಾಗೇ ನೆಟ್ಟಗಾಗುವುದು. ನಮ್ಮಂತಹರ ಮನೆಯಲ್ಲಿ ಮದ್ದು ಕುಡಿದು ಯಾರೂ ಬದುಕಿಲ್ಲ." ಎಂದು ನುಡಿದಳು.

ಹೀಗೆ ಮೂರು ನಾಲ್ಕು ದಿನಗಳು ಕಳೆದವು. ಸುದ್ದಿಕೇಳಿ ನೆರೆಹೊರೆಯವರು ನೋಡಬಂದರು. ತಮತಮಗೆ ಗೊತ್ತಿದ್ದ ಮದ್ದು ಹೇಳಿದರು. ಸಾರಂಗದ ಕೋಡು ತೆಯ್ದು ಕುಡಿಸುವುದು, ಕವಡಿಯ ಸುಟ್ಟು.... ಇತ್ಯಾದಿ. ತಮ್ಮ ತಮ್ಮ ಕೆಲಸಕ್ಕೆ ಹೊರಟುಹೋದರು. ಮಗ ಕಂಗಾಲಿ ಗಾಬರಿಯಾದುದನ್ನು ಕಂಡು ತಾಯಿ ಅವನನ್ನು ತನ್ನ ಬಳಿ ಸೆಳೆದುಕೊಂಡು ಹೇಳಿದಳು. "ವೈದ್ಯರ ಮದ್ದಿನಿಂದಲೇ ಏನೂ ಆಗಲಿಲ್ಲ. ತಮ್ಮಾ, ಈ ಮದ್ದಿನಿಂದ ಏನಾದೀತು? ನಾನು ಹಾಗೇ ನೆಟ್ಟಗಾಗುತ್ತೇನೆ."

ಕಂಗಾಲಿ ಅಳುತ್ತಳುತ್ತ ಎಂದ " ನೀನು ಗುಳಿಗೆಯನ್ನು ತೆಗೆದು ಕೊಂಡೆ ಎಲ್ಲಿ ಅಮ್ಮಾ? ಒಲೆಯೊಳಗೆ ಚೆಲ್ಲಿಬಿಟ್ಟೆ. ಹಾಗೇ ಹೇಗೆ ನೆಟ್ಟಗಾದೀತು ?"

"ನನಗೆ ನೆಟ್ಟಗಾಗುತ್ತದೆ. ಒಳ್ಳೆಯದು. ನೀನೇನಾದರೂ ಅನ್ನಗಿನ್ನ ಮಾಡಿಕೊಂಡು ಸ್ವಲ್ಪ ಊಟಮಾಡು ನೋಡೋಣ; ನಾನು ನೋಡುತ್ತಿರುತ್ತೇನೆ."

ಅವನ ಕೈ ಅಡುಗೆ ಮಾಡರಿಯದು. ಇಂದೇ ಮೊದಲ ಬಾರಿ ಅಡುಗೆಗೆ ಕುಳಿತ. ಒಲೆ ಚೆನ್ನಾಗಿ ಉರಿಯಲಿಲ್ಲ; ಉಕ್ಕಿ ಒಲೆಯಾರಿ ಹೊಗೆಯಾಯಿತು. ಅವನ ಪಡುಪಾಟಲು ಕಂಡು ತಾಯಿಗೆ ಕಣ್ಣೀರು ಬಂದಿತು. ತಾನೇ ಏಳಬೇಕೆಂದೊಮ್ಮೆ ಹವಣಿಸಿದಳು. ಗೋಣು ನೆಟ್ಟಗೆ ಮಾಡಲು ಕೂಡ ಬರಲಿಲ್ಲ. ಹಾಸಿಗೆಯ ಮೇಲೆ ಬಿದ್ದು ಬಿಟ್ಟಳು. ಏನು ಮಾಡಿಕೊಂಡನೋ ಎಂತು ಮಾಡಿಕೊಂಡನೋ ಉಂಡು ಬಂದ ಕಂಗಾಲಿ.

ಊರಿನ ಕ್ಷೌರದ ಈಶ್ವರ ನಾಡಿನೋಡಲು ಒಲ್ಲನಂತೆ. ಮರು ದಿನ ಅವನು ಬಂದು, ಕಂಗಾಲಿಯ ತಾಯ ಕೈನೋಡಿ, ಅವಳೆದುರಿಗೇ ಮುಖ ಗಂಭೀರಗೊಳಿಸಿ, ಒಂದು ನಿಟ್ಟುಸಿರು ಬಿಟ್ಟು, ಕೊನೆಗೆ ತಲೆ ಅಲ್ಲಾಡಿಸಿ ಎದ್ದು ಹೊರಟು ನಡೆದ. ಆಕೆ ಅರ್ಥಮಾಡಿಕೊಂಡಳು. ಅದಕ್ಕೆ ಅವಳೇನೂ ಹೆದರಲಿಲ್ಲ. ಎಲ್ಲರೂ ಮನೆಗೆ ಹೋದರು.

"ತಮ್ಮಾ, ಅವರನ್ನೊಮ್ಮೆ ಕರೆದುಕೊಂಡು ಬರುತ್ತೀಯಾಽಪ್ಪ."

"ಯಾರನ್ನಮ್ಮ ?"

"ಅವರನ್ನೊ — ಆ ಊರಿಗೆ ಹೋಗಿದ್ದಾರಲ್ಲ ಅವರನ್ನು."

"ಅಪ್ಪನನ್ನೇ ?"

ಅವಳು ಸುಮ್ಮನಿದ್ದಳು.

"ಅವರೇಕೆ ಬಂದಾರಮ್ಮಾ ?"

ಅಭಾಗಿನಿಗೂ ತುಂಬ ಸಂದೇಹವಿತ್ತು. ಆದರೂ ಧೈರ್ಯದಿಂದ ಹೇಳಿದಳು. "ಹೋಗಿ ಹೇಳು – ಅವ್ವ ಬರೀ ನಿಮ್ಮ ಅಡಿ ಹುಡಿಯನ್ನು ಸ್ವಲ್ಪ ಬೇಡುತ್ತಾಳೆ," ಎಂದು.

ಕಂಗಾಲಿ ಹೊರಡಲು ಸಿದ್ಧನಾದ. ತಾಯಿ ಅವನ ಕೈಹಿಡಿದು ಮತ್ತೆ ಹೇಳಿದಳು: "ಸ್ವಲ್ಪ ಅತ್ತು ಕರೆದು ನೋಡು; ಅವ್ವ ಹೊರಟಿದ್ದಾಳೆ ಎಂದು ತಿಳಿಸು."

ತುಸ ತಡೆದು ಮತ್ತೆಂದಳು: "ತಿರುಗಿ ಬರುವಾಗ ....ರ ಮನೆ ಯಲ್ಲಿ ಸ್ವಲ್ಪ ಅಲತಿಗೆಯ ರಸ ತೆಗೆದುಕೊಂಡು ಬಾ. ಅವಳು ನನಗೆಂದರೆ ಇಲ್ಲೆನ್ನುವುದಿಲ್ಲ. ಅವಳು ನನ್ನ ಮೇಲೆ ಪ್ರೀತಿ ಬಹಳ"

ಪ್ರೀತಿಯೇನೋ ಬಹುಜನರು ಮಾಡುತ್ತಾರೆ, ಅದರಲ್ಲೇನು ಸಂಶಯವಿಲ್ಲ.

ಜ್ವರ ಬಂದ ಬಳಿಕ ಈ ವಸ್ತುಗಳ ಹೆಸರನ್ನು ಹಲವು ಬಾರಿ, ಹಲವು ತೆರದಿಂದ ಕೇಳಿದ್ದ. ಅವನು ಅಲ್ಲಿಂದ ನಡುನಡುಗುತ್ತ ಹೊರಟುಹೋದ.

♥

ಗುರುದಿನ ರಸಿಕನು ಬರುವಷ್ಟು ಹೊತ್ತಿಗೆ ಬಂದು ಸೇರಿದ. ಅಭಾಗಿನಿಯ ಮೈಮೇಲೆ ಅಷ್ಟು ಎಚ್ಚರಿರಲಿಲ್ಲ. ಮೃತ್ಯುವಿನ ನೆರಳು ಮೋರೆಯನ್ನಾವರಿಸಿದೆ. ಕಣ್ಣಿನ ದೃಷ್ಟಿ ಈ ಲೋಕದ ಕೆಲಸವನ್ನೆಲ್ಲ ಮುಗಿಸಿ ಎಲ್ಲಿಗೆ, ಯಾವ ಕಾಣದ ದೇಶಕ್ಕೆ ಹೋಗಿದೆಯೋ ಏನೋ.

"ಅವ್ವಾ, ಅಪ್ಪ ಬಂದಿದ್ದಾನೆ. ಪಾದಧೂಳಿಯನ್ನು ತೆಗೆದು ಕೊಳ್ಳುವುದಿಲ್ಲವೇ?" ಎಂದು ಕಂಗಾಲಿ ಅಳುತ್ತಳುತ್ತ ನುಡಿದ.

ತಾಯಿಗೀ ಮಾತು ತಿಳಿಯಿತೋ ತಿಳಿಯಲಿಲ್ಲವೋ; ಕಿವಿದೆರೆಯ ವರೆಗೂ ಸಂಚಿತವಾಗಿದ್ದ ವಾಸನೆ ಅವಳ ಮುಚ್ಚಿಹೋಗಿದ್ದ ಚೇತನಕ್ಕೆ ತಟ್ಟಿ ತಿಳಿಸಿರಬೇಕು. ಆ ಮೃತ್ಯು ಪಥದಲ್ಲಿ ಯಾತ್ರೆ ಮಾಡುತ್ತಿದ್ದ ಅವಳು ತನ್ನ ಉಸಿರಿಲ್ಲದ ನಡುಗುತ್ತಿರುವ ಕೈಯನ್ನು ಹಾಸಿಗೆಯ ಹೊರಗೆ ಚಾಚಿ ಚೆಲ್ಲಿದಳು.

ರಸಿಕ ಮುಂಗಾಣದೆ ನಿಂತ. ಜಗತ್ತಿನಲ್ಲಿ ತನ್ನ ಪಾದಧೂಳಿಯ ಅಗತ್ಯವೂ ಉಂಟೇ? ಅದನ್ನು ಯಾರಾದರೂ ಕೇಳಬಹುದೆ? ಇದು ಅವನ ಕಲ್ಪನೆಯ ಗತಿಯಾಚೆಯ ಮಾತು.

ಬಿಂದುವಿನ ಬುವಾ ಹೇಳಿದ: “ಕೊಡು ತಮ್ಮಾ, ಸ್ವಲ್ಪ ಪಾದ ಧೂಲಿಯನ್ನು ಕೈಗೆ ಹಚ್ಚು.”

ರಸಿಕ ಮುಂದೆ ಸರಿದ ಸ್ವಲ್ಪ. ತನ್ನಿಡೀ ಜೀವನದಲ್ಲಿ ಪ್ರೀತಿಸಲಿಲ್ಲ, ಹೊಟ್ಟೆಗೆ ಬಟ್ಟೆಗೆ ಕೊಡಲಿಲ್ಲ, ಇದ್ದೀಯಾ ಸತ್ತೀಯಾ ನೋಡಲಿಲ್ಲ; ಸಾಯುವ ಹೊತ್ತಿನಲ್ಲಿ ಅವಳಿಗೆ ಬರೀ ಸ್ವಲ್ಪ ಪಾದಧೂಳಿಯನ್ನು ಕೊಡಬೇಕಾಗಿದೆ! ಅವನು ಅತ್ತುಬಿಟ್ಟ.

ಬಿಂದುವಿನ ತಾಯಿ ಎಂದಳು: “ ಇಂತಹ ಸತೀಲಕ್ಷ್ಮಿಯಾದ ಹೆಂಗುಸು ಬ್ರಾಹ್ಮಣಕಾಯಸ್ಥರ ಮನೆಯಲ್ಲಿ ಹುಟ್ಟಬೇಕಿತ್ತು; ಈ ಜಾತಿಯಲ್ಲಿ ಹೇಗೆ ಹುಟ್ಟಿದಳೋ. ಇನ್ನಿವಳಿಗೆ ಒಳ್ಳೇ ಗತಿಯಾಗುವಂತೆ ಮಾಡು ನನ್ನಮಗನೇ. ಕಂಗಾಲಿಯ ಕೈಬೆಂಕಿಯನ್ನು ಆಸಿಸುತ್ತ ಪ್ರಾಣ ಬಿಟ್ಟಳು ಪುಣ್ಯವಂತಗಿತ್ತಿ !”

ಅಭಾಗಿನಿಯ ಭಾಗ್ಯದೇವತೆ ಅಗೋಚರವಾಗಿ ಕುಳಿತುಕೊಂಡು ಏನು ವಿಚಾರ ಮಾಡುತ್ತಿತ್ತೋ ಯಾರು ಬಲ್ಲರು? ಆ ಮಾತು ಹುಡುಗ ಕಂಗಾಲಿಯ ಎದೆಯಲ್ಲಿ ಬಾಣದಂತೆ ನಟ್ಟಿತು.

ಆ ದಿನವೆಲ್ಲ ಹೋಯಿತು; ರಾತ್ರಿಯೂ ಕಳೆಯಿತು. ಮುಂಜಾನೆಗಾಗಿ ಕಂಗಾಲಿಯ ತಾಯಿ ಪ್ರತೀಕ್ಷಿಸಲಾರದೆ ಹೋದಳು. ತಿಳಿಯದು–ಇಷ್ಟು ಸಣ್ಣ ಜಾತಿಯವರಿಗಾಗಿ ಸ್ವರ್ಗದ ರಥದ ಏರ್ಪಾಡು ಇದೆಯೋ ಇಲ್ಲವೋ, ಅಥವಾ ಕತ್ತಲಲ್ಲಿ ಕಾಲ್ನಡಿಗೆಯಿಂದಲೇ ಹೋಗ ಬೇಕಾದೀತೋ ಏನೋ! ಆದರೆ ಇಷ್ಟು ಮಾತ್ರ ಗೊತ್ತಾಯಿತು, ಇರುಳು ತೀರದ ಮುನ್ನವೇ ಅವಳು ಜಗತ್ತನ್ನು ಬಿಟ್ಟು ಹೊರಟುಹೋಗಿದ್ದಳು.

ಗುಡಿಸಲಿನ ಎದುರಿನಂಗಳದಲ್ಲಿ ಒಂದು ಸಿದಿಹಾಯ್ದು ಗಿಡವಿತ್ತು. ಯಾರಿಂದಲೋ ಕಾಡುಗೋಲು ಇಸಿದುಕೊಂಡು, ರಸಿಕ ಅದರ ಕಡೆ

ಸಾಗಿದ್ದನೋ ಸಾಗಿದ್ದಿಲ್ಲವೋ ಎಲ್ಲಿಂದ ಬಂದನೋ ಯಾರಿಗೆಗೊತ್ತು, ಜಮೀನುದಾರರ ಆಳು ಬಂದು ಅವನ ಕೆನ್ನೆಗೆ ಬೀಸಿ ಫಡಾರನೆ ಏಟು ಕೊಟ್ಟ; ಕುಡುಗೋಲು ಕಸಿದುಕೊಂಡು, "ಇದೇನು ನಿಮ್ಮಪ್ಪನ ಗಿಡವೇನು ಮಗನೇ, ಕಡಿಯಲಿಕ್ಕೆ ಹೊರಟಿದ್ದೀ?" ಎಂದು ಗದರಿದ.

ರಸಿಕ ಕೆನ್ನೆಯ ಮೇಲೆ ಕೈಯಾಡಿಸಿಕೊಂಡ. ಕಂಗಾಲಿಗೆ ರೇಗಿತು. ಅವನೆಂದ, "ಭಲೆ, ಇದು ನಮ್ಮ ತಾಯಿ ಕೈಯಿಂದ ನಟ್ಟು ಬೆಳಸಿದ ಗಿಡ. ಸುಳ್ಳುಸುಳ್ಳೇ ನಮ್ಮಪ್ಪನನ್ನು ಏಕೆ ಹೊಡೆದಿರಿ?"

ಆಳು ಅವನಿಗೂ ಕೇಳಬಾರದ ಬಯ್ಗಳನ್ನು ಬೈದ. ಹೊಡೆಯಬೇಕೆಂದು ಮಾಡಿದ. ಆದರೆ ಅವನು ತನ್ನ ಸತ್ತ ತಾಯಿಯ ಹತ್ತಿರ ಕುಳಿತಿದ್ದ. ಮೈಲಿಗೆಯ ಭಯದಿಂದ ಅವನು ಅವನನ್ನು ಮುಟ್ಟಲಿಲ್ಲ.

ಜನರ ತಂಡ ಕೂಡಿತು. ಕೇಳದೆ ರಸಿಕ ಗಿಡ ಕಡಿಯುವದು ಲೇಸಲ್ಲ ಎಂಬ ಮಾತನ್ನು ಅಲ್ಲೆನ್ನಲಿಲ್ಲ. ತಿರುಗಿ ಆ ಆಳಿಗೆ ಕೈಮುಗಿದು, ಕಾಲಗೆರಗಿ ದಯಮಾಡಿ ಅದಕ್ಕೆ ಅಪ್ಪಣೆ ಕೊಡಬೇಕು ಎಂದು ಬೇಡಿಕೊಂಡರು. ಏಕೆಂದರೆ, ಜಡ್ಡಾದಾಗ ಬಂದು ನೋಡಿದವರು, ಕಂಗಾಲಿಯ ತಾಯ ಬಾಯಿಂದ ಅವಳ ಕೊನೆಯಾಸೆಯನ್ನು ತಿಳಿದಿದ್ದರು.

ಕೈಮುಖ ತಿರುವುತ್ತ ಆಳು ಗುಡುಗಿದ: "ಇದೆಲ್ಲಾ ನನ್ನ ಹತ್ತಿರ ನಡೆಯುವುದಿಲ್ಲ."

ಜಮೀನುದಾರ ಅದೇ ಊರಲ್ಲಿ ಇರುವವನಲ್ಲ. ಊರಲ್ಲಿ ಅವನ ಒಂದು ಚಾವಡಿಯುಂಟು. ಕರಣಿಕ ಅಧರರಾಯನು ಅದರ ಒಡೆಯ. ಜನರು ಇಲ್ಲಿ ಆಳಿನೊಡನೆ ಅನುನಯ ನಡೆಸಿದಾಗ, ಕಂಗಾಲಿ ಓಡುತ್ತೋಡುತ್ತ ಚಾವಡಿಗೆ ನಡೆದ. ಅವನಿಗೆ ಜನರ ಬಾಯಿಂದ ತಿಳಿದಿತ್ತು: ಪೇದೆಗಳೇ ಉದ್ಧಟತನ ಮಾಡುತ್ತಾರೆ; ಆದುದರಿಂದ ಇಂತಹ ಅಸಂಗತ ಮಹಾ ಅತ್ಯಾಚಾರವನ್ನು ಒಡೆಯನ ಕಿವಿಯವರೆಗೆ ಮುಟ್ಟಿಸಿದರೆ ಅದಕ್ಕೆ ಪ್ರತೀಕಾರವಾಗದೆ ಉಳಿಯಲಿಕ್ಕಿಲ್ಲ ಎಂದು ಅವನಿಗೆ ಖಂಡಿತ ಭರವಸೆ. ಅಯ್ಯೋ ತಿಳಿಗೇಡಿ! ಬಂಗಾಲದ ಜಮೀನುದಾರರನ್ನು ಸುತ್ತವರ ಕೆಲಸಗಾರರನ್ನು ಅಳುಕೋಳುಗಳನ್ನು ಅವನು ಅರಿಯ.

ಅಧರರಾಯ ಅದೇ ಸಂಧ್ಯಾ-ಪೂಜಾ ಮತ್ತು ಸ್ವಲ್ಪ ಜಲಪಾನ ತೀರಿಸಿಕೊಂಡು ಹೊರಗೆ ಬಂದು ಕುಳಿತಿದ್ದ. ವಿಸ್ಮಿತನಾಗಿ ಕ್ರುದ್ಧನಾಗಿ ಕೇಳಿದ "ಯಾರು ನೀನು?"

"ನಾನು ಕಂಗಾಲಿ. ನಿಮ್ಮ ಆಳು ನಮ್ಮ ಅಪ್ಪನನ್ನು ಹೊಡೆದ."

"ಚೆಲೋ ಮಾಡಿದ. ಹಪ್ತೆ ಕೊಟ್ಟಿರಲಿಕ್ಕಿಲ್ಲ, ಸೂಳೆಮಗ."

"ಇಲ್ಲ ದನಿಯರೆ, ಅಪ್ಪ ಗಿಡ ಕಡಿಯಬೇಕೆಂದಿದ್ದ. ನಮ್ಮವ್ವ ತೀರಿಕೊಂಡಿದ್ದಾಳೆ...." ಹೇಳುಹೇಳುತ್ತ ಕಂಗಾಲಿ ಅಳುವನ್ನು ತಡೆಯದಾದ; ಅತ್ತುಬಿಟ್ಟ!

ಮುಂಜಾನೆ ಎದ್ದ ಕೂಡಲೆ ಮನೆಗೆ ಬಂದು ಅಳುವುದು ಕರೆಯುವುದು! ಅಧರಬಾಬು ಬಹಳ ಅಪ್ರಸನ್ನನಾದ. ಹುಡುಗ ಹೆಣ ಮುಟ್ಟಿ ಬಂದಿದ್ದಾನೆ. ಯಾರಿಗೆ ಗೊತ್ತು, ಇಲ್ಲಿ ಮತ್ತೇನೇನು ಮುಟ್ಟಿದನೋ ಏನೋ. ಗುಡುಗುಡಿಸಿ ಹೇಳಿದ: ಅವ್ವ ಸತ್ತಳು? ಹಾಗಾದರೆ ನಡೆ, ಕೆಳಗೆ ಹೋಗಿ ನಿಲ್ಲಲ್ಲೆ. ಏ, ಯಾರಿದ್ದೀರೋ, ಇಲ್ಲಿ ಸಗಣಿ ನೀರು ಹಾಕಿರಿ ಸ್ವಲ್ಪ. ಏತರವನೋ ನೀನು?"

ಕಂಗಾಲಿ ಅಂಜಿ ಅಳುಕಿ ಅಂಗಳದಲ್ಲಿ ಇಳಿದು ನಿಂತು "ನಾನು ಮೀನಬಲೆಗಾರರವ."

"ಹೊಲೆಯ! ಎಲಾ, ಮೀನಬಲೆಗಾರರ ಹೆಣಕ್ಕೇಕೋ ಕಟ್ಟಿಗೆ ಬೇಕು?"

"ತಾಯಿ ಸಾಯುವಾಗ ನನಗೆ ಬೆಂಕಿಕೊಡೆಂದು ಹೇಳಿದಳು. ನೀವು ಕೇಳಿಕೊಳ್ಳಿರಿ ಧನಿಯರೇ, ಅವ್ವ ಯಾರು ಯಾರ ಮುಂದೆ ಹೇಳಿದ್ದಾಳೆ ಎಲ್ಲರನ್ನೂ. ಎಲ್ಲರೂ ಕೇಳಿದ್ದಾರೆ ಆಕೆ ಹೇಳಿದ್ದು." ತಾಯಿಯ ವಿಷಯ ತೆಗೆಯುತ್ತಲೇ, ಅವಳ ಕ್ಷಣಕ್ಷಣದ ಪರಿಸ್ಥಿತಿಯೆಲ್ಲ ಒಮ್ಮೆಲೇ ನೆನಪಾಯಿತು ಕಂಗಾಲಿಗೆ. ಅವನ ಕಂಠ ಅಳುವಿನಾವೇಗದಿಂದ ಒಡೆಯುವುದೋ ಎಂಬಂತಾಯಿತು.

"ತಾಯಿಯ ಹೆಣ ಸುಡಬೇಕಾಗಿದ್ದರೆ ಗಿಡದ ಬೆಲೆ ಐದು ರೂಪಾಯಿ ತೆಗೆದುಕೊಂಡು ಬಾ; ತರುತ್ತೀಯಾ?"

ಇದು ಆಗದ ಮಾತೆಂದು ಕಂಗಾಲಿಗೆ ಗೊತ್ತಿತ್ತು. ತಾಯಿಗೆ ಉತ್ತರೀಯವನ್ನು ಕೊಳ್ಳಲು ಹಣ ಬೇಕಾಗಿತ್ತು. ಅದಕ್ಕಾಗಿ ಬಿಂದುವಿನ ಅಪ್ಪ ಊಟದ ತಟ್ಟೆಯನ್ನು ಒತ್ತೆಯಿಡಲು ಒಯ್ದಿದ್ದಾನೆ; ಅದನ್ನು ನೋಡಿಯೇ ಬಂದಿದ್ದ ಬರುವಾಗ. ಅವನು ಗೋಣಲ್ಲಾಡಿಸಿ ಹೇಳಿದ, "ಇಲ್ಲ."

ಅಧರನು ಮುಖ ಮುದ್ರೆಯನ್ನು ವಿಕೃತಗೊಳಿಸಿ ಹೇಳಿದ: "ಇಲ್ಲದಿದ್ದರೆ ನಿಮ್ಮಪ್ಪನನ್ನು ಒಯ್ದು ಹೊಳೆಯ ದಂಡೆಯಲ್ಲಿ ಹುಗಿದುಬಿಡು. ಯಾರಪ್ಪನ ಗಿಡವೆಂದು ನಿಮ್ಮಪ್ಪ ಕಡಿಯುತ್ತಾನೆ ಅದನ್ನು? ಕಳ್ಳ ಸೂಳೆಮಗನನ್ನು ತಂದು."

"ಆ ಗಿಡ ನಮ್ಮ ಅಂಗಳದೊಳಗಿನದು ದೇವರು; ನಮ್ಮ ತಾಯಿಯೇ ಹಚ್ಚಿ ಬೆಳೆಸಿದ್ದು."

"ನಿಮ್ಮ ತಾಯಿ ಹಚ್ಚಿದ್ದು! ಪಾಂಡೇ, ಈ ಹಂದಿಯನ್ನು ಒದೆದು ಓಡಿಸು ಇಲ್ಲಿಂದ!"

ಪಾಂಡೆ ಬಂದು ಅವನನ್ನು ಒದಿಕೆಕೊಟ್ಟು ನೂಕುವಾಗ ಹೀಗೆ ಬಯ್ದ- ಅವನ್ನು ಜಮೀನುದಾರರ ಕೆಲಸಗಾರರು ಮಾತ್ರವೆ ಅರಿತಬಲ್ಲರು.

ಕಂಗಾಲಿ ಎದ್ದು ಮೈಯ ಧೂಳಿ ಜಾಡಿಸಿಕೊಂಡು ಮೆಲ್ಲಮೆಲ್ಲನೆ ಅಲ್ಲಿಂದ ಹೊರ ಹೊರಟು ಹೋದ. ತನ್ನನ್ನು ಏಕೆ ಹೊಡೆದರು, ತನ್ನ ತಪ್ಪೇನಿತ್ತು, ಈ ಹುಡುಗನಿಗೇನು ತಿಳಿಯಲಿಲ್ಲ.

ಅಧರನ ಸರ್ಕಾರ ಮನಸಿನ ಮೇಲೆ ಇವರ ಪರಿಣಾಮವೇನೂ ಮೂಡಲಿಲ್ಲ. ಹಾಗೆ ಆಗುವಂತಿದ್ದರೆ ಈ ಕೆಲಸವೇ ಸಿಕ್ಕುತ್ತಿರಲಿಲ್ಲ ಅವನಿಗೆ ತಿರುಗಿ ಅವನ ಅಪ್ಪಣೆ ಹೊರಟಿತು: "ತೆಗೆದು ನೋಡಿ.

ಇವನ ಹಪ್ತೆಯೇನಾದರೂ ನಿಂತಿದೆಯೋ ಏನೋ. ನಿಂತಿದ್ದರೆ ಮನೆ ಯೊಳಗಿನ ಬಲೆಗಿಲೆ ಏನಿದ್ದದ್ದು ಕಸಿದು ಇಡಿರಿ.—ಲಫಂಗ ಓಡಿ ಹೋದಗೀದಾನು.''

ಮುಖರ್ಜಿಯವರ ಮನೆಯಲ್ಲಿ ಶ್ರಾದ್ಧವಿದೆ—ಇನ್ನು ಒಂದೇ ದಿನ ಬಾಕಿ. ಸಡಗರ, ಸಿದ್ಧತೆ ಒಳ್ಳೆಯ ಭರದಿಂದ—ಗೃಹಿಣಿಯ ಶ್ರಾದ್ಧಕ್ಕೆ ತಕ್ಕ ಹಾಗೆ—ನಡೆದಿದೆ. ವೃದ್ಧ ಠಾಕುರದಾಸನು ತಾನೇ ನಿಂತು ಮೇಲ್ವಿಚಾರಣೆ ಮಾಡುತ್ತ ಅಡ್ಡಾಡುತ್ತಿದ್ದಾನೆ. ಕಂಗಾಲಿ ಹೋಗಿ ಅವನ ಇದಿರು ನಿಂತ.

"ಪಂಡಿತರೆ, ನಮ್ಮವ್ವ ಸತ್ತಳು.''

"ಯಾರು ನೀನು? ಏನು ಬೇಕಾಗಿತ್ತು?''

"ನಾ ಕಂಗಾಲಿ. ತಾಯಿ ಹೇಳಿ ಹೋದಳು, ಆಕೆಗೆ ಬೆಂಕಿ ಕೊಡಬೇಕಂತೆ.''

"ಹಾಗಾದರೆ ಕೊಟ್ಟರಾಯಿತು.''

ಚಾವಡಿಯೊಳಗಾದ ಸಂಗತಿಯು ಸುದ್ದಿ ನಾಲ್ಕು ದಿಕ್ಕಿಗೆ ಹರ ಡಿತ್ತಾಗಳೇ. ಒಬ್ಬವ ಬಂದು ಎಂದ "ಈ ಹುಡುಗನಿಗೆ ಬಹುಶಃ ಒಂದು ಗಿಡ ಬೇಕಾಗಿದೆ.'' ಇಷ್ಟೆಂದು ನಡೆದುದನ್ನೆಲ್ಲ ವಿವರಿಸಿದ.

ಮುಖರ್ಜಿ ಮಹಾಶಯರು ಆಶ್ಚರ್ಯ ಬೇಸರಗಳಿಂದ ನುಡಿ ದರು: "ಕೇಳಿರಿವನದು. ಅಲ್ಲ, ನಮಗೇ ಎಷ್ಟು ಕಟ್ಟಿಗೆ ಬೇಕಾಗಿದೆ–ನಾಳೆ ನಾಡದಿನ ಕೆಲಸ ಒಟ್ಟಿದೆ. ಹೋಗು ಹೋಗು, ಇಲ್ಲೇನೂ ಆಗು ವಂತಿಲ್ಲ.''

ಮುಖರ್ಜಿ ಬೇರೆ ಕಡೆ ಹೊರಟುಹೋದರು. ಭಟ್ಟರು ಶ್ರಾದ್ಧಕ್ಕೆ ತಮ್ಮ ಸಾಮಾನಿನ ಜೋಡಣೆ ಮಾಡುತ್ತ ಅಲ್ಲಿಯೇ ಕುಳಿತಿದ್ದರು. ಅವ ರೆಂದರು: "ನಿಮ್ಮ ಮಂದಿಯೊಳಗೆ ಸುಡುವುದು ಯಾವಾಗ ಬಂತೋ? ಹೋಗು, ಮೋರೆಗೆ ಸ್ವಲ್ಪ ಕೆಂಡ ತಗುಲಿಸಿ ನದಿಯ ದಂಡೆಯಲ್ಲಿ ಹೂಳು.''

ಮುಖರ್ಜಿಯ ಹಿರಿಯ ಮಗ ಕೆಲಸದವಸರದಲ್ಲಿ ಅಲ್ಲಿಯೇ ಹಾಯ್ದು ಎತ್ತಲೋ ಹೋಗುತ್ತಿದ್ದ. ಅವನು ಸ್ವಲ್ಪ ಕಿವಿ ನಿಮಿರಿಸಿ ಕೇಳಿ, "ನೋಡಿದಿರಾ ಭಟ್ಟರೆ, ಇತ್ತಿತ್ತಲಾಗೆ ಎಲ್ಲರೂ ಬ್ರಾಹ್ಮಣ ಕಾಯಸ್ಥರಾಗಬೇಕೆನ್ನುತ್ತಾರೆ" ಎಂದ. ಇಷ್ಟೆಂದು ತನ್ನ ಕೆಲಸಕ್ಕೆ ತಾನು ಹೊರಟುಹೋದ.

ಕಂಗಾಲಿ ಮತ್ತೆ ಯಾರನ್ನೂ ಕೇಳಿಕೊಳ್ಳಲಿಲ್ಲ. ಈ ಎರಡು ಗಂಟೆಗಳ ಅನುಭವದಿಂದ ಜಗತ್ತಿನೊಳಗೆ ಅವನು ಒಮ್ಮೆಲೆ ಮುದುಕನೇ ಆಗಿಹೋಗಿರಬೇಕು. ಅಲ್ಲಿಂದ ಕಾಲೆಳೆಯುತ್ತ ತಾಯ ಹತ್ತಿರ ಬಂದ.

ನದಿಯ ದಡದಲ್ಲಿ ಅಭಾಗಿನಿಯ ಮೈಗೆ ಮಣ್ಣುಕೊಟ್ಟರು. ಬಿಂದುವಿನ ತಾಯಿ ಕಂಗಾಲಿಯ ಕೈಯಲ್ಲಿ ಉರಿಯುವ ಕುರುಳನ್ನು ಕೊಟ್ಟು ತಾಯಿಯ ಮುಖಕ್ಕೆ ಹಚ್ಚಿಸಿದಳು. ಆ ಮೇಲೆ ಎಲ್ಲರೂ ಕೂಡಿ ಮಣ್ಣೆಳೆದು ಕಂಗಾಲಿಯ ತಾಯಿಯ ಅಂತಿಮ ಚಿಹ್ನವನ್ನು ಕೂಡ ಲುಪ್ತಗೊಳಿಸಿದರು.

ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ವ್ಯಸ್ತರಾಗಿದ್ದಾರೆ. ಬರೀ ಕಂಗಾಲಿ. ಆ ಉರಿದುಹೋದ ಕುರುಳಿನಿಂದ ಸ್ವಲ್ಪ ಸ್ವಲ್ಪವಾಗಿ ಹೊಗೆ ಹೊರಡುತ್ತಿದೆ. ಅದು ಮುಗಿಲಲ್ಲಿ ಹಾರಾಡುತ್ತ ಹೋಗುತ್ತಿದೆ. ಅದನ್ನು ದಿಟ್ಟಿಸಿ ನೋಡುತ್ತ ಸ್ತಬ್ಧವಾಗಿ ನಿಂತಿದ್ದಾನೆ!